ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



'ಹೆದ್ದಾರಿಗಳು ಸಾವಿನ ದಾರಿಗಳಾಗಬಾರದು' 5 | ವಿ.ವಿ: ಮಹಿಳಾ ಅಧ್ಯಯನ ಪೀಠ 9

ಹೊರ್ಮುಜ್: ನಿರ್ಬಂಧ ಇನ್ನಷ್ಟು ಬಿಗಿ

ಸತತ ಎರಡನೇ ದಿನವೂ ಹಡಗು ಸಂಚಾರ ಸ್ತಬ್ಧಗೊಳಿಸಿದ ಇರಾನ್

ವಾಷಿಂಗ್ಟನ್/ದುಬೈ (ಎಪಿ/ಎಎಫ್‌ಪಿ): ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸಂಚಾರದ ಮೇಲೆ ಇರಾನ್ ವಿಧಿಸಿರುವ ನಿರ್ಬಂಧ ಭಾನುವಾರವೂ ಮುಂದುವರಿಯಿತು. ಜಲಸಂಧಿ ದಾಟಲು ಯತ್ನಿಸಿದ ಎರಡು ಹಡಗುಗಳಿಗೆ ಎಚ್ಚರಿಕೆ ನೀಡಿ ವಾಪಸ್ ಕಳುಹಿಸಲಾಗಿದೆ.

'ಇರಾನ್ ಬಂದರಿನ ಮೇಲೆ ಅಮೆರಿಕ ಹೇರಿರುವ ದಿಗ್ಬಂಧನ ತೆರವುಗೊಳಿಸುವವರೆಗೆ ಹೊರ್ಮುಜ್‌ನಲ್ಲಿ ನಿರ್ಬಂಧ ಮುಂದುವರಿಯಲಿದೆ' ಎಂದು ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್ (ಐಆರ್‌ಜಿಸಿ) ಹೇಳಿದೆ. ಈ ಬೆಳವಣಿಗೆಯಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ದರ ಮತ್ತೆ ಏರಿಕೆಯಾಗುವ ಆತಂಕ ಮೂಡಿದೆ.

'ನಮ್ಮ ಹಡಗುಗಳ ಸಂಚಾರ ಸಾಧ್ಯವಾಗದಿದ್ದಾಗ ಇತರ ದೇಶಗಳ ಹಡಗುಗಳು ಹೊರ್ಮುಜ್ ಜಲಸಂಧಿ ಮೂಲಕ ಹಾದುಹೋಗುವುದು ಅಸಾಧ್ಯ' ಎಂದು ಇರಾನ್ ಸಂಸತ್‌ನ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್ ಶನಿವಾರ ರಾತ್ರಿ ಸರ್ಕಾರಿ ಸುದ್ದಿವಾಹಿನಿಗೆ ತಿಳಿಸಿದ್ದಾರೆ.

'ಅನುಮತಿ ಪಡೆಯದೆ ಜಲಸಂಧಿ ಮೂಲಕ ಹಾದುಹೋಗುವ ಯಾವುದೇ ಪ್ರಯತ್ನವನ್ನು 'ಶತ್ರುಗಳೊಂದಿಗಿನ ಸಹಕಾರ'ವೆಂದೇ ಪರಿಗಣಿಸಲಾಗುತ್ತದೆ. ಅಂತಹ ಹಡಗುಗಳನ್ನು ಗುರಿಯಾಗಿಸಲಾಗುವುದು' ಎಂದು ಐಆರ್‌ಜಿಸಿ ಎಚ್ಚರಿಸಿದೆ.

ಹೊರ್ಮುಜ್ ಮೂಲಕ ಸಾಗಲು ಯತ್ನಿಸಿದ ಭಾರತದ ಧ್ವಜ ಹೊಂದಿದ್ದ ಎರಡು ಹಡಗುಗಳ ಮೇಲೆ ಇರಾನ್ ಶನಿವಾರ ಗುಂಡಿನ ದಾಳಿ ನಡೆಸಿತ್ತು. ಅದರ ಬೆನ್ನಲ್ಲೇ ಈ ಜಲಸಂಧಿಯಲ್ಲಿ ಹಡಗುಗಳ ಸಂಚಾರ ಸಂಪೂರ್ಣ ಸ್ತಬ್ಧಗೊಂಡಿದೆ. 10



ಅಮೆರಿಕದ ಎಎಚ್–64 ಅಪಾಚೆ ಹೆಲಿಕಾಪ್ಟರ್‌ಗಳು ಹೊರ್ಮುಜ್ ಜಲಸಂಧಿ ಮೇಲೆ ಹಾರಾಟ ನಡೆಸಿದವು –ಎಎಫ್‌ಪಿ ಚಿತ್ರ

ದಿನದ ಬೆಳವಣಿಗೆ

- ಮಶಾದ್ ವಿಮಾನ ನಿಲ್ದಾಣದಿಂದ ಅಂತರರಾಷ್ಟ್ರೀಯ ವಿಮಾನ ಸಂಚಾರವನ್ನು ಸೋಮವಾರ ಆರಂಭಿಸುವುದಾಗಿ ಇರಾನ್ ಹೇಳಿದೆ
- ಇರಾನ್–ಅಮೆರಿಕ ನಡುವಿನ ಎರಡು ವಾರಗಳ ಕದನ ವಿರಾಮ ವಿಸ್ತರಣೆ ಆಗಬೇಕೆಂದು ಬಯಸುವುದಾಗಿ ಟರ್ಕಿಯ ವಿದೇಶಾಂಗ ಸಚಿವ ಹಕನ್ ಫಿದಾನ್ ತಿಳಿಸಿದ್ದಾರೆ

ಎರಡನೇ ಸುತ್ತಿನ ಮಾತುಕತೆ ಖಚಿತಪಡಿಸಿದ ಟ್ರಂಪ್


'ಇರಾನ್ ಜತೆ ಎರಡನೇ ಸುತ್ತಿನ ಮಾತುಕತೆಗಾಗಿ ಅಮೆರಿಕದ ನಿಯೋಗವು ಪಾಕಿಸ್ತಾನಕ್ಕೆ ಸೋಮವಾರ ಭೇಟಿ ನೀಡಲಿದೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ಹೇಳಿದ್ದಾರೆ.

'ನಮ್ಮ ಜತೆ ಶಾಂತಿ ಒಪ್ಪಂದ ಮಾಡಿಕೊಳ್ಳದಿದ್ದರೆ ಇರಾನ್‌ನ ಎಲ್ಲ ವಿದ್ಯುತ್ ಸ್ಥಾವರಗಳು ಮತ್ತು ಸೇತುವೆಗಳನ್ನು ನಾಶಪಡಿಸುತ್ತೇವೆ' ಎಂದು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಮತ್ತೆ ಎಚ್ಚರಿಸಿದ್ದಾರೆ. ಆದರೆ, ಎರಡನೇ ಸುತ್ತಿನ ಮಾತುಕತೆಯ ಬಗ್ಗೆ ಇರಾನ್ ನಿರ್ಧರಿಸಿಲ್ಲ.

ಹೊರ್ಮುಜ್ ಜಲಸಂಧಿ ವಿಚಾರದಲ್ಲಿ ಎರಡೂ ದೇಶಗಳ ನಡುವೆ ಉದ್ವಿಗ್ನ ಸ್ಥಿತಿ ಮುಂದುವರಿದಿರುವಂತೆಯೇ ಟ್ರಂಪ್ ಈ ಘೋಷಣೆ ಮಾಡಿದ್ದಾರೆ. ಅಮೆರಿಕ–ಇರಾನ್ ನಡುವಿನ ಎರಡು ವಾರಗಳ ಕದನ ವಿರಾಮ ಏಪ್ರಿಲ್ 22ರಂದು ಕೊನೆಗೊಳ್ಳಲಿದೆ.

'ನನ್ನ ಪ್ರತಿನಿಧಿಗಳು ಸೋಮವಾರ ಇಸ್ಲಾಮಾಬಾದ್‌ಗೆ ಪ್ರಯಾಣಿಸಲಿದ್ದಾರೆ. ಮಂಗಳವಾರ ಬೆಳಿಗ್ಗೆ ಮಾತುಕತೆ ಆರಂಭವಾಗಲಿದೆ' ಎಂದು ಟ್ರಂಪ್ 'ಫಾಕ್ಸ್ ನ್ಯೂಸ್'ಗೆ ತಿಳಿಸಿದ್ದಾರೆ.

ವ್ಯಾನ್ಸ್ ನೇತೃತ್ವ–ಶ್ವೇತಭವನ: ಪಾಕಿಸ್ತಾನದಲ್ಲಿ ನಡೆಯಲಿರುವ ಎರಡನೇ ಸುತ್ತಿನ ಮಾತುಕತೆಯಲ್ಲಿ ಪಾಲ್ಗೊಳ್ಳುವ ಅಮೆರಿಕದ ನಿಯೋಗವನ್ನು ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಮುನ್ನಡೆಸಲಿದ್ದಾರೆ ಎಂದು ಶ್ವೇತಭವನ ಹೇಳಿದೆ. 'ಭದ್ರತೆಯ ಕಾರಣಗಳಿಂದಾಗಿ ವ್ಯಾನ್ಸ್ ಅವರು ಮಾತುಕತೆಗೆ ಪಾಕಿಸ್ತಾನಕ್ಕೆ ತೆರಳುತ್ತಿಲ್ಲ' ಎಂದು ಇದಕ್ಕೂ ಮುನ್ನ ಟ್ರಂಪ್ ಅವರು ಎಬಿಸಿ ನ್ಯೂಸ್‌ಗೆ ತಿಳಿಸಿದ್ದರು. ಆದರೆ ಶ್ವೇತಭವನದ ಅಧಿಕಾರಿಯೊಬ್ಬರು ವ್ಯಾನ್ಸ್ ತೆರಳುವುದನ್ನು ಖಚಿತಪಡಿಸಿದ್ದಾರೆ.



ಪಶ್ಚಿಮ ಏಷ್ಯಾ ವ್ಯವಹಾರಗಳ ಕುರಿತ ಅಮೆರಿಕದ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್ ಮತ್ತು ಟ್ರಂಪ್ ಅಳಿಯ ಹಾಗೂ ಶ್ವೇತಭವನದ ಸಲಹೆಗಾರ ಜಾರೆಡ್ ಕಶ್ನರ್ ಅವರೂ ಪಾಲ್ಗೊಳ್ಳಲಿದ್ದಾರೆ. ಈ ಮೂವರು ಮೊದಲ ಸುತ್ತಿನ ಮಾತುಕತೆಯಲ್ಲೂ ಪಾಲ್ಗೊಂಡಿದ್ದರು.

> ಇರಾನ್ ಬಂದರುಗಳ ಮೇಲೆ ಅಮೆರಿಕ ಹೇರಿರುವ ದಿಗ್ಬಂಧನವು 'ಕಾನೂನುಬಾಹಿರ ಹಾಗೂ ಕ್ರಿಮಿನಲ್' ಕೃತ್ಯವಾಗಿದ್ದು, ಕದನ ವಿರಾಮದ ಉಲ್ಲಂಘನೆಯಾಗಿದೆ
> **ಇಸ್ಮಾಯಿಲ್ ಬಘಾಯಿ,** ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ

> ಹೊರ್ಮುಜ್ ಜಲಸಂಧಿ ದಾಟಲು ಯತ್ನಿಸಿದ ಹಡಗುಗಳ ಮೇಲೆ ಇರಾನ್ ಪಡೆಗಳು ಶನಿವಾರ ಗುಂಡು ಹಾರಿಸುವ ಮೂಲಕ ಕದನ ವಿರಾಮ ಒಪ್ಪಂದ ಉಲ್ಲಂಘಿಸಲಾಗಿದೆ
> **ಡೊನಾಲ್ಡ್ ಟ್ರಂಪ್,** ಅಮೆರಿಕದ ಅಧ್ಯಕ್ಷ

ಇಸ್ರೇಲ್ ಯೋಧ ಬಲಿ

ಲೆಬನಾನ್‌ನಲ್ಲಿ ಕಾರ್ಯಾಚರಣೆ ವೇಳೆ ತನ್ನ ಒಬ್ಬ ಯೋಧ ಮೃತಪಟ್ಟಿರುವುದಾಗಿ ಇಸ್ರೇಲ್ ಭಾನುವಾರ ಹೇಳಿದೆ. ಇದರೊಂದಿಗೆ 12 ಗಂಟೆಗಳಲ್ಲಿ ಇಸ್ರೇಲ್ ತನ್ನ ಇಬ್ಬರು ಯೋಧರನ್ನು ಕಳೆದುಕೊಂಡಿದೆ. ಒಬ್ಬ ಯೋಧ ಗಂಭೀರವಾಗಿ ಗಾಯಗೊಂಡಿದ್ದು, ಇತರ ಎಂಟು ಮಂದಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಲೆಬನಾನ್ ವಿರುದ್ಧ ದಾಳಿ ಆರಂಭಿಸಿದ ಬಳಿಕ ಮೃತಪಟ್ಟ ಇಸ್ರೇಲ್‌ನ ಸೈನಿಕರ ಸಂಖ್ಯೆ 15ಕ್ಕೆ ಏರಿಕೆಯಾಗಿದೆ.

ನದಿಯಲ್ಲಿ ಮುಳುಗಿ 6 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಕೆ.ಆರ್. ನಗರ (ಮೈಸೂರು ಜಿಲ್ಲೆ): ಹೊರವಲಯದ ಅರ್ಕೇಶ್ವರ ದೇಗುಲದ ಬಳಿ ಕಾವೇರಿ ನದಿಯಲ್ಲಿ ಭಾನುವಾರ ಈಜಾಡುತ್ತಿದ್ದ ವೇಳೆ, ಇಬ್ಬರು ಮಕ್ಕಳು ಸೇರಿ ಆರು ಮಂದಿ ಮುಳುಗಿ ಸಾವಿಗೀಡಾದರು.

ಮೈಸೂರಿನ ಉದಯಗಿರಿಯವರಾದ, ಸದ್ಯ ಊಟಿಯ ನಿವಾಸಿ ಫಾತಿಮಾ ಸೈಯದ್ (35), ಬೆಂಗಳೂರಿನ ಎಸ್‌ಬಿಆರ್ ಲೇಔಟ್‌ನ ಆಟೊ ಚಾಲಕ ಮಹಮ್ಮದ್ ಯಾಸೀನ್ (23), ನೇಹಾ ಕೌಸರ್ (20), ಮೈಸೂರಿನ ಉದಯಗಿರಿಯ ಉಮೇರ್ (7), ಬೆಂಗಳೂರಿನ ಹೈಮಾ (13) ಹಾಗೂ ಕೆ.ಆರ್.ನಗರ ಮುಸ್ಲಿಂ ಬ್ಲಾಕ್‌ನ ಆಫಿಯಾ (20) ಮೃತಪಟ್ಟವರು. 9

₹5 ಲಕ್ಷ ಪರಿಹಾರ ಘೋಷಿಸಿದ ಸಿ.ಎಂ

'ಆರು ಮಂದಿ ನೀರುಪಾಲಾದ ವಿಚಾರ ತಿಳಿದು ದುಃಖವಾಯಿತು. ಮೃತರ ಕುಟುಂಬದವರಿಗೆ ಅಗಲಿಕೆಯ ದುಃಖ ಭರಿಸುವ ಶಕ್ತಿ ಸಿಗಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ 'ಎಕ್ಸ್' ಮೂಲಕ ತಿಳಿಸಿದ್ದಾರೆ.

'ಕುಟುಂಬಕ್ಕೆ ಆರ್ಥಿಕ ಸವಾಲುಗಳು ಬಾಧಿಸದಿರಲೆಂಬ ಮಾನವೀಯ ಕಾಳಜಿಯೊಂದಿಗೆ ತಲಾ ₹5 ಲಕ್ಷ ಪರಿಹಾರ ನೀಡಲಾಗುವುದು' ಎಂದು ಘೋಷಿಸಿದ್ದಾರೆ.

ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ: 23ಕ್ಕೂ ಹೆಚ್ಚು ಸಾವು

ವಿರುಧುನಗರ (ತಮಿಳುನಾಡು) (ಪಿಟಿಐ): ಇಲ್ಲಿಗೆ ಸಮೀಪದ ಕಟ್ಟನಾರಪಟ್ಟಿ ಪ್ರದೇಶದ ಪಟಾಕಿ ತಯಾರಿಕಾ ಘಟಕವೊಂದರಲ್ಲಿ ಭಾನುವಾರ ಸಂಭವಿಸಿದ ಭಾರಿ ಸ್ಫೋಟದಲ್ಲಿ 23ಕ್ಕೂ ಹೆಚ್ಚು ಮಂದಿ ಕಾರ್ಮಿಕರು ಮೃತಪಟ್ಟಿದ್ದಾರೆ.

'ಸ್ಫೋಟ ನಡೆದಾಗ ಘಟಕದಲ್ಲಿ 100ಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಸಿದ್ಧಪಡಿಸಲಾಗಿದ್ದ ಪಟಾಕಿಗಳಿಗೆ ಕೆಲವರು ವರಾಂಡದಲ್ಲಿ ಕುಳಿತು ಅಂತಿಮ ಸ್ಪರ್ಶ ನೀಡುವಾಗ ಅವಘಡ ಸಂಭವಿಸಿದೆ.

ಸ್ಫೋಟದ ತೀವ್ರತೆಗೆ ಮೂರು ಕೊಠಡಿಗಳು ಸಂಪೂರ್ಣ ನೆಲಕಚ್ಚಿವೆ. ಇಟ್ಟಿಗೆಗಳು ಸಿಡಿದು ಇಡೀ ಆವರಣದ ತುಂಬ ಚಲ್ಲಾಪಿಲ್ಲಿಯಾಗಿ ಬಿದ್ದಿವೆ. ಹಲವು ಕೊಠಡಿಗಳ ಗೋಡೆಗಳು ಬಿರುಕು ಬಿಟ್ಟಿವೆ. ದಟ್ಟ ಹೊಗೆ ಮತ್ತು ಬೆಂಕಿ ಬಾನೆತ್ತರ ಎದ್ದಿರುವ ದೃಶ್ಯ ಕಂಡುಬಂತು' ಎಂದು ಅಗ್ನಿಶಾಮಕ ದಳದ ಮೂಲಗಳು ತಿಳಿಸಿವೆ.

'ಇದುವರೆಗೆ 23 ಮೃತದೇಹಗಳನ್ನು ಹೊರತೆಗೆಯಲಾಗಿದೆ. ಆದರೆ, ಹೆಚ್ಚಿನ ದೇಹಗಳು ಗುರುತಿಸಲಾಗದಷ್ಟು ಛಿದ್ರಗೊಂಡಿವೆ. ಆರು ಮಂದಿ ಗಂಭೀರವಾಗಿ ಗಾಯಗೊಂಡಿದ್ದು ವಿರುಧುನಗರ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಸಾವು–ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾರೆ. 5



ತಮಿಳುನಾಡಿನ ವಿರುಧುನಗರ ಸಮೀಪದ ಕಟ್ಟನಾರಪಟ್ಟಿ ಪ್ರದೇಶದಲ್ಲಿ ಸಂಭವಿಸಿದ ಸ್ಫೋಟದಲ್ಲಿ ಪಟಾಕಿ ತಯಾರಿಕಾ ಘಟಕದ ಕಟ್ಟಡ ಕುಸಿದು ಬಿದ್ದಿರುವುದು –ಪಿಟಿಐ ಚಿತ್ರ

ಹಿರಿಯ ಅಧಿಕಾರಿಗಳ ವೇತನದ ಶೇ 30ರಷ್ಟಕ್ಕೆ ತಡೆ

ಶಿಮ್ಲಾ (ಪಿಟಿಐ): ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿರುವ ಹಿಮಾಚಲ ಪ್ರದೇಶ ರಾಜ್ಯ ಸರ್ಕಾರವು, ತನ್ನ ಹಿರಿಯ ಅಧಿಕಾರಿಗಳ ವೇತನದಲ್ಲಿ ಶೇಕಡ 20ರಿಂದ ಶೇ 30ರಷ್ಟನ್ನು ಆರು ತಿಂಗಳವರೆಗೆ ತಡೆಹಿಡಿಯಲು ಆದೇಶ ಹೊರಡಿಸಿದೆ. ಮೇ ತಿಂಗಳಿನಿಂದ ಈ ಕ್ರಮ ಜಾರಿಗೆ ಬರಲಿದೆ.

ಮುಖ್ಯ ಕಾರ್ಯದರ್ಶಿ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿ, ಪೊಲೀಸ್ ಮಹಾನಿರ್ದೇಶಕರು, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿ ಕಾರಿ ಮತ್ತು ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ವೇತನದ ಶೇ 30ರಷ್ಟನ್ನು ತಡೆಹಿಡಿಯಲಾಗುತ್ತದೆ.

ಅಲ್ಲದೇ, ಕಾರ್ಯದರ್ಶಿಗಳು, ಇಲಾಖೆಗಳ ಮುಖ್ಯಸ್ಥರು, ಐಜಿಪಿಗಳು, ಡಿಐಜಿಗಳು, ಎಸ್‌ಪಿಗಳು ಮತ್ತು ಎಸ್‌ಪಿ ದರ್ಜೆಯ ಅಧಿಕಾರಿಗಳು, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಜಿಲ್ಲಾ ಅರಣ್ಯ ಸಂರಕ್ಷಣಾಧಿ ಕಾರಿ ದರ್ಜೆವರೆಗಿನ ಎಲ್ಲ ಅಧಿಕಾರಿಗಳ ವೇತನದಲ್ಲಿ ಶೇ 20ರಷ್ಟನ್ನು ತಡೆಹಿಡಿಯ ಲಾಗುವುದು ಎಂದು ಹಣಕಾಸು ಇಲಾಖೆ ಭಾನುವಾರ ಹೊರಡಿಸಿರುವ ಅಧಿಸೂಚನೆಯಲ್ಲಿ ತಿಳಿಸಿದೆ.

'ರಾಜ್ಯದ ಆರ್ಥಿಕತೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಇದು ತಾತ್ಕಾಲಿಕ ಸ್ವರೂಪದ್ದಾಗಿದೆ. ಮುಂದೂಡಲ್ಪಟ್ಟ ವೇತನವನ್ನು ಕಡಿತ ಎಂದು ಪರಿಗಣಿಸಲಾಗುವುದಿಲ್ಲ. ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿಯ ಆಧಾರದ ಮೇಲೆ ಮುಂದಿನ ದಿನಗಳಲ್ಲಿ ಬಿಡುಗಡೆ ಮಾಡಲಾಗುವುದು' ಎಂದು ಇಲಾಖೆ ಹೇಳಿದೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ




ಸರಳ, ಸಜ್ಜನ, ಜನಪರ, ಧೀಮಂತ ನಾಯಕ ಮತ್ತು ಸಮಾಜ ಕಲ್ಯಾಣ ಸಚಿವರಾದ
ಡಾ. ಹೆಚ್.ಸಿ. ಮಹಾದೇವಪ್ಪರವರಿಗೆ
ಹಾಗೂ
ಡಾ. ಹೆಚ್.ಎಂ. ಅನಿತ ಬೋಸ್‌ರವರಿಗೆ
ಜನ್ಮದಿನದ ಶುಭಾಶಯಗಳು
Happy Birthday
Dr. H C Mahadevappa
Hon'ble Minister for Social Welfare
Dr. H M Anitha Bose
ಶುಭಕೋರುವವರು :
HRC

ತಿರುಮೇನಹಳ್ಳಿ ಕೆರೆಗೆ ಕಲುಷಿತ ನೀರು

ವಿಷಕಾರಿ ನೀರಿನಲ್ಲಿ ಸಾಯುತ್ತಿರುವ ಮೀನು • ವಾಯು ವಿಹಾರ ನಿಲ್ಲಿಸಿದ ಸ್ಥಳೀಯರು

• ಡಿ.ಸುರೇಶ್

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಸಂಪಿಗೇಹಳ್ಳಿ ವಾರ್ಡ್ ವ್ಯಾಪ್ತಿಯ ತಿರುಮೇನಹಳ್ಳಿ ಕೆರೆಗೆ ಸುತ್ತಮುತ್ತಲ ಅಪಾರ್ಟ್‌ಮೆಂಟ್‌ಗಳು ಹಾಗೂ ವಿಲ್ಲಾಗಳಿಂದ ಹರಿದುಬರುವ ಕೊಳಚೆ ನೀರು ಸೇರುತ್ತಿದೆ. ಇದರಿಂದ ಕೆರೆಯ ನೀರು ಕಲುಷಿತಗೊಂಡಿದೆ.

20 ಎಕರೆ ವಿಸ್ತೀರ್ಣದ ಕೆರೆಯನ್ನು ಲಕ್ಷಾಂತರ ರೂಪಾಯಿ ಖರ್ಚುಮಾಡಿ, ತಂತಿಬೇಲಿ, ಕಲ್ಲಿನ ಹೊದಿಕೆ, ನಡಿಗೆ ಪಥ ಹಾಗೂ ವಿಶ್ರಾಂತಿಗಾಗಿ ಆಸನಗಳ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಮೂರು ಚಿಕ್ಕ ನಡುಗಡ್ಡೆಗಳು, ಸುತ್ತಲೂ ಹಸಿರು ವಾತಾವರಣ, ತೆರೆದ ಜಿಮ್ ಹಾಗೂ ಮಕ್ಕಳ ಆಟದ ಸಾಮಗ್ರಿಗಳನ್ನು ಅಳವಡಿಸಲಾಗಿದೆ. ಕೆರೆಯ ಪಕ್ಕದಲ್ಲೇ ಹೊಸದಾಗಿ ರಾಜಕಾಲುವೆಯನ್ನೂ ನಿರ್ಮಿಸಲಾಗಿದೆ. ಆದರೆ ಸುತ್ತಮುತ್ತಲಿನ ಅಪಾರ್ಟ್‌ಮೆಂಟ್‌ಗಳು ಮತ್ತು ವಿಲ್ಲಾಗಳಿಂದ ಕೊಳಚೆ ನೀರು ನೇರವಾಗಿ ಕೆರೆಗೆ ಸೇರುತ್ತಿರುವುದು ಪರಿಸರ ಹಾನಿಗೆ ಕಾರಣವಾಗಿದೆ. ಇದನ್ನು ತಡೆಗಟ್ಟಬೇಕೆಂದು ಬೆಂಗಳೂರು ಜಲಮಂಡಳಿ ಮತ್ತು ಪಾಲಿಕೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ ಎಂದು ಸ್ಥಳೀಯರು ಆರೋಪಿಸಿದ್ದಾರೆ.


ಎನ್‌. ನರಸಿಂಹ ಮೂರ್ತಿ

ಅಗ್ರಹಾರ ಬಡಾವಣೆಯ ಸುತ್ತಮುತ್ತಲ ಅಪಾರ್ಟ್‌ಮೆಂಟ್‌ಗಳು ಹಾಗೂ ಹೆಗಡೆನಗರ ಮುಖ್ಯ ರಸ್ತೆಯ ಹಜ್ ಭವನದ ಕಡೆಯಿಂದ ರಾಜಕಾಲುವೆ ಮೂಲಕ ಹರಿದುಬರುವ ಕೊಳಚೆ ನೀರು ನೇರವಾಗಿ ಕೆರೆಗೆ ಸೇರುತ್ತಿದೆ. ಕೆರೆ ಪಕ್ಕದಲ್ಲೇ ತಿರುಮೇನಹಳ್ಳಿ ಅಗ್ರಹಾರ ಬಡಾವಣೆ ಮುಖ್ಯರಸ್ತೆಯು ಹಾದುಹೋಗಿದೆ. ಈ ಮಾರ್ಗದಲ್ಲಿ ಪ್ರತಿದಿನ ಸಂಚರಿಸುವ ಸಾವಿರಾರು ವಾಹನ ಸವಾರರು, ಪಾದಚಾರಿಗಳು ಮತ್ತು ವಾಯು ವಿಹಾರಿಗಳು ಕಿರಿಕಿರಿ ಅನುಭವಿಸುವಂತಾಗಿದೆ ಎಂದು ಅಗ್ರಹಾರ ಬಡಾವಣೆ ನಿವಾಸಿ ಎನ್. ನರಸಿಂಹಮೂರ್ತಿ ದೂರಿದರು.


ರಾಜಕಾಲುವೆ ಮೂಲಕ ಕೆರೆಗೆ ಸೇರುತ್ತಿರುವ ಕಲುಷಿತ ನೀರು

ಈ ಹಿಂದೆ ಕೆರೆಯಲ್ಲಿ ನೆಲಸಿದ್ದ ವಿವಿಧ ಪಕ್ಷಿಗಳು, ಈಗ ಬೇರೆಡೆಗೆ ವಲಸೆ ಹೋಗಿವೆ. ವಿಷಕಾರಿ ನೀರಿನ ಪರಿಣಾಮ, ಮೀನುಗಳು ನಿರಂತರವಾಗಿ ಸಾಯುತ್ತಿವೆ. ಅಲ್ಲದೆ ಕೆರೆಯ ಸುತ್ತಲಿನ ಪ್ರದೇಶಗಳ ಕೊಳವೆಬಾವಿಗಳಲ್ಲೂ ಅಂತರ್ಜಲ ಕಲುಷಿತಗೊಂಡು ಕುಡಿಯಲು ಯೋಗ್ಯವಿಲ್ಲದಂತಾಗಿದೆ. ಕೆರೆಯ ಸಮೀಪದಲ್ಲೇ ವಾಸದ ಮನೆಗಳಿದ್ದು, ಸೊಳ್ಳೆಗಳ ಕಾಟ ಹೆಚ್ಚಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೆರೆ ಸುತ್ತ ವಿದ್ಯುತ್ ಕಂಬಗಳಿದ್ದರೂ ದೀಪಗಳು ಉರಿಯುತ್ತಿಲ್ಲ. ಇತ್ತೀಚೆಗೆ ಜನರು ವಾಯುವಿಹಾರಕ್ಕೆ ಬರುವುದನ್ನೇ ನಿಲ್ಲಿಸಿದ್ದಾರೆ ಎಂದು ದೂರಿದರು.


ಸಿದ್ದಪ್ಪ

ಕೆರೆಯಲ್ಲಿ ಅಳವಡಿಸಿದ್ದ ತೆರೆದ ಜಿಮ್ ಹಾಗೂ ಮಕ್ಕಳ ಆಟದ ಉಪಕರಣಗಳು ಹಾಳಾಗಿವೆ. ಭದ್ರತಾ ಸಿಬ್ಬಂದಿಗೆ ಪ್ರತ್ಯೇಕ ಕೊಠಡಿ ಇಲ್ಲ. ಸಿಸಿಟಿವಿ ಕ್ಯಾಮೆರಾ ಕಾರ್ಯನಿರ್ವಹಿಸುತ್ತಿಲ್ಲ. ಶೌಚಾಲಯ ಇದ್ದರೂ ನೀರಿನ ಸೌಲಭ್ಯ ಸಮರ್ಪಕವಾಗಿಲ್ಲ ಎಂದು ಸ್ಥಳೀಯ ನಿವಾಸಿ ಸಿದ್ದಪ್ಪ ದೂರಿದರು.

ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕೆರೆಯನ್ನು ಶುದ್ಧಗೊಳಿಸಿ, ಕೊಳಚೆ ನೀರು ಸೇರದಂತೆ ತಡೆಗಟ್ಟಬೇಕು. ಅವ್ಯವಸ್ಥೆಗಳನ್ನು ಸರಿಪಡಿಸಿ, ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕು ಎಂದು ಅವರು ಒತ್ತಾಯಿಸಿದರು.

ಶೀಘ್ರ ನೋಟಿಸ್

ಹೆಗಡೆನಗರ ಮುಖ್ಯರಸ್ತೆಯ ಹಜ್ ಭವನದ ಮುಂಭಾಗದ ಪಾದಚಾರಿ ಮಾರ್ಗದಲ್ಲಿ ಚೇಂಬರ್ ಕಟ್ಟಿಕೊಂಡಿತ್ತು. ಈಗಾಗಲೇ ಅದನ್ನು ದುರಸ್ತಿಗೊಳಿಸಿ, ಒಳಚರಂಡಿಗೆ ಸಂಪರ್ಕ ಕಲ್ಪಿಸಿ, ರಾಜಕಾಲುವೆ ಮೂಲಕ ಕೆರೆಗೆ ಸೇರುತ್ತಿದ್ದ ಕೊಳಚೆ ನೀರನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗಿದೆ. ಅಪಾರ್ಟ್‌ಮೆಂಟ್‌ಗಳಿಂದ ಕೊಳಚೆ ನೀರು ಹರಿದು ಬರುತ್ತಿರುವ ಬಗ್ಗೆ ಪರಿಶೀಲನೆ ನಡೆಸಿ, ಸಂಬಂಧಿಸಿದವರಿಗೆ ತಕ್ಷಣ ನೋಟಿಸ್ ನೀಡಿ, ಅಗತ್ಯಕ್ರಮ ಕೈಗೊಳ್ಳಲಾಗುವುದು ಎಂದು ಬೆಂಗಳೂರು ಜಲಮಂಡಳಿ ಉತ್ತರ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮಂಜುನಾಥ ಹೊಸಮನಿ ತಿಳಿಸಿದ್ದಾರೆ.

‘ರಾಮಾಯಣ ನಮ್ಮ ಸಂಸ್ಕಾರದ ಭಾಗ’

‘ಎಕೋಸ್ ಫ್ರಮ್ ರಾಮಾಯಣ’ ಜನಾರ್ಪಣೆಯಲ್ಲಿ ಚಿರಂಜೀವಿ ಸಿಂಘ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಮಾಯಣವನ್ನು ಯಾರೂ ಮೊದಲ ಬಾರಿಗೆ ಓದುವುದಿಲ್ಲ. ಅದು ನಮ್ಮ ಸಂಸ್ಕಾರದ ಭಾಗವೇ ಆಗಿರುವುದರಿಂದ ಸದಾ ಮರು ಓದಿಗೆ ಒಳಪಡುತ್ತಿರುತ್ತೇವೆ’ ಎಂದು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವ್ ಸಿಂಘ್ ತಿಳಿಸಿದರು.

ಭಾರತೀಯ ವಿದ್ಯಾಭವನದಲ್ಲಿ ಭಾನುವಾರ ಆಯೋಜಿಸಿದ್ದ ಕೆ.ಜಿ. ರಾಘವನ್ ಅವರ ‘ಎಕೋಸ್ ಫ್ರಮ್ ರಾಮಾಯಣ’ ಜನಾರ್ಪಣೆ ಮತ್ತು ಪದ್ಮಭೂಷಣ ಪುರಸ್ಕೃತರಾದ ಶತಾವಧಾನಿ ಆರ್. ಗಣೇಶ್ ಅವರಿಗೆ ಗೌರವಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಈ ಪುಸ್ತಕವು ಒಣ ಶೈಕ್ಷಣಿಕ ಪಠ್ಯವಲ್ಲ. ಬದಲಾಗಿ ಭಕ್ತಿಪೂರ್ವಕ ಮಂಥನ. ರಾಘವನ್ ಅವರ ಪುಸ್ತಕವು ಕಾಡು, ಪರಿಸರ ಮತ್ತು ಮಹಾಕಾವ್ಯದಲ್ಲಿ ಮಹಿಳೆಯರ ಪಾತ್ರವನ್ನು ಅನ್ವೇಷಿಸುವ ಮೂಲಕ ಧರ್ಮಬದ್ಧ ಜೀವನಕ್ಕೆ ಮಾರ್ಗದರ್ಶಿಯಾಗಿದೆ’ ಎಂದು ಹೇಳಿದರು.

ಒಡಿಶಾ ಹೈಕೋರ್ಟ್‌ನ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಮಾತನಾಡಿ, ‘ನಿಜವಾದ ಪಾಂಡಿತ್ಯವನ್ನು ಹಗೆತನದಿಂದ ನೋಡುವ ಪರಿಸ್ಥಿತಿ ಈಗ ಇದೆ. ಗಣೇಶ್ ಅವರಂತಹ ವಿದ್ವಾಂಸರಿಗೆ ದೇಶದ ಅತ್ಯುನ್ನತ ನಾಗರಿಕ ಗೌರವವಾದ ಭಾರತ ರತ್ನ ಸಿಗಬೇಕು’ ಎಂದರು.


ಭಾರತೀಯ ವಿದ್ಯಾಭವನದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಎಚ್.ಎನ್. ಸುರೇಶ್, ಕೆ.ಜಿ. ರಾಘವನ್, ಪದ್ಮಾ ಸುಬ್ರಹ್ಮಣ್ಯಂ, ಶತಾವಧಾನಿ ಆರ್. ಗಣೇಶ್, ನ್ಯಾ. ಕೃಷ್ಣ ಎಸ್. ದೀಕ್ಷಿತ್, ಚಿರಂಜೀವ್ ಸಿಂಘ್ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

‘ಯಾವ ರಾಜನು ವಿದ್ವಾಂಸನ ಬಳಿ ಹೋಗುತ್ತಾನೋ ಆತ ಧನ್ಯ. ಯಾವ ವಿದ್ವಾಂಸನು ರಾಜನ ಬಳಿ ಹೋಗುತ್ತಾನೋ ಆತ ಶಾಪಗ್ರಸ್ತ. ಶತಾವಧಾನಿ ಗಣೇಶ್ ಅವರು ಬಿರುದು-ಬಾವಲಿಗಳ ಹಿಂದೆ ಹೋದವರಲ್ಲ. ಒಂದು ವೇಳೆ ನಮ್ಮ ಪ್ರಾಚೀನ ಪರಂಪರೆ ನಾಶವಾದರೂ, ಅದನ್ನು ತಮ್ಮ ನೆನಪಿನ ಶಕ್ತಿಯಿಂದಲೇ ಮರುಸೃಷ್ಟಿಸಬಲ್ಲ ಸಾಮರ್ಥ್ಯ ಅವರಲ್ಲಿದೆ’ ಎಂದು ಶ್ಲಾಘಿಸಿದರು.

ಭಾರತೀಯ ವಿದ್ಯಾಭವನದ ವಜ್ರಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ಹಲವು ಕಾರ್ಯಕ್ರಮಗಳಲ್ಲಿ ಇದು ಮೊದಲನೆಯದ್ದಾಗಿದೆ. ಮುಂಬರುವ ದಿನಗಳಲ್ಲಿ ಐದು ದಿನಗಳ ಸಾಹಿತ್ಯ ಉತ್ಸವ ಮತ್ತು ‘ಸಂಗೀತವಾಣಿ’ ಎಂಬ ಜಾಗತಿಕ ಸಂಗೀತ ಸಮ್ಮೇಳನವನ್ನು ಆಯೋಜಿಸಲಾಗುವುದು ಎಂದು ವಿದ್ಯಾಭವನದ ಅಧ್ಯಕ್ಷ ಕೆ.ಜಿ. ರಾಘವನ್ ಮಾಹಿತಿ ನೀಡಿದರು.

ಶಂಕರ ಸೇವಾ ಪ್ರಶಸ್ತಿ ಪ್ರದಾನ ನಾಳೆ

ಬೆಂಗಳೂರು: ಶಂಕರ ಜಯಂತಿ, ತತ್ವಜ್ಞಾನಿಗಳ ದಿನಾಚರಣೆಯ ಅಂಗವಾಗಿ ಮಹಾಲಕ್ಷ್ಮೀಪುರಂ ಬ್ರಾಹ್ಮಣ ಮಹಾಸಭಾ ಇದೇ 21ರಂದು ಆಯೋಜಿಸುವ ಸಮಾರಂಭದಲ್ಲಿ ಐವರು ವಿದ್ವಾಂಸರಿಗೆ ಶಂಕರ ಸೇವಾ ಪ್ರಶಸ್ತಿ ನೀಡಲಿದೆ.

ಮಹಾಲಕ್ಷ್ಮೀ ಲೇಔಟ್‌ನ ಶ್ರೀಪ್ರಸನ್ನ ವೀರಾಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಸಂಜೆ 5 ಗಂಟೆಗೆ ನಡೆಯುವ ಸಮಾರಂಭದಲ್ಲಿ ವಿದ್ವಾಂಸರಾದ ಉಮಾಕಾಂತ ಭಟ್, ಮಹಾಬಲೇಶ್ವರ ಭಟ್, ರಾಮಚಂದ್ರ ಭಟ್ ಕೋಟೆಮನೆ, ಚಂದ್ರಕಾಂತ ಅಗ್ನಿ ಹೋತ್ರಿ, ಗಣಪತಿಭಟ್ ತಿರುಪತಿ ಅವರಿಗೆ ಶಂಕರ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಮಹಾಸಭಾದ ಅಧ್ಯಕ್ಷ ಬಿ.ಎಸ್. ರಾಘವೇಂದ್ರ ಭಟ್ ತಿಳಿಸಿದ್ದಾರೆ.

ಹೈಕೋರ್ಟ್ ನ್ಯಾಯಮೂರ್ತಿ ವೇದವ್ಯಾಸಾಚಾರ್ ಶ್ರೀಶಾನಂದ, ಶಾಸಕ ಕೆ. ಗೋಪಾಲಯ್ಯ, ಹೆಚ್ಚುವರಿ ಅಡ್ವೊಕೇಟ್ ಜನರಲ್ ಮಲ್ಹಾರಿರಾವ್ ಅವರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಕ್ಕಿಜ್ವರ: ಪೀಡಿತ ವಲಯ ಘೋಷಣೆ

ಬೆಂಗಳೂರು: ಯಲಹಂಕ ತಾಲ್ಲೂಕಿನ ಹೆಸರಘಟ್ಟದ ಮುತ್ತೂರು ಗ್ರಾಮದ ಕೋಳಿ ಸಾಕಾಣಿಕೆ ತರಬೇತಿ ಕೇಂದ್ರದಲ್ಲಿ ಹಕ್ಕಿಜ್ವರ ಪ್ರಕರಣ ದೃಢಪಟ್ಟಿರುವುದರಿಂದ, ಒಂದು ಕಿ.ಮೀ. ವ್ಯಾಪ್ತಿಯ ಪ್ರದೇಶವನ್ನು ರೋಗಪೀಡಿತ ವಲಯ, 1ರಿಂದ 10 ಕಿ.ಮೀ. ವ್ಯಾಪ್ತಿಯ ಪ್ರದೇಶವನ್ನು ‘ಜಾಗೃತ ವಲಯ’ ಎಂದು ಘೋಷಿಸಿ ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ಆದೇಶಿಸಿದ್ದಾರೆ.

ರೋಗಪೀಡಿತ ವಲಯದಲ್ಲಿ ಕೋಳಿ, ಕೋಳಿ ಮರಿ, ಮೊಟ್ಟೆ, ಆಹಾರ, ಗೊಬ್ಬರವನ್ನು ಸರ್ಕಾರದ ಮಾರ್ಗಸೂಚಿ ಅನ್ವಯ ಕ್ಷಿಪ್ರ ಕಾರ್ಯಪಡೆಗಳನ್ನು ರಚಿಸಿ ಎಲ್ಲವನ್ನೂ ನಿಯಮಾನುಸಾರ ವಿಲೇವಾರಿ ಮಾಡಲಾಗಿದೆ. ಈ ಪ್ರದೇಶದಲ್ಲಿ ಸೋಂಕು ನಿವಾರಣಾ ಕಾರ್ಯ ಪ್ರಗತಿಯಲ್ಲಿದ್ದು, ಸಾರ್ವಜನಿಕರು ಆತಂಕ ಪಡುವ ಅಗತ್ಯವಿಲ್ಲ ಎಂದು ತಿಳಿಸಿದ್ದಾರೆ.

ಶಂಕಿತ ಪ್ರಕರಣವಿದ್ದಲ್ಲಿ ರಕ್ತ ಪರೀಕ್ಷೆ ಮಾಡಲು ಕ್ರಮ ವಹಿಸಲಾಗಿದೆ. ಜಾಗೃತ ವಲಯದಲ್ಲಿ ಎಲ್ಲ ಜಾತಿಯ ಹಕ್ಕಿ ಪಕ್ಷಿಗಳ ಸಾಗಾಣಿಕೆ, ಚಲನವಲನ ಮತ್ತು ಪ್ರದರ್ಶನ ಮುಂತಾದ ಚಟುವಟಿಕೆಗಳನ್ನು ನಿರ್ಬಂಧಿಸಲು ರೋಗಪೀಡಿತ ಪ್ರದೇಶಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಗಳಲ್ಲಿ ಐದು ತಪಾಸಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು ಹೇಳಿದ್ದಾರೆ.

ನಸೀರ್‌ಗೆ ಬೆಂಬಲ

ಮುಳಬಾಗಿಲು: ಮುಸ್ಲಿಂ ಸಮುದಾಯಕ್ಕೆ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವುದು ಗೊತ್ತು, ಕೆಳಗೆ ಇಳಿಸುವುದೂ ಗೊತ್ತು. ಮುಂದೆ ಎಲ್ಲಾ ಮುಸಲ್ಮಾನರು ನ್ಯಾಯ ಸಿಗುವವರೆಗೆ ಪಕ್ಷಾತೀತವಾಗಿ ನಸೀರ್ ಅಹಮದ್ ಪರ ನಿಲ್ಲಬೇಕು ಹಾಗೂ ಕಾಂಗ್ರೆಸ್ ನಡೆಯನ್ನು ಖಂಡಿಸಬೇಕು ಎಂದು ಮುಸ್ಲಿಂ ಉಲೇಮಾಗಳು ಹೇಳಿದರು.

ನಗರದಲ್ಲಿ ಸಭೆ ನಡೆಸಿದ ಉಲೇಮಾಗಳು, ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆ ವಿಚಾರವಾಗಿ ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ನಸೀರ್ ಅಹಮದ್ ಅವರನ್ನು ವಜಾ ಮಾಡಿರುವುದನ್ನು ಖಂಡಿಸಿದರು.

‘ಬಂಡವಾಳಶಾಹಿಗಳಿಗಾಗಿ ಬ್ಯಾಂಕ್ ಖಾಸಗೀಕರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳನ್ನು ಖಾಸಗೀಕರಣಗೊಳಿಸುವ ಮೂಲಕ ಬಂಡವಾಳಶಾಹಿಗಳ ಹಿಡಿತಕ್ಕೆ ಒಪ್ಪಿಸಲು ಕೇಂದ್ರ ಸರ್ಕಾರ ಮುಂದಾಗಿದೆ ಎಂದು ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅಮರ್ಜಿತ್ ಕೌರ್ ಆರೋಪಿಸಿದರು.

ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ 30ನೇ ಅಖಿಲ ಭಾರತ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

ಅತಿಹೆಚ್ಚು ಗ್ರಾಹಕರಿರುವ ಸೇವಾ ವಲಯಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರ ಪ್ರಮುಖವಾದುದು. ಬಡವರು, ಮಹಿಳೆಯರು, ಕೈಗಾರಿಕೆಗಳಿಗೆ ಸರ್ಕಾರದ ಯೋಜನೆಗಳನ್ನು ತಲುಪಿಸುವ, ಎಲ್ಲ ವರ್ಗದವರಿಗೂ ಮುಟ್ಟಿಸಿ, ದೇಶದ ಆರ್ಥಿಕ ಬೆಳವಣಿಗೆಗೆ ಕೊಡುಗೆ ನೀಡುತ್ತಿರುವ ಬ್ಯಾಂಕ್‌ಗಳನ್ನು ಖಾಸಗೀಕರಣ ಮಾಡುವ ಯತ್ನ ಖಂಡನೀಯ ಎಂದರು.

ತೈಲ, ಸತು, ಚಿನ್ನ ಸೇರಿದಂತೆ ನೈಸರ್ಗಿಕ ಸಂಪತ್ತಿನ ಮೇಲೆ ಹಿಡಿತ ಸಾಧಿಸಲು, ವಸಾಹತು ಸ್ಥಾಪಿಸಲು, ವ್ಯವಹಾರ ನಿಯಂತ್ರಿಸಲು ಪೂರ್ವ ಏಷ್ಯಾದಲ್ಲಿ ಯುದ್ಧ ನಡೆಯುತ್ತಿದೆ. ಇದರ ಪರಿಣಾಮ ಇಂಧನ ಅಭಾವ ಉಂಟಾಗಿ, ಬೆಲೆ ಏರಿಕೆ ಜನರ ಮೇಲೆ ಪರಿಣಾಮ ಬೀರುತ್ತಿದೆ. ಇದನ್ನು ಪರಿಹರಿಸಲು ಕೇಂದ್ರ ಪ್ರಯತ್ನಿಸುತ್ತಿಲ್ಲ ಎಂದರು.

ಸರ್ಕಾರಿ ಬ್ಯಾಂಕ್‌ಗಳಲ್ಲಿ ಜನರು ಠೇವಣಿ ಇಟ್ಟ ಹಣವು ದೇಶದ ಆರ್ಥಿಕ ಅಭಿವೃದ್ಧಿಗೆ ಬಳಕೆಯಾಗುತ್ತಿದೆ. ಆದರೆ ಖಾಸಗಿ ಬ್ಯಾಂಕ್‌ಗಳಲ್ಲಿನ ಹಣವನ್ನು ಬಳಕೆ ಮಾಡಲಾಗದು. ಈ ಹಿಂದೆ ಕೆಲವು ಖಾಸಗಿ ಬ್ಯಾಂಕ್‌ಗಳು ತಮ್ಮ ಲಾಭಕ್ಕಾಗಿ ಅತ್ಯಧಿಕ ಸಾಲ ನೀಡಿ ಮರಳಿ ಪಡೆಯದೆ ಜನರ ಹಣವನ್ನು ವಂಚಿಸಿವೆ. ಇದೀಗ ಸಾರ್ವಜನಿಕ ಕ್ಷೇತ್ರದ ಬ್ಯಾಂಕ್‌ಗಳನ್ನು ಮತ್ತೆ ಖಾಸಗಿ ವಲಯಕ್ಕೆ ಒಪ್ಪಿಸುವ ನಿರ್ಣಯ ಸರಿಯಲ್ಲ ಎಂದರು.

ಬೆಂಗಳೂರಿನ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಬಾಬು ಮ್ಯಾಥ್ಯೂ ಮಾತನಾಡಿ, ‘ಕಾರ್ಮಿಕ ವಿರೋಧಿ ನಾಲ್ಕು ಸಂಹಿತೆಗಳನ್ನು ಜಾರಿಗೊಳಿಸಲು ಕೇಂದ್ರ ಮುಂದಾಗಿದೆ. ಬಂಡವಾಳ ಶಾಹಿಗಳ ಪರವಾಗಿ ಕಾಯ್ದೆಗಳನ್ನು ರೂಪಿಸುತ್ತಿದೆ ಎಂದರು.

ಇಂಡಿಯನ್ ಬ್ಯಾಂಕ್ ಅಸೋಸಿಯೇಷನ್ ಮುಖ್ಯ ಕಾರ್ಯ ನಿರ್ವಾಹಕ ಅತುಲ್ ಕುಮಾರ್ ಗೋಯಲ್, ವಿವಿಧ ಸಂಘಟನೆಗಳ ಪದಾಧಿಕಾರಿಗಳಾದ ಸುಂದರೇಶನ್, ರಾಜೇಶ್ ಕುಮಾರ್, ಬಾಲಾಜಿ, ಲಲಿತಾ ಜೋಷಿ, ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಸಿ. ಎಚ್. ವೆಂಕಟಾಚಲಂ, ಎಂ. ಜಯನಾಥ್ ಭಾಗವಹಿಸಿದ್ದರು.

ಕುಂದು ಕೊರತೆ | ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

‘ಪಾದಚಾರಿ ಮಾರ್ಗ ಸರಿಪಡಿಸಿ’



ಮೆಜೆಸ್ಟಿಕ್‌ಗೆ ಹೊಂದಿಕೊಂಡಿರುವ ಕಾಳಿದಾಸ ವೃತ್ತದಲ್ಲಿನ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಕಾಂಕ್ರೀಟ್ ಸ್ಲ್ಯಾಬ್ ಮುರಿದು ಬಿದ್ದಿದೆ. ಇದರಿಂದ ವೃದ್ಧರು, ಮಹಿಳೆಯರು ಹಾಗೂ ಮಕ್ಕಳ ಓಡಾಟಕ್ಕೆ ಸಮಸ್ಯೆ ಆಗಿದೆ. ಪಾದಚಾರಿ ಮಾರ್ಗದ ಕಾಂಕ್ರೀಟ್ ಸ್ಲ್ಯಾಬ್ ಹಾಳಾಗಿರುವ ಪರಿಣಾಮ ಸಾರ್ವಜನಿಕರು ಮುಖ್ಯರಸ್ತೆಯಲ್ಲಿ ಓಡಾಡುತ್ತಿದ್ದಾರೆ. ಇದರಿಂದ ಸಂಚಾರ ದಟ್ಟಣೆ ಆಗುತ್ತಿದೆ. ಸಂಬಂಧಪಟ್ಟ ಪಾಲಿಕೆ ಸಿಬ್ಬಂದಿ ಕೂಡಲೇ ಈ ಪಾದಚಾರಿ ಮಾರ್ಗ ದುರಸ್ತಿಗೊಳಿಸಬೇಕು.

ಶಿವಪ್ರಸಾದ್ ಎಸ್., ಗಾಂಧಿನಗರ



‘ಬಸ್‌ಗಳ ಸಂಖ್ಯೆ ಹೆಚ್ಚಿಸಿ’

ಮೈಸೂರು ರಸ್ತೆಯಿಂದ ಕೆಂಗೇರಿ, ಕುಂಬಳಗೋಡು, ಬಿಡದಿ, ರಾಮನಗರ ಮಾರ್ಗವಾಗಿ ತೆರಳಲು ಸರಿಯಾದ ಬಸ್‌ಗಳ ವ್ಯವಸ್ಥೆ ಇಲ್ಲ. ಈ ಭಾಗದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳಿದ್ದು, ಇಲ್ಲಿಗೆ ಬರುವ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತಿದೆ. ಕಾರ್ಖಾನೆಗೆ ತೆರಳುವ ನೌಕರರು ಸಮಸ್ಯೆ ಎದುರಿಸುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಈ ಮಾರ್ಗದಲ್ಲಿ ಸಂಚರಿಸುವ ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸಬೇಕು.

ಆರ್. ಶಂಕರಮಣಿ, ಜ್ಯೋತಿಲಕ್ಷ್ಮಿ, ವರುಣ, ಪ್ರಯಾಣಿಕರು

ಕಸ ತೆರವುಗೊಳಿಸಿ



ಬಸವನಗುಡಿಯ ರಾಮಕೃಷ್ಣ ಮಠದ ಎದುರಿನಲ್ಲಿರುವ ಬಿಎಂಟಿಸಿ ಬಸ್ ನಿಲ್ದಾಣದ ಪಕ್ಕದಲ್ಲಿ ಮರವೊಂದರ ಬುಡದಲ್ಲಿ ತರಗೆಲೆ ಸೇರಿ ಒಣಕಸದ ರಾಶಿಬಿದ್ದಿದೆ. ಇಲ್ಲಿನ ಕಸವನ್ನು ತೆರವುಗೊಳಿಸದ ಕಾರಣ, ದಿನದಿಂದ ದಿನಕ್ಕೆ ಕಸದ ರಾಶಿ ಬೆಳೆಯುತ್ತಿದೆ. ಪ್ಲಾಸ್ಟಿಕ್ ಕವರ್, ಲೋಟಗಳನ್ನೂ ಇಲ್ಲಿ ಎಸೆಯಲಾಗುತ್ತಿದೆ. ಗಾಳಿ ಬೀಸಿದಾಗ ಈ ಕಸ ರಸ್ತೆಗೂ ವ್ಯಾಪಿಸಿಕೊಳ್ಳುತ್ತಿದೆ. ಆದ್ದರಿಂದ ಇಲ್ಲಿ ಕಸ ಹಾಕದಂತೆ ಹಾಗೂ ಈಗ ಇರುವ ಕಸವನ್ನು ತುರ್ತಾಗಿ ವಿಲೇವಾರಿ ಮಾಡಲು ಜಿಬಿಎ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

ಬೈರಮಂಗಲ ರಾಮೇಗೌಡ, ಪುಷ್ಪಗಿರಿನಗರ



‘ಕಸ ಹಾಕುವ ತಾಣವಾದ ಉದ್ಯಾನ’

ವಸಂತನಗರದ ಒಂದನೇ ಮುಖ್ಯರಸ್ತೆಯಲ್ಲಿ ಇರುವ ಉದ್ಯಾನವು ಕಸ ಸಂಗ್ರಹಿಸುವ ತಾಣವಾಗಿ ಮಾರ್ಪಟ್ಟಿದೆ. ಪಾಲಿಕೆಯ ಅಧಿಕಾರಿಗಳು ಈ ಉದ್ಯಾನವನ್ನು ನಿರ್ವಹಣೆ ಮಾಡುತ್ತಿಲ್ಲ. ಆದ್ದರಿಂದ ಅನಗತ್ಯ ವಸ್ತುಗಳಿಂದ ತುಂಬಿಕೊಂಡಿದೆ. ಫ್ಲೆಕ್ಸ್, ಕಟ್ಟಡ ತ್ಯಾಜ್ಯವನ್ನು ತಂದು ಸುರಿಯಲಾಗಿದೆ. ಆಹಾರ ಪಾದಾರ್ಥಗಳನ್ನು ತಂದು ಇಲ್ಲಿಯೇ ಎಸೆದು ಹೋಗುತ್ತಿದ್ದು, ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ. ಇದರ ಜೊತೆಗೆ ಉದ್ಯಾನವು ಈಗ ಅನೈತಿಕ ಚಟುವಟಿಕೆಗಳು ನಡೆಯುವ ತಾಣವಾಗಿಯೂ ಮಾರ್ಪಟ್ಟಿದೆ. ಸಂಬಂಧಪಟ್ಟ ಪಾಲಿಕೆಯ ಅಧಿಕಾರಿಗಳು ಇಲ್ಲಿ ಹಾಕಿರುವ ತ್ಯಾಜ್ಯವನ್ನು ವಿಲೇವಾರಿ ಮಾಡಿ, ಉದ್ಯಾನದ ಸ್ವಚ್ಛತೆಗೆ ಆದ್ಯತೆ ನೀಡಬೇಕು.

ವಸಂತನಗರದ ನಿವಾಸಿಗಳು

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ

ಅರಣ್ಯ ಸಿಬ್ಬಂದಿ ಅಟ್ಟಾಡಿಸಿದ ಸಲಗ!

ಚನ್ನಪಟ್ಟಣ: ತಾಲ್ಲೂಕಿನ ಸುಣ್ಣಘಟ್ಟ ಗ್ರಾಮದಲ್ಲಿ ಭಾನುವಾರ ಮೂರು ಕಾಡಾನೆಗಳ ಹಿಂಡು ಕಾಣಿಸಿಕೊಂಡು ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿತು. ಪಟಾಕಿ ಸಿಡಿಸಿ ಆನೆಗಳನ್ನು ಅಟ್ಟಲು ಪ್ರಯತ್ನಿಸಿದ ಅರಣ್ಯ ಇಲಾಖೆ ಸಿಬ್ಬಂದಿಯನ್ನೇ ಆನೆಯೊಂದು ಅಟ್ಟಾಡಿಸಿತು.

ಅಧಿಕಾರಿಗೆ ಬೆದರಿಕೆ: ಎಫ್‌ಐಆರ್

ಬಿಷ್ಣೋಯಿ ಗ್ಯಾಂಗ್ ಸದಸ್ಯ ಎಂದು ಕರೆ
- ಭದ್ರತೆ ಹೆಚ್ಚಿಸಿಕೊಳ್ಳುವಂತೆ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಷ್ಟ್ರದ ಸಾರಿಗೆ ಇಲಾಖೆ ಅಧಿಕಾರಿಗೆ ಬಿಷ್ಣೋಯಿ ಗ್ಯಾಂಗ್ ಸದಸ್ಯ ಎಂದು ಕರೆ ಮಾಡಿ ಬೆದರಿಕೆ ಹಾಕಿದ ಅಪರಿಚಿತ ವ್ಯಕ್ತಿಯ ವಿರುದ್ಧ ಸೋಲದೇವನಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಪ್ರಸಾದ್ ಶಿವದಾಸ್ ನಾಲ್ವಡೆ ಅವರು ನೀಡಿದ ದೂರಿನ ಮೇರೆಗೆ ಮಹಾರಾಷ್ಟ್ರದ ಕಾಶಿಗಾಂವ್ ಪೊಲೀಸ್ ಠಾಣೆ ಪೊಲೀಸರು ಶೂನ್ಯ ಎಫ್‌ಐಆರ್ ದಾಖಲಿಸಿದ್ದರು. ಬಳಿಕ ಘಟನೆ ನಡೆದ ಸ್ಥಳದ ಆಧಾರದ ಮೇಲೆ ಸೋಲದೇವನಹಳ್ಳಿ ಠಾಣೆಗೆ ಪ್ರಕರಣ ವರ್ಗಾವಣೆ ಆಗಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ದೂರುದಾರರು ಮಹಾರಾಷ್ಟ್ರದ ಠಾಣೆ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ಹತ್ತು ವರ್ಷಗಳಲ್ಲಿ ನೀಡಲಾದ ಆಟೋಗಳ ಪರವಾನಗಿಯನ್ನು ತನಿಖೆ ನಡೆಸುತ್ತಿದ್ದರು. ಈ ಮಧ್ಯೆ ಆಲ್ ಇಂಡಿಯಾ ಫೆಡರೇಷನ್ ಆಫ್ ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟ್ ಟೆಕ್ನಿಕಲ್ ಎಕ್ಸಿಕ್ಯೂಟಿವ್ ಆಫೀಸರ್ ಅಸೋಸಿಯೇಷನ್‌ನಿಂದ ಏಪ್ರಿಲ್ 12ರಂದು ಸೋಲದೇವನಹಳ್ಳಿಯಲ್ಲಿ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿ ಹಾಗೂ ರಸ್ತೆ ಸುರಕ್ಷತಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಈ ವೇಳೆ ಅಪರಿಚಿತ ವ್ಯಕ್ತಿ ಕರೆ ಮಾಡಿ, 'ನಾನು ಬಿಷ್ಣೋಯಿ ಗ್ಯಾಂಗ್ ಸದಸ್ಯ. ನೀವು ಏಕೆ ಆಟೊ ಚಾಲಕರಿಗೆ ತೊಂದರೆ ಕೊಡುತ್ತಿದ್ದೀರಾ? ಇಬ್ಬರು ಏಜೆಂಟರು ತಪ್ಪು ಕೆಲಸ ಮಾಡುತ್ತಿದ್ದಾರೆ. ಅವರ ಫೈಲ್‌ಗಳನ್ನು ನೀವು ಮುಚ್ಚಿಟ್ಟಿದ್ದೀರಿ. ಕೂಡಲೇ ಅವರ ವಿರುದ್ಧ ಕ್ರಮ ಆಗಬೇಕು' ಎಂದು ಹೇಳಿದ್ದಾರೆ.

ಅದಕ್ಕೆ ಅಧಿಕಾರಿ, ಕಚೇರಿಗೆ ಬಂದು ದೂರು ನೀಡುವಂತೆ ಉತ್ತರಿಸಿದ್ದಾರೆ. ಆದರೆ, ಅಪರಿಚಿತ ವ್ಯಕ್ತಿ ಕಚೇರಿಗೆ ಬರುವುದಿಲ್ಲ. ನಿನ್ನ ವಿಚಾರ ಗೊತ್ತಿದೆ. ಕೂಡಲೇ ಭದ್ರತೆ ಹೆಚ್ಚಿಸಿಕೊಳ್ಳುವಂತೆ ಬೆದರಿಕೆ ಹಾಕಿದ್ದಾರೆ. ಅಧಿಕಾರಿ ಮಹಾರಾಷ್ಟ್ರಕ್ಕೆ ಹೋಗಿ ದೂರು ನೀಡಿದ್ದರು. ಆದರೆ, ಘಟನೆ ನಡೆದ ಸ್ಥಳವಾದ ಕಾರಣ ಇಲ್ಲಿಗೆ ವರ್ಗಾಯಿಸಿದ್ದಾರೆ. ತನಿಖೆ ನಡೆಯುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ದ್ವಿಚಕ್ರ, ಆಟೊ ಕಳ್ಳನ ಬಂಧನ

ಬೆಂಗಳೂರು: ದ್ವಿಚಕ್ರ ವಾಹನ ಹಾಗೂ ಆಟೊ ಕಳವು ಮಾಡುತ್ತಿದ್ದ ಆರೋಪಿಯನ್ನು ಗೋವಿಂದಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೆ.ಜಿ.ಹಳ್ಳಿ ವೆಂಕಟೇಶಪುರ ನಿವಾಸಿ ಮೊಹಮದ್ ಹಫೀಜ್ ಅಲಿಯಾಸ್ ಚಿಟ್ಟಿ ಬಂಧಿತ. ಆರೋಪಿಯಿಂದ ಒಂದು ದ್ವಿಚಕ್ರ ವಾಹನ ಹಾಗೂ ಮೂರು ಆಟೊ ರಿಕ್ಷಾಗಳನ್ನು ವಶಪಡಿಸಿಕೊಳ್ಳಲಾಗಿದೆ.

ಹೆಗಡೆ ನಗರ ನಿವಾಸಿಯೊಬ್ಬರು ಎಚ್.ಬಿ.ಆರ್.ಲೇಔಟ್ ಸರ್ಕಾರಿ ಆಸ್ಪತ್ರೆಯ ಹತ್ತಿರ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳವಾಗಿತ್ತು. ಈ ಸಂಬಂಧ ದೂರು ದಾಖಲಿಸಿಕೊಂಡ ಪೊಲೀಸರು, ವಿವಿಧ ಆಯಾಮಗಳಲ್ಲಿ ತನಿಖೆ ಕೈಗೊಂಡರು.

ನಾಗವಾರದ ವೈಯಾಲಿಕಾವಲ್ ಲೇಔಟ್‌ನ ಶಾಲೆಯೊಂದರ ಬಳಿ ವ್ಯಕ್ತಿಯನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ, ದ್ವಿಚಕ್ರ ಹಾಗೂ ಆಟೊ ಕಳವು ಮಾಡಿರುವುದಾಗಿ ತಪ್ಪೊಪ್ಪಿಕೊಂಡ. ಅಲ್ಲದೇ ಮಹದೇವಪುರದಲ್ಲಿಯೂ ಆಟೊ ಕಳವು ಮಾಡಿರುವುದಾಗಿ ಹೇಳಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಯ ಬಂಧನದಿಂದ ಗೋವಿಂದಪುರ ಠಾಣೆಯ ಮೂರು ಪ್ರಕರಣ, ಮಹದೇವಪುರ ಠಾಣೆಯ ಒಂದು ಪ್ರಕರಣ ಪತ್ತೆಯಾಗಿದೆ.

ರಸ್ತೆ ಬದಿ ಹಾಗೂ ಪಾರ್ಕಿಂಗ್ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದ ಆಟೊ, ಬೈಕ್‌ಗಳನ್ನು ಆರೋಪಿ ಕಳವು ಮಾಡುತ್ತಿದ್ದ. ಬೈಕ್‌ಗಳನ್ನು ಮಾರಾಟ ಮಾಡಿ ಬಂದ ಹಣವನ್ನು ದುಶ್ಚಟಗಳಿಗೆ ಖರ್ಚು ಮಾಡುತ್ತಿದ್ದ. ವಿವಿಧ ಪ್ರಕರಣಗಳಲ್ಲಿ ಆರೋಪಿ ಜೈಲು ಸೇರಿ, ಬಿಡುಗಡೆಯಾದ ಬಳಿಕ ಮತ್ತೆ ಕಳ್ಳತನ ಮಾಡುತ್ತಿದ್ದ ಎಂದಿದ್ದಾರೆ.

ಪೆಟ್ರೋಲ್ ಟ್ಯಾಂಕರ್ ಡಿಕ್ಕಿ ಸೂಪರ್‌ವೈಸರ್ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸೂರು ರಸ್ತೆಯ ಬೊಮ್ಮನಹಳ್ಳಿ ಜಂಕ್ಷನ್ ಬಳಿ ದ್ವಿಚಕ್ರ ವಾಹನಕ್ಕೆ ಪೆಟ್ರೋಲ್ ಟ್ಯಾಂಕರ್ ಡಿಕ್ಕಿ ಹೊಡೆದ ಪರಿಣಾಮ ಖಾಸಗಿ ಕಂಪನಿಯ ಸೂಪರ್‌ವೈಸರ್ ಮೃತಪಟ್ಟಿದ್ದಾರೆ.

ಪೀಣ್ಯ ಎರಡನೇ ಹಂತದ ಬಾಬು (52), ಬೊಮ್ಮಸಂದ್ರದ ಖಾಸಗಿ ಕಂಪನಿಯಲ್ಲಿ ಸೂಪರ್‌ವೈಸರ್ ಆಗಿದ್ದರು. ಅವರು ಕೆಲಸ ಮುಗಿಸಿಕೊಂಡು ಕಂಪನಿಯಿಂದ ದ್ವಿಚಕ್ರ ವಾಹನದಲ್ಲಿ ಮನೆಗೆ ಹೋಗುತ್ತಿದ್ದಾಗ ಈ ದುರ್ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮುಂದೆ ಹೋಗುತ್ತಿದ್ದ ಬಾಬು ಅವರ ದ್ವಿಚಕ್ರ ವಾಹನಕ್ಕೆ ಟ್ಯಾಂಕರ್ ಡಿಕ್ಕಿ ಹೊಡೆದಿದೆ. ಈ ವೇಳೆ ನಿಯಂತ್ರಣ ತಪ್ಪಿ ಕೆಳಗೆ ಬಿದ್ದು ತೀವ್ರವಾಗಿ ಗಾಯಗೊಂಡ ಅವರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ಯಲು ಯತ್ನಿಸಿದ್ದಾರೆ. ಆದರೆ, ಮಾರ್ಗ ಮಧ್ಯೆಯೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

'ಟ್ಯಾಂಕರ್ ಚಾಲಕನ ನಿರ್ಲಕ್ಷ್ಯ ಹಾಗೂ ಅತಿಯಾದ ವೇಗವೇ ಅಪಘಾತಕ್ಕೆ ಕಾರಣ. ಬಾಬು ಅವರು ಹೆಲ್ಮೆಟ್ ಧರಿಸಿರಲಿಲ್ಲ. ಹೀಗಾಗಿ, ಅವರ ತಲೆಗೆ ಪೆಟ್ಟಾಗಿ ತೀವ್ರ ರಕ್ತಸ್ರಾವವಾಗಿದೆ. ಹೆಲ್ಮೆಟ್ ಅನ್ನು ಕಾಲುಗಳ ಬಳಿ ಇಟ್ಟುಕೊಂಡು ದ್ವಿಚಕ್ರ ವಾಹನ ಚಾಲನೆ ಮಾಡುತ್ತಿದ್ದರು. ಅವರು ಹೆಲ್ಮೆಟ್ ಧರಿಸಿದ್ದರೆ ಬದುಕುಳಿಯುವ ಸಾಧ್ಯತೆಯಿತ್ತು. ಟ್ಯಾಂಕರ್ ಚಾಲಕನನ್ನು ಬಂಧಿಸಿ, ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಮಡಿವಾಳ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಲಕಿ ಪತ್ತೆ ಹಚ್ಚಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಣೆಯಾಗಿದ್ದ ಏಳು ವರ್ಷದ ಬಾಲಕಿಯನ್ನು ಪತ್ತೆ ಹಚ್ಚಿ, ಪೋಷಕರಿಗೆ ಒಪ್ಪಿಸುವಲ್ಲಿ ಬ್ಯಾಡರಹಳ್ಳಿ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಏಪ್ರಿಲ್ 16ರಂದು ಮಧ್ಯಾಹ್ನ 12.15ರ ಸುಮಾರಿಗೆ ಚಿಕ್ಕಗೊಲ್ಲರ ಹಟ್ಟಿ ರಸ್ತೆಯ ಬದಿಯಲ್ಲಿ ಮಗಳು ಕಾಣೆಯಾಗಿದ್ದಾಳೆ ಎಂದು ಮಹಿಳೆ ಹುಡುಕಾಟ ನಡೆಸುತ್ತಿದ್ದರು. ಇದನ್ನು ಗಮನಿಸಿದ ಸಾರ್ವಜನಿಕರೊಬ್ಬರು 112ಕ್ಕೆ ಕರೆ ಮಾಡಿ ಮಾಹಿತಿ ನೀಡಿದ್ದರು.

15 ನಿಮಿಷಗಳಲ್ಲಿ ಸ್ಥಳಕ್ಕೆ ಬಂದ ಹೊಯ್ಸಳ 93ರ ಸಿಬ್ಬಂದಿ ಬಾಲಕಿಯ ಬಗ್ಗೆ ಮಾಹಿತಿ ಸಂಗ್ರಹಿಸಿ, ಸುತ್ತಮುತ್ತಲ ಪ್ರದೇಶದಲ್ಲಿ ಹುಡುಕಾಟ ನಡೆಸಿದ್ದರು. ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಿ, ಬಾಲಕಿಯನ್ನು ಪತ್ತೆ ಹಚ್ಚಿ, ತಾಯಿಗೆ ಒಪ್ಪಿಸಿದ್ದಾರೆ. ಮಕ್ಕಳ ಮೇಲೆ ಹೆಚ್ಚಿನ ಗಮನ ವಹಿಸುವಂತೆ ಪೊಲಿಸರು ಪೋಷಕರಿಗೆ ಸಲಹೆ ನೀಡಿದ್ದಾರೆ.

ಭೂ ವ್ಯಾಜ್ಯ: ವೃದ್ಧನ ಮೇಲೆ ಹಲ್ಲೆ ಯತ್ನ

ಬೆಂಗಳೂರು: ಭೂ ವ್ಯಾಜ್ಯ ಸಂಬಂಧ ಅಪರಿಚಿತರು 70 ವರ್ಷದ ವೃದ್ಧರೊಬ್ಬರ ಮೇಲೆ ಹಲ್ಲೆಗೆ ಯತ್ನಿಸಿ ಜೀವ ಬೆದರಿಕೆ ಹಾಕಿರುವ ಘಟನೆ ಯಲಹಂಕ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಈ ಕುರಿತು ಆಡುಗೋಡಿ ನಿವಾಸಿ ಅಬ್ದುಲ್ ಸತ್ತಾರ್ ನೀಡಿದ ದೂರಿನ ಮೇಲೆ ಯಲಹಂಕ ಠಾಣೆಯಲ್ಲಿ ಗಂಭೀರ ಸ್ವರೂಪವಲ್ಲದ ಪ್ರಕರಣ (ಎನ್‌ಸಿಆರ್) ದಾಖಲಾಗಿದೆ.

ಸ್ಥಳೀಯ ಪೊಲೀಸರು ಸರಿಯಾಗಿ ತನಿಖೆ ನಡೆಸುತ್ತಿಲ್ಲವೆಂದು ಆರೋಪಿಸಿರುವ ಅಬ್ದುಲ್, ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರಿಗೆ ಪ್ರತ್ಯೇಕವಾಗಿ ದೂರು ನೀಡಿದ್ದಾರೆ.

'ಯಲಹಂಕ ಬಳಿ 7 ಗುಂಟೆ ಜಾಗವು 1993 ರಿಂದಲೂ ನಮ್ಮ ಸ್ವಾಧೀನದಲ್ಲಿದ್ದು, ಮಳಿಗೆಗಳನ್ನು ನಿರ್ಮಿಸಿ ಬಾಡಿಗೆಗೆ ನೀಡಿದ್ದೇನೆ. ಬಾಡಿಗೆ ಹಣದಿಂದಲೇ ಕುಟುಂಬ ನಿರ್ವಹಿಸಲಾಗುತ್ತಿದೆ. ರಿಯಲ್ ಎಸ್ಟೇಟ್ ಕಂಪನಿಯೊಂದು ಜಾಗ ಕಬಳಿಸಲು ಯತ್ನಿಸುತ್ತಿದ್ದು, 25ಕ್ಕೂ ಅಧಿಕ ಮಂದಿ ಅಪರಿಚಿತರು ಸ್ಥಳಕ್ಕೆ ಬಂದು ಜಾಗ ಬಿಟ್ಟು ಹೋಗುವಂತೆ ಬೆದರಿಕೆ ಹಾಕಿ ಹಲ್ಲೆಗೆ ಯತ್ನಿಸಿದ್ದಾರೆ' ಎಂದು ದೂರಿನಲ್ಲಿ ಅವರು ಆರೋಪಿಸಿದ್ದಾರೆ.

'ಪೊಲೀಸರಿಗೆ ದೂರು ನೀಡಿದರೂ ಎಫ್‌ಐಆರ್ ದಾಖಲಿಸಿಲ್ಲ. ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿ, ನನಗೆ ರಕ್ಷಣೆ ನೀಡಬೇಕು' ಎಂದು ಕೋರಿದ್ದಾರೆ.



ಶ್ರೀವಿದ್ಯಾ ಅಂತರರಾಷ್ಟ್ರೀಯ ವೇದ ವಿಜ್ಞಾನ ವಿಶ್ವವಿದ್ಯಾಲಯ, ಶ್ರೀವಿದ್ಯಾ ವಿಶ್ವ ಸಂಶೋಧನಾ ಪ್ರತಿಷ್ಠಾನದ ಸಹಯೋಗದಲ್ಲಿ ನಡೆದ ಘಟಿಕೋತ್ಸವದಲ್ಲಿ ವಿದ್ವಾನ್ ನಾಗಭೂಷಣ್, ಶಂಕರ್ ಕ್ಯಾನ್ಸರ್ ಆಸ್ಪತ್ರೆಯ ಡಾ. ಬಿ.ಎಸ್. ಶ್ರೀನಾಥ್, ರಾಮಕೃಷ್ಣ ಆಶ್ರಮದ ನಿರ್ಭಯಾನಂದ ಸರಸ್ವತಿ ಸ್ವಾಮೀಜಿ, ನರಸಿಂಹಮೂರ್ತಿ, ಶ್ರೀನಿವಾಸಮೂರ್ತಿ, ಅರ್ಚನಾ ಪಾಲ್ಗೊಂಡಿದ್ದರು

ಅನುಮಾನಾಸ್ಪದ ಸಾವು

ಬೆಂಗಳೂರು: ವ್ಯಕ್ತಿಯೊಬ್ಬರು ಅನುಮಾನಾಸ್ಪದವಾಗಿ ಮೃತಪಟ್ಟಿರುವ ಘಟನೆ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ದೊಡ್ಡ ತೋಗೂರು ನಿವಾಸಿ ನಾರಾಯಣಪ್ಪ (56) ಮೃತರು. ನಾರಾಯಣಪ್ಪ ಮತ್ತು ಅವರ ಸ್ನೇಹಿತ ಶನಿವಾರ ಮಧ್ಯಾಹ್ನ ಬಾರ್‌ವೊಂದರಲ್ಲಿ ಮದ್ಯ ಸೇವಿಸಿದ್ದರು. ಬಳಿಕ ನಾರಾಯಣಪ್ಪ ಅವರನ್ನು ಸ್ನೇಹಿತ ಕಾರಿನಲ್ಲಿ ಕೂರಿಸಿಕೊಂಡು ಕರೆದೊಯ್ಯುತ್ತಿದ್ದ ವೇಳೆ ಮೃತಪಟ್ಟಿದ್ದಾರೆ. ಹೀಗಾಗಿ ನಾರಾಯಣಪ್ಪ ಅವರಿಗೆ ಹೃದಯಾಘಾತವಾಗಿರುವ ಸಾಧ್ಯತೆ ಇದ್ದು,ಅನುಮಾನಾಸ್ಪದ ಸಾವು ಪ್ರಕರಣ ದಾಖಲಿಸಿ, ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಯಾಣಿಕನ ಹದಗೆಟ್ಟ ಆರೋಗ್ಯ; ಸ್ಪಂದಿಸಿದ ವಿಮಾನ ಸಿಬ್ಬಂದಿ

ಪ್ರಜಾವಾಣಿ ವಾರ್ತೆ



ದೇವನಹಳ್ಳಿ: ದೆಹಲಿಗೆ ಹೊರಟಿದ್ದ ಇಂಡಿಗೊ ವಿಮಾನ ಭಾನುವಾರ ಇನ್ನೇನು ಆಗಸದತ್ತ ಹಾರಬೇಕು (ಟೇಕ್ ಆಫ್) ಎನ್ನುವ ಹೊತ್ತಿಗೆ ಸರಿಯಾಗಿ ಪ್ರಯಾಣಿಕರೊಬ್ಬರು ಹಠಾತ್ ಗಂಭೀರ ಆರೋಗ್ಯ ಸಮಸ್ಯೆಗೆ ತುತ್ತಾದರು.

ವೈದ್ಯಕೀಯ ತುರ್ತು ಪರಿಸ್ಥಿತಿಗೆ ತಕ್ಷಣ ಸ್ಪಂದಿಸಿದ ವಿಮಾನ ಸಿಬ್ಬಂದಿ ಅತ್ಯಂತ ಶಾಂತ ರೀತಿಯಿಂದ ಹಾಗೂ ವೃತ್ತಿಪರವಾಗಿ ಪರಿಸ್ಥಿತಿಯನ್ನು ನಿಭಾಯಿಸಿದರು.

ವಿಮಾನದಲ್ಲಿದ್ದ ವೈದ್ಯರೊಬ್ಬರು ಕೂಡಲೇ ನೆರವಿಗೆ ಧಾವಿಸಿದರು. ಅಸ್ವಸ್ಥ ಪ್ರಯಾಣಿಕನಿಗೆ ಪ್ರಾಥಮಿಕ ಚಿಕಿತ್ಸೆ ನೀಡಿದರು. ವಿಮಾನದ ಸಿಬ್ಬಂದಿ ಅವರನ್ನು ತ್ವರಿತವಾಗಿ ಆಂಬುಲೆನ್ಸ್‌ಗೆ ಸ್ಥಳಾಂತರಿಸಿದರು.

ಇಂಡಿಗೊ ವಿಮಾನ 6E 840ರಲ್ಲಿ ನಡೆದ ಈ ಘಟನೆಯನ್ನು ಶೈಲಿ ಎಂಬ ಮಹಿಳೆಯೊಬ್ಬರು ಸೆರೆ ಹಿಡಿದು ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡಿದ್ದಾರೆ. ಸಿಬ್ಬಂದಿ ನಡೆಗೆ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.

'ಟಿಕೆಟ್ ಮಾರಾಟ ನಮ್ಮದಲ್ಲ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಐಪಿಎಲ್ ಪಂದ್ಯಗಳ ಟಿಕೆಟ್ ಅಕ್ರಮ ಮಾರಾಟ ಪ್ರಕರಣ
- ಪ್ರಕಟಣೆ ಹೊರಡಿಸಿ ಕೆಎಸ್‌ಸಿಎ ಸ್ಪಷ್ಟನೆ

ಬೆಂಗಳೂರು: ಐಪಿಎಲ್ ಪಂದ್ಯಗಳ ಟಿಕೆಟ್‌ಗಳನ್ನು ಅಕ್ರಮವಾಗಿ ಅಧಿಕ ಬೆಲೆಗೆ ಮಾರಾಟ ಮಾಡುತ್ತಿದ್ದ ಪ್ರಕರಣಕ್ಕೂ ಕರ್ನಾಟಕ ಕ್ರಿಕೆಟ್ ಸಂಸ್ಥೆಗೂ (ಕೆಎಸ್‌ಸಿಎ) ಸಂಬಂಧವಿಲ್ಲ ಎಂದು ಸಂಸ್ಥೆಯ ವಕ್ತಾರ ವಿನಯ್ ಮೃತ್ಯುಂಜಯ ಹೇಳಿದ್ದಾರೆ.

'ಪ್ರಕರಣದಲ್ಲಿ ಕೆಲವು ವ್ಯಕ್ತಿಗಳ ಬಂಧನ ಹಾಗೂ ಕಾರ್ಪೊರೇಟ್ ಸಂಸ್ಥೆಗಳ ಹೆಸರು ಕೇಳಿ ಬಂದಿರುವುದು ಸಂಸ್ಥೆ ಗಮನಕ್ಕೆ ಬಂದಿದೆ. ಸಾರ್ವಜನಿಕರಿಗೆ ನೇರವಾಗಿ ಟಿಕೆಟ್‌ಗಳನ್ನು ಮಾರಾಟ ಮಾಡುವ ಜವಾಬ್ದಾರಿ ನಮ್ಮದಲ್ಲ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಐಪಿಎಲ್ ಪಂದ್ಯಗಳ ಟಿಕೆಟ್ ಮಾರಾಟ ಆಯಾ ಫ್ರಾಂಚೈಸಿಗಳು ಮತ್ತು ಅವರು ನೇಮಿಸಿದ ಅಧಿಕೃತ ಟಿಕೆಟ್ ಪಾಲುದಾರರು ಮಾತ್ರ ನಿರ್ವಹಿಸುತ್ತಾರೆ. ಕೇವಲ ಸೀಮಿತ ಪ್ರಮಾಣದ ಟಿಕೆಟ್‌ಗಳನ್ನು ಮಾತ್ರವೇ ಕೆಎಸ್‌ಸಿಎ ಪಡೆಯುತ್ತದೆ. ಅವುಗಳನ್ನು ಕ್ರಿಕೆಟ್ ಕ್ಲಬ್, ಕಾಯಂ ಸದಸ್ಯರಿಗೆ ಮತ್ತು ಕೆಎಸ್‌ಸಿಎಗೆ ಸೇವೆ ಒದಗಿಸುವ ಕೆಲವು ಶಾಸನಬದ್ಧ ಸರ್ಕಾರಿ ಸಂಸ್ಥೆಗಳಿಗೆ ಮಾತ್ರ ಒದಗಿಸಲಾಗುತ್ತದೆ ಎಂದು ಹೇಳಿದ್ದಾರೆ.

ಅಕ್ರಮವಾಗಿ ಟಿಕೆಟ್ ಮಾರಾಟದ ಆರೋಪದಡಿ ತನಿಖೆಗೊಳಪಟ್ಟಿರುವ ಸಂಸ್ಥೆಗಳಿಗೂ ಕೆಎಸ್‌ಸಿಎಗೂ ಸಂಬಂಧವಿಲ್ಲ. ಈ ಅಕ್ರಮ ಚಟುವಟಿಕೆಯಲ್ಲಿ ಭಾಗಿಯಾಗಿರುವ ವ್ಯಕ್ತಿಗಳು ರಾಜ್ಯ ಕ್ರಿಕೆಟ್ ಸಂಸ್ಥೆಯ ಸದಸ್ಯರಲ್ಲ. ತನಿಖಾ ಸಂಸ್ಥೆಗಳಿಗೆ ಸಹಕಾರ ನೀಡಲಿದ್ದು, ಈ ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರನ್ನು ಗುರುತಿಸಲು ಮತ್ತು ಇಂತಹ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ವಿನಯ್ ಒತ್ತಾಯಿಸಿದ್ದಾರೆ.

ಐಪಿಎಲ್ ಪಂದ್ಯಗಳ ಟಿಕೆಟ್‌ಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಆರೋಪದಡಿ ಚಿನ್ನಸ್ವಾಮಿ ಕ್ರೀಡಾಂಗಣದ ಲಕ್ಷ್ಮಿ ಹೋಟೆಲ್‌ನ ಚಂದ್ರಶೇಖರ್ ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿ, ಟಿಕೆಟ್ ಜಪ್ತಿ ಮಾಡಿದ್ದರು.

ಪತ್ರಿಕಾ ವಿತರಕರ ಮಕ್ಕಳ ಸಾಧನೆ

ಪಿಯುಸಿ: ವಿವಿಧ ವಿಭಾಗದಲ್ಲಿ ಉತ್ತಮ ಅಂಕ ಗಳಿಕೆ

ಪ್ರಜಾವಾಣಿ ವಾರ್ತೆ


ಅದಿತಿ ಜೀವನ್


ಎಂ.ವರುಣಶ್ರೀ


ಆರ್.ಅಮೂಲ್ಯ


ಬಿ.ಕೆ.ವರ್ಷಿತಾ

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಅಧಿಕ ಅಂಕಗಳನ್ನು ಪಡೆಯುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ.

ನಗರದ ಎನ್‌ಎಂಕೆಆರ್‌ವಿ ಕಾಲೇಜಿನ ಅದಿತಿ ಜೀವನ್ ಕಲಾ ವಿಭಾಗದಲ್ಲಿ ಶೇ 98.6ರಷ್ಟು ಅಂಕಗಳನ್ನು ಪಡೆದಿದ್ದಾರೆ. ಈಕೆ ಜಯನಗರ 9ನೇ ಬ್ಲಾಕ್‌ನ ಪತ್ರಿಕಾ ವಿತರಕ ಜೀವನ್ ಕುಮಾರ್ ಪುತ್ರಿ.

ಎಸ್‌ಎಸ್‌ಎಂಆರ್‌ವಿ ಕಾಲೇಜಿನ ಎಂ.ವರುಣಶ್ರೀ ವಾಣಿಜ್ಯ ವಿಭಾಗದಲ್ಲಿ ಶೇ 97.5ರಷ್ಟು ಅಂಕಗಳನ್ನು ಪಡೆದಿದ್ದಾರೆ. ಈಕೆ ಬಿಟಿಎಂ ಲೇಔಟ್ ಪತ್ರಿಕಾ ವಿತರಕ ಮಹದೇವಸ್ವಾಮಿ ಪುತ್ರಿ.

ಹಾಸನದ ಸೇಂಟ್ ಫಿಲೋಮಿನಾ ಕಾಲೇಜಿನ ವಿದ್ಯಾರ್ಥಿನಿ ಆರ್.ಅಮೂಲ್ಯ ವಿಜ್ಞಾನ ವಿಭಾಗದಲ್ಲಿ ಶೇ 94.5 ಅಂಕ ಪಡೆದಿದ್ದಾರೆ. ಈಕೆ ಕೋರಮಂಗಲದ ವಿತರಕ ರವಿ ಪುತ್ರಿ.

ತಲಘಟ್ಟಪುರದ ದೀಕ್ಷಾ ಸಿಎಫ್‌ಎಲ್ ಕಾಲೇಜಿನ ಬಿ.ಕೆ. ವರ್ಷಿತಾ ವಿಜ್ಞಾನ ವಿಭಾಗದಲ್ಲಿ ಶೇ 93.5 ಅಂಕ ಪಡೆದಿದ್ದಾರೆ. ಈಕೆ ಎಚ್‌ಎಸ್‌ಆರ್ ಬಡಾವಣೆಯ ವಿತರಕ ಬಿ.ಕೆ.ಕುಮಾರ್ ಪುತ್ರಿ.

ನಗರದಲ್ಲಿ ಇಂದು

ಬಸವೇಶ್ವರರ ಜಯಂತಿ: ಬಸವ ಉತ್ಸವಕ್ಕೆ ಚಾಲನೆ: ಶಿವರುದ್ರ ಸ್ವಾಮೀಜಿ, ಉಪಸ್ಥಿತಿ: ಸಿದ್ಧಯ್ಯ ಗುರುಗಳು, ನಂಜುಂಡಸ್ವಾಮಿ, ಆಶಯ ನುಡಿ: ಎಸ್. ಪಿನಾಕಪಾಣಿ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಜಗಜ್ಯೋತಿ ಬಸವೇಶ್ವರ ವಿದ್ಯಾರ್ಥಿನಿಲಯ, ಹೊಸಹಳ್ಳಿ ಮೆಟ್ರೊ ನಿಲ್ದಾಣದ ಪಕ್ಕ, ವಿಜಯನಗರ, ಬೆಳಿಗ್ಗೆ 6.45ರಿಂದ

ಬಸವ ಜಯಂತಿ: ಅಧ್ಯಕ್ಷತೆ: ಬಿ. ರಮೇಶ್, ಆಯೋಜನೆ ಮತ್ತು ಸ್ಥಳ: ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಳಿಗ್ಗೆ 9

ವಿಶ್ವ ಬಸವ ಜಯಂತಿ: ವಿಶ್ವಗುರು ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಅತಿಥಿಗಳು: ಕೆ.ಎಚ್. ಮುನಿಯಪ್ಪ, ರಾಮಲಿಂಗಾರೆಡ್ಡಿ, ಉಪಸ್ಥಿತಿ: ರಾಜೇಂದ್ರ ಚೋಳನ್, ಅಧ್ಯಕ್ಷತೆ: ಅರವಿಂದ ಜತ್ತಿ, 'ಜ್ಞಾನ ದಾಸೋಹ ರತ್ನ' ಪುರಸ್ಕಾರ ಸ್ವೀಕರಿಸುವವರು: ವೂಡೇ ಪಿ. ಕೃಷ್ಣ, 'ಜೀವಮಾನ ಸಾಧನೆ' ಪುರಸ್ಕಾರ ಸ್ವೀಕರಿಸುವವರು: ವಿಲಾಸವತಿ ಎಸ್. ಖೂಬಾ, ಗೌರವ ಪುರಸ್ಕಾರ ಸ್ವೀಕರಿಸುವವರು: ಚ.ಭೀ. ಸೋಮಶೆಟ್ಟಿ, ಆಯೋಜನೆ: ಬಸವ ಸಮಿತಿ, ಸ್ಥಳ: ಅನುಭವ ಮಂಟಪ ಸಭಾಂಗಣ, ಬಸವ ಸಮಿತಿ, ಬಸವೇಶ್ವರ ವೃತ್ತ, ಬೆಳಿಗ್ಗೆ 9.30ರಿಂದ

ಶಿವಶಕ್ತಿ ನಾಟ್ಯ ಶಾಲೆ 26ನೇ ವಾರ್ಷಿಕೋತ್ಸವ: ಉದ್ಘಾಟನೆ: ಪುರುಷೋತ್ತಮ ಬಿಳಿಮಲೆ, ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಎಸ್.ಆರ್. ವಿಶ್ವನಾಥ್, ಎಲ್.ಕೆ. ಅತೀಕ್, ರಾಧಾಕೃಷ್ಣ ಎಸ್. ಭಡ್ತಿ, 'ಶಕ್ತಿ ಸ್ವರೂಪಿಣೆ' ನೃತ್ಯ ರೂಪಕ ಪ್ರದರ್ಶನ: ಮಾರ್ಗದರ್ಶನ: ಗುಣವತಿ ಕೆ.ಆರ್., ಆಯೋಜನೆ: ಶಿವಶಕ್ತಿ ನಾಟ್ಯ ಶಾಲೆ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 5

88ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಅನೀಶ್, ನಾಗೇಶ್ ಮತ್ತು ತಂಡ, ವೀಣಾ–ಕೊಳಲು ವಾದನ: ಪ್ರವೀಣ್ ಗೋಡ್ಖಿಂಡಿ, ಜಯಂತಿ ಕುಮರೇಶ್, ಕೆ.ಯು. ಜಯಚಂದ್ರ ರಾವ್, ರೂಪಕ್ ಕಲ್ಲೂರ್ಕರ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

‘ಗುಣಮಟ್ಟದ ವಿದ್ಯುತ್ ಪೂರೈಕೆ’

ಸುಸ್ಥಿರ ಇಂಧನ, ಭಾರತದ ಕಾರ್ಯಸೂಚಿ 2047- ಅಂತರರಾಷ್ಟ್ರೀಯ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇಂಧನ ಕ್ಷೇತ್ರದಲ್ಲಿ ನಾವೀನ್ಯತೆ ಬೆಂಬಲಿಸಿ ಸುಸ್ಥಿರ ಭವಿಷ್ಯಕ್ಕಾಗಿ ಬೇರೆ ಬೇರೆ ಸಂಸ್ಥೆಗಳ ಸಹಯೋಗದೊಂದಿಗೆ ಕೆಲಸ ಮಾಡಲಾಗುವುದು. ಈ ಮೂಲಕ ಕೈಗೆಟುಕುವ ದರದಲ್ಲಿ ಗ್ರಾಹಕರಿಗೆ ಗುಣಮಟ್ಟದ ವಿದ್ಯುತ್ ಪೂರೈಸಲಾಗುವುದು’ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.

ಕಾಮನ್‌ವೆಲ್ತ್ ಲೀಗಲ್ ಎಜುಕೇಷನ್ ಅಸೋಸಿಯೇಷನ್ ಮತ್ತು ಇಂಧನ ಇಲಾಖೆ ಜಂಟಿಯಾಗಿ ನಗರದಲ್ಲಿ ಆಯೋಜಿಸಿದ್ದ ಸುಸ್ಥಿರ ಇಂಧನ, ಭಾರತದ ಕಾರ್ಯಸೂಚಿ 2047- ಇಂಧನ ಭದ್ರತೆಗೆ ಕಾನೂನು, ನೀತಿ ಹಾಗೂ ಆವಿಷ್ಕಾರಗಳ ಹೊಸ ಚಿಂತನೆ ಕುರಿತ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಸಮಾರೋಪ ಭಾಷಣ ಮಾಡಿದರು.

‘ಸಾಂಪ್ರದಾಯಿಕ ಮೂಲಗಳಿಂದ ನವೀಕರಿಸಬಹುದಾದ ಮೂಲಗಳಿಗೆ ಇಂಧನ ಪರಿವರ್ತನೆ ಮಹತ್ವಾಕಾಂಕ್ಷೆಯಾಗಿ ಉಳಿಯದೇ ಅನುಷ್ಠಾನಕ್ಕೆ ಕ್ರಮ ವಹಿಸಬೇಕಿದೆ. ನವೀಕರಿಸಬಹುದಾದ ಇಂಧನ ವಿಸ್ತರಣೆ, ಸಂಗ್ರಹಣೆಗೆ ಸೂಕ್ತ ವ್ಯವಸ್ಥೆ, ಮೂಲಸೌಕರ್ಯ ಬಲವರ್ಧನೆ ಮೂಲಕ ಕರ್ನಾಟಕ ಮುಂದಾಳತ್ವ ಮುಂದುವರಿಸಲಿದೆ’ ಎಂದು ಹೇಳಿದರು.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ ಮಾತನಾಡಿ, ‘ಈ ಸಮ್ಮೇಳನದ ನಿರ್ಣಯಗಳು ನವೀಕರಿಸಬಹುದಾದ ಇಂಧನ ವಲಯದಲ್ಲಿ ಬದಲಾವಣೆಗೆ ಕಾರಣವಾಗಲಿವೆ’ ಎಂದರು.

ಸುಪ್ರೀಂಕೋರ್ಟ್ ನ್ಯಾಯಮೂರ್ತಿ ವಿಕ್ರಮನಾಥ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಡಾ.ರಾಮ ಪ್ರಸಾತ್ ಮನೋಹರ್, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್.ಶಿವಶಂಕರ್, ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ ಉಪಸ್ಥಿತರಿದ್ದರು.



ಅಂತರರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಕೆ.ಜೆ. ಜಾರ್ಜ್, ಎಚ್‌.ಕೆ. ಪಾಟೀಲ, ನ್ಯಾ. ವಿಕ್ರಮನಾಥ್, ಶಾಲಿನಿ ರಜನೀಶ್, ಗೌರವ್ ಗುಪ್ತ ಉಪಸ್ಥಿತರಿದ್ದರು

ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಘಟನೆ

ಸಫಾರಿ ವಾಹನದ ಮೇಲೆ ಸಾಕಾನೆ ದಾಳಿ

ಪ್ರಜಾವಾಣಿ ವಾರ್ತೆ

ಬನ್ನೇರುಘಟ್ಟ (ಆನೇಕಲ್): ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಸಫಾರಿ ವಾಹನದ ಮೇಲೆ ಸಾಕಾನೆಯೊಂದು ದಾಳಿ ನಡೆಸಿದೆ. ವಾಹನದ ಗಾಜು ಪುಡಿ ಪುಡಿಯಾಗಿದೆ.

ಉದ್ಯಾನದ ಸಾಕಾನೆ ವನರಾಜ ಬೆಟ್ಟದಿಂದ ಇಳಿದು ಬರುವಾಗ ಏಕಾಏಕಿ ನುಗ್ಗಿದೆ. ಸಫಾರಿ ವಾಹನದ ಮೇಲೆ ದಾಳಿ ಮಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಬನ್ನೇರುಘಟ್ಟದಲ್ಲಿ ಒಟ್ಟು 26 ಆನೆಗಳಿವೆ. ಈ ಪೈಕಿ 48 ವರ್ಷದ ವನರಾಜ ಸಹ ಒಂದಾಗಿದೆ. ಉದ್ಯಾನದ ಆನೆಗಳನ್ನು ರಾತ್ರಿ ಕಾಡಿನೊಳಗೆ ಬಿಟ್ಟು ಬೆಳಿಗ್ಗೆ ಉದ್ಯಾನದತ್ತ ಕರೆದುಕೊಂಡು ಬರುವುದು ವಾಡಿಕೆ. ಕಾಡಿನೊಳಗಿನಿಂದ ಉದ್ಯಾನದತ್ತ ಆನೆಗಳನ್ನು ಕರೆತರಲು ಹೋದಾಗ ಏಕಾಏಕಿ ವಾಹನದತ್ತ ನುಗ್ಗಿದೆ.

‘ಪ್ರಾಣಿಗಳನ್ನು ವೀಕ್ಷಿಸುವಾಗ ಪ್ರಾಣಿಗಳ ಸಮೀಪಕ್ಕೆ ಹೋಗದಂತೆ ಉದ್ಯಾನದ ಸಫಾರಿ ಚಾಲಕರಿಗೆ ತಿಳಿಸಲಾಗಿದೆ. ಕೆಎಸ್‌ಟಿಡಿಸಿ ಸಿಬ್ಬಂದಿಗೂ ಎಚ್ಚರಿಕೆ ನೀಡಲಾಗಿದೆ. ಉದ್ಯಾನದಲ್ಲಿ ಪ್ರವಾಸಿಗರ ಸುರಕ್ಷತೆ ಪ್ರಥಮ ಆದ್ಯತೆಯಾಗಿದೆ. ಈ ನಿಟ್ಟಿನಲ್ಲಿ ಹಲವು ಕ್ರಮಗಳನ್ನು ವಹಿಸಲಾಗಿದೆ’ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸೂರ್ಯಸೇನ್ ಅವರು ತಿಳಿಸಿದರು.


ಸಫಾರಿ ವಾಹನದ ಮೇಲೆ ದಾಳಿ ಮಾಡಿದ ಸಾಕಾನೆ ವನರಾಜ

14 ಜಿಲ್ಲೆಗಳಲ್ಲಿ ಇಂದು ಮಳೆ ಸಾಧ್ಯತೆ

ಬೆಂಗಳೂರು: ದಕ್ಷಿಣ ಕನ್ನಡ, ಬೆಳಗಾವಿ, ಶಿವಮೊಗ್ಗ ಸೇರಿದಂತೆ ರಾಜ್ಯದ 14 ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಏ.20 ರಂದು ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಹಾಗೂ ಹಾಸನ ಜಿಲ್ಲೆಗಳ ಒಂದೆರಡು ಕಡೆ ಗುಡುಗು ಸಹಿತ ಮಳೆಯಾಗಬಹುದು. ಉತ್ತರ ಒಳನಾಡಿನ ಬಾಗಲಕೋಟೆ, ಬೆಳಗಾವಿ, ಬೀದರ್, ಧಾರವಾಡ, ಗದಗ, ವಿಜಯಪುರ ಹಾಗೂ ಕಲಬುರಗಿ ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಗುಡುಗು ಸಹಿತ ಮಳೆಯಾಗಲಿದ್ದು, ಬಲವಾಗಿ ಗಾಳಿ ಬೀಸುವ ಸಾಧ್ಯತೆಯಿದೆ. ಕರಾವಳಿ ಭಾಗದ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಒಂದೆರಡು ಕಡೆಗಳಲ್ಲಿ ಹಗುರ ಮಳೆಯಾಗಬಹುದು.

ಕಲಬುರಗಿಯಲ್ಲಿ ಭಾನುವಾರ ಅತ್ಯಧಿಕ 42 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ರಾಯಚೂರಿನಲ್ಲಿ 41.4, ಡಿಗ್ರಿ ಸೆಲ್ಸಿಯಸ್, ಬೀದರ್‌ನಲ್ಲಿ 41.2 ಡಿಗ್ರಿ, ಕೊಪ್ಪಳದಲ್ಲಿ 39.9 ಡಿಗ್ರಿ, ವಿಜಯಪುರದಲ್ಲಿ 39.6 ಡಿಗ್ರಿ, ಬಾಗಲಕೋಟೆ ಹಾಗೂ ಗದಗದಲ್ಲಿ 39.2 ಡಿಗ್ರಿ, ಬೆಂಗಳೂರು ನಗರದಲ್ಲಿ 37 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ.

ಸಿಡಿಲಿಗೆ ಇಬ್ಬರು ಸಾವು: ಬೆಳಗಾವಿ, ವಿಜಯಪುರ, ಕೊಡಗು ಮತ್ತು ಕಲಬುರಗಿ, ಬೀದರ್ ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಗಿದೆ. ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನಲ್ಲಿ ಕುರಿಗಾಹಿ ಮತ್ತು ಬಾಗಲಕೋಟೆ ಜಿಲ್ಲೆಯ ಇಳಕಲ್‌ನಲ್ಲಿ ಮಹಿಳೆಯೊಬ್ಬರು ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ಬಿಡಿಎ ಸ್ವತ್ತು ವರ್ಗ: ನಿವೇಶನದಾರರು ಅತಂತ್ರ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಸ್ವತ್ತುಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ (ಜಿಬಿಎ) ವರ್ಗಾಯಿಸಲಾಗಿದೆ. ಆದರೆ, ಬಿಡಿಎ ನಿವೇಶನದಾರರಿಗೆ ಕಂದಾಯ ಪಾವತಿಸಲು ಎರಡೂ ಪ್ರಾಧಿಕಾರಗಳಲ್ಲಿ ಅವಕಾಶ ಇಲ್ಲದೇ ಇರುವುದರಿಂದ ಅತಂತ್ರ ಸ್ಥಿತಿಯಲ್ಲಿದ್ದಾರೆ.

ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ 1ರಿಂದ 9ನೇ ಬ್ಲಾಕ್‌ನಲ್ಲಿರುವ ಬಿಡಿಎ ಸ್ವತ್ತುಗಳನ್ನು 2026ರ ಜನವರಿ 8ರಂದು ಯಥಾವತ್ತಾಗಿ ಜಿಬಿಎಗೆ ವರ್ಗಾಯಿಸಲಾಗಿದೆ. ಜಿಬಿಎನಲ್ಲಿ ಶೇಕಡ 5ರಷ್ಟು ರಿಯಾಯಿತಿ ನೀಡಿ ಕಂದಾಯ ಸ್ವೀಕರಿಸಲಾಗುತ್ತಿದೆ. ಆದರೆ, ಬಿಡಿಎ ನಿವೇಶನಗಳಿಗೆ ಕಂದಾಯ ಪಾವತಿಸಲು ಅನುವು ಮಾಡಿಕೊಟ್ಟಿಲ್ಲ.

‘ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಈ ಬಗ್ಗೆ ವಿಚಾರಿಸಿದರೆ ನಮ್ಮಲ್ಲಿ ಕಂದಾಯ ಸ್ವೀಕರಿಸಲು ಅವಕಾಶ ಕಲ್ಪಿಸಿಲ್ಲ. ಆದ್ದರಿಂದ ಜಿಬಿಎನಲ್ಲೇ ಪಾವತಿಸಬೇಕು ಎನ್ನುತ್ತಾರೆ. ಆದರೆ, ಜಿಬಿಎನಲ್ಲಿ ಪ್ರಯತ್ನಿಸಿದರೆ ಕಂದಾಯ ಪಾವತಿಸಲು ಯಾವುದೇ ಆನ್‌ಲೈನ್ ವ್ಯವಸ್ಥೆಯನ್ನೂ ಕಲ್ಪಿಸಿಲ್ಲ’ ಎಂದು ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ ನಿವೇಶನದಾರರು ಕಳವಳ ವ್ಯಕ್ತಪಡಿಸಿದ್ದಾರೆ.

‘ನಿತ್ಯ ಸಾವಿರಾರು ನಿವೇಶನ ಮಾಲೀಕರು ಕಂದಾಯ ಎಲ್ಲಿ ಪಾವತಿಸಬೇಕು ಎಂಬುದು ತಿಳಿಯದೆ ಸಂಘಕ್ಕೆ ಬಂದು ಮಾಹಿತಿ ಕೇಳುತ್ತಿದ್ದಾರೆ. ಮೆಸೇಜ್ ಹಾಗೂ ದೂರವಾಣಿ ಕರೆ ಮಾಡಿಯೂ ಕೇಳುತ್ತಿದ್ದಾರೆ. ಏಪ್ರಿಲ್ ತಿಂಗಳಲ್ಲಿ ಪಾವತಿಸುವವರಿಗೆ ಶೇ 5ರಷ್ಟು ರಿಯಾಯಿತಿ ನೀಡಲಾಗುವುದು ಎಂದು ಹೇಳಲಾಗಿದೆ. ಆದ್ದರಿಂದ ಕೂಡಲೇ ಕಂದಾಯ ಪಾವತಿಸಿಕೊಳ್ಳಲು ಅವಕಾಶ ನೀಡಬೇಕು’ ಎಂದು ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಡಿ.ಎಸ್. ಗೌಡ ಒತ್ತಾಯಿಸಿದ್ದಾರೆ.

‘ಬಿಡಿಎ ವ್ಯಾಪ್ತಿಯಲ್ಲಿದ್ದ ಬನಶಂಕರಿ ಮತ್ತು ವಿಶ್ವೇಶ್ವರಯ್ಯ ಲೇಔಟ್‌ಗಳನ್ನು ಜಿಬಿಎಗೆ ವಹಿಸಲಾಗಿದೆ. ತೆರಿಗೆ ಪಾವತಿಗೆ ಮಾತ್ರ ಈ ಬಡಾವಣೆಗಳು ಜಿಬಿಎ ವ್ಯಾಪ್ತಿಗೆ ಒಳಪಡುತ್ತವೆ. ಉಳಿದಂತೆ ಪೂರ್ಣ ಜವಾಬ್ದಾರಿ ಬಿಡಿಎಗೆ ಸೇರಿದೆ’ ಎಂದು ಬಿಡಿಎ ಅಧಿಕಾರಿಯೊಬ್ಬರು ತಿಳಿಸಿದರು.

‘ಕಂಪನಿ ಸೆಕ್ರೆಟರಿ’ ಹುದ್ದೆಯ ಔದ್ಯೋಗಿಕ ಆಶಾಕಿರಣ

ಬೆಂಗಳೂರು : ಕಾಲ ಬದಲಾದಂತೆ ಔದ್ಯೋಗಿಕ ಕ್ಷೇತ್ರದಲ್ಲಿ ತೀವ್ರ ಪೈಪೋಟಿ ಏರ್ಪಟ್ಟಿದೆ. ಈ ಹಂತದಲ್ಲಿ ಕಂಪನಿ ಸೆಕ್ರೆಟರಿ ಹುದ್ದೆ ಸದ್ದಿಲ್ಲದೇ ಬೇಡಿಕೆ ಹೆಚ್ಚಿಸಿಕೊಳ್ಳುವುದಲ್ಲದೇ ತನ್ನ ಪ್ರಾಮುಖ್ಯತೆಯನ್ನು ಸಾಬೀತುಪಡಿಸಿಕೊಂಡಿದೆ. ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಕಾರ್ಪೊರೇಟ್ ಜಗತ್ತಿನಲ್ಲಿ, ಕಂಪನಿ ಸೆಕ್ರೆಟರಿ (ಸಿಎಸ್) ವೃತ್ತಿಯು ಅತ್ಯಂತ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ಕೇವಲ ಆಡಳಿತಾತ್ಮಕ ಕೆಲಸಗಳಿಗೆ ಸೀಮಿತವಾಗಿದ್ದ ಈ ವೃತ್ತಿ, ಇಂದು ಜಾಗತಿಕ ಮಟ್ಟದ ಆಡಳಿತ ಮತ್ತು ಕಾರ್ಯತಂತ್ರ ರೂಪಿಸುವ ಜವಾಬ್ದಾರಿಯಾಗಿ ಮಾರ್ಪಟ್ಟಿದೆ. ಇಂಥಹಾ ಹುದ್ದೆಗೆ ಅಗತ್ಯ ತರಬೇತಿ, ಮಾರ್ಗದರ್ಶನವನ್ನು ಇನ್ಸಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ (ಐಸಿಎಸ್‌ಐ) ನೀಡುತ್ತಿದ್ದು, ಉನ್ನತ ಭವಿಷ್ಯದ ಕನಸು ಕಂಡಿರುವ ವಿದ್ಯಾರ್ಥಿಗಳು ಈ ಸದಾವಕಾಶವನ್ನು ಬಳಸಿಕೊಳ್ಳಬಹುದಾಗಿದೆ.

ಕಂಪನಿ ಸೆಕ್ರೆಟರಿ ಎನ್ನುವ ಹುದ್ದೆ ಕೇವಲ ಒಂದು ಅಧಿಕಾರಿಯ ಹಂತವಾಗಿ ಉಳಿದಿಲ್ಲ. ಬದಲಿಗೆ ಸಂಸ್ಥೆಯ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಹೆಚ್ಚಿಸುವ ಶಕ್ತಿ, ಕಾನೂನು, ಆಡಳಿತ, ಅನುಸರಣೆ ಮತ್ತು ಆಯಕಟ್ಟಿನ ನಿರ್ವಹಣೆಯಲ್ಲಿ ಪರಿಣತಿ ಹೊಂದಿರುವ ಇವರು, ಕಂಪನಿಯ ಮಂಡಳಿಗಳಿಗೆ ಮಾರ್ಗದರ್ಶನ ನೀಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಸುಸ್ಥಿರತೆ ಮತ್ತು ಹವಾಮಾನ ಅಪಾಯಗಳ ಬಗ್ಗೆ ಮಂಡಳಿಗಳಿಗೆ ಸಲಹೆ ನೀಡುವುದು ಕೂಡ ಇವರ ಪ್ರಮುಖ ಜವಾಬ್ದಾರಿಯಾಗಿದೆ.

ಕಂಪನಿಯ ನೈತಿಕತೆ ಮತ್ತು ಆಡಳಿತ ಪದ್ಧತಿಗಳನ್ನು ಉತ್ತಮಪಡಿಸುವ ಮೂಲಕ, ಹೂಡಿಕೆದಾರರು ಮತ್ತು ಸಂಬಂಧಪಟ್ಟವರಲ್ಲಿ ನಂಬಿಕೆಯನ್ನು ವೃದ್ಧಿಸುವ ಕೆಲಸವನ್ನು ಇವರು ಮಾಡುತ್ತಾರೆ. ಆರ್ಥಿಕವಲ್ಲದ ವರದಿಗಳನ್ನು ಚಾಂಪಿಯನ್ ಮಾಡುವ ಮೂಲಕ ಇವರು ನಾಳೆಯ ಸಬಲ ಕಾರ್ಪೊರೇಟ್ ವ್ಯವಸ್ಥೆಗೆ ದಾರಿದೀಪವಾಗಿದ್ದಾರೆ.

ಬ್ಯಾಂಕಿಂಗ್, ಹಣಕಾಸು, ಉತ್ಪಾದನಾ ವಲಯ, ಬಂಡವಾಳ ಮಾರುಕಟ್ಟೆಗಳು, ಐಟಿ ಮತ್ತು ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕಂಪನಿ ಸೆಕ್ರೆಟರಿಗಳಿಗೆ ವ್ಯಾಪಕ ಬೇಡಿಕೆಯಿದೆ. ಸ್ವತಂತ್ರವಾಗಿ ಪ್ರಾಕ್ಟೀಸ್ ಮಾಡಲು ಇಚ್ಛಿಸುವವರು 'ಸರ್ಟಿಫಿಕೇಟ್ ಆಫ್ ಪ್ರಾಕ್ಟೀಸ್" ಪಡೆಯುವ ಮೂಲಕ ಉದ್ಯಮಶೀಲರಾಗಿಯೂ ಬೆಳೆಯಬಹುದು.

ಭಾರತೀಯ ಕಂಪನಿಗಳ ಕಾಯ್ದೆ 2013ರ ಅಡಿಯಲ್ಲಿ, ಕಂಪನಿ ಸೆಕ್ರೆಟರಿಯನ್ನು 'ಕೀ ಮ್ಯಾನೇಜರಿಯಲ್ ಪರ್ಸನಲ್" (ಕೆಎಂಪಿ) ಎಂದು ಗುರುತಿಸಲಾಗಿದೆ. ಅಂದರೆ, ಇವರು ಕಂಪನಿಯ ಎಂಡಿ, ಸಿಇಒ ಮತ್ತು ಸಿಎಫ್‌ಒಗಳಷ್ಟೇ ಸಮಾನವಾದ ಗೌರವ ಮತ್ತು ಜವಾಬ್ದಾರಿಯನ್ನು ಹೊಂದಿರುತ್ತಾರೆ. ಅಲ್ಲದೆ, ಇದೇ ಕಾಯ್ದೆಯು ಕಂಪನಿಗಳಲ್ಲಿ 'ಸೆಕ್ರೆಟೇರಿಯಲ್ ಆಡಿಟ್" ಕಡ್ಡಾಯಗೊಳಿಸಿದ್ದು, ಇದು ವೃತ್ತಿಪರರಿಗೆ ಹೆಚ್ಚಿನ ಅವಕಾಶಗಳನ್ನು ತೆರೆದಿದೆ.

ಮುಖ್ಯಾಂಶಗಳು

- ಐಸಿಎಸ್‌ಐ ತನ್ನ ಸದಸ್ಯರಿಗೆ ದೇಶಾದ್ಯಂತ ಒಟ್ಟು 4 ಪ್ರಾದೇಶಿಕ ಕಚೇರಿಗಳು, 76 ಶಾಖಾ ಕಚೇರಿಗಳು ಮತ್ತು 4 ಕಾರ್ಪೊರೇಟ್ ಆಡಳಿತ, ಸಂಶೋಧನೆ ಮತ್ತು ತರಬೇತಿ ಕೇಂದ್ರಗಳ (ಸಿಸಿಜಿಆರ್‌ಟಿ) ಮೂಲಕ ವಿವಿಧ ಸಾಮರ್ಥ್ಯ ವೃದ್ಧಿ ಮತ್ತು ನಾಯಕತ್ವ ಪ್ರಗತಿಗೆ ನಾನಾ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ.
- ಶ್ರೇಷ್ಠ ಹಿನ್ನೆಲೆ ಮತ್ತು ಜಾಗತಿಕ ಮಟ್ಟದಲ್ಲಿ ಅತ್ಯಂತ ಉನ್ನತ ಬೇಡಿಕೆಯನ್ನು ಹೊಂದಿರುವ ಕಂಪನಿ ಸೆಕ್ರೆಟರಿ ವೃತ್ತಿ ಔದ್ಯೋಗಿಕ ವಲಯದಲ್ಲಿ ಪ್ರಮುಖ ಸ್ಥಾನ ಪಡೆದಿದೆ. ವಿಶೇಷವಾಗಿ ಕಂಪನಿಗಳ ಪ್ರಗತಿಯಲ್ಲಿ ಪ್ರಮುಖ ಸ್ಥಾನ ಪಡೆಯುವ ಬೋರ್ಡ್ ಸಲಹೆಗಾರರಾಗಿ, ಕಾರ್ಪೊರೇಟ್ ವ್ಯವಸ್ಥಾಪಕರಾಗಿ ತಮ್ಮ ಸಾಮರ್ಥ್ಯ ತೋರಲು ಬಯಸುವವರಿಗೆ ಆದ್ಯತೆಯ ವೃತ್ತಿ ಆಯ್ಕೆಯಾಗಿದೆ.
- CSEET ಪರೀಕ್ಷೆಯನ್ನು ವರ್ಷಕ್ಕೆ 3 ಬಾರಿ ಫೆಬ್ರವರಿ, ಜೂನ್ ಮತ್ತು ಅಕ್ಟೋಬರ್ ತಿಂಗಳಲ್ಲಿ ನಡೆಸಲಾಗುತ್ತದೆ.

ಪ್ರಸ್ತುತಿ ಪಿವಿ ಬ್ರ್ಯಾಂಡ್ ಸ್ಪಾಟ್



ಕೋರ್ಸ್ ವಿವರ, ದಾಖಲಾತಿ ಪ್ರಕ್ರಿಯೆ

ಇನ್ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ (ಐಸಿಎಸ್‌ಐ) ಈ ಕೋರ್ಸ್ ನಡೆಸುತ್ತದೆ. ಈ ಕೋರ್ಸ್‌ಗೆ ದಾಖಲಾತಿ ಪಡೆಯಲು ಮೊದಲಿಗೆ ಕಂಪನಿ ಸೆಕ್ರೆಟರಿ ಎಕ್ಸಿಕ್ಯೂಟಿವ್ ಎಂಟ್ರೆನ್ಸ್ ಟೆಸ್ಟ್ (ಸಿಎಸ್‌ಇಇಟಿ) ಉತ್ತೀರ್ಣರಾಗಬೇಕು. ಪದವೀಧರರು, ಸ್ನಾತಕೋತ್ತರ ಪದವೀಧರರು, ಐಸಿಎಂಎಐ ಅಥವಾ ಐಸಿಎಐ ಪರೀಕ್ಷೆಗಳಲ್ಲಿ ತೇರ್ಗಡೆಯಾದವರಿಗೆ ಈ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ಇದೆ. ಈ ಕೋರ್ಸ್‌ನಲ್ಲಿ ಎಕ್ಸಿಕ್ಯೂಟಿವ್ ಪ್ರೋಗ್ರಾಂ ಮತ್ತು ಪ್ರೊಫೆಷನಲ್ ಪ್ರೋಗ್ರಾಂ ಎನ್ನುವ ಎರಡು ಹಂತಗಳು ಇದರಲ್ಲಿರುತ್ತವೆ. ಕೇವಲ ಪರೀಕ್ಷೆಗಳಷ್ಟೇ ಅಲ್ಲದೆ, 21 ತಿಂಗಳ ಪ್ರಾಯೋಗಿಕ ತರಬೇತಿ ಮತ್ತು ಎಕ್ಸಿಕ್ಯೂಟಿವ್ ಹಾಗೂ ಕಾರ್ಪೊರೇಟ್ ಲೀಡರ್‌ಶಿಪ್ ಡೆವಲಪ್‌ಮೆಂಟ್ ಪ್ರೋಗ್ರಾಂಗಳಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳುವುದು ಕಡ್ಡಾಯವಾಗಿದೆ. ಪರೀಕ್ಷೆಗಳು ವರ್ಷಕ್ಕೆ ಎರಡು ಬಾರಿ (ಜೂನ್ ಮತ್ತು ಡಿಸೆಂಬರ್) ದೇಶಾದ್ಯಂತ ಸುಮಾರು 200 ಕೇಂದ್ರಗಳಲ್ಲಿ ನಡೆಯುತ್ತವೆ. ಇಡೀ ನೋಂದಣಿ ಪ್ರಕ್ರಿಯೆಯು ಆನ್‌ಲೈನ್ ಮೂಲಕ ಸುಲಭವಾಗಿ ಲಭ್ಯವಿದೆ.

ಜಾಗತಿಕ ಮನ್ನಣೆ

ಕಂಪನಿ ಸೆಕ್ರೆಟರಿ ಪದವಿಯನ್ನು UGC ಸ್ನಾತಕೋತ್ತರ ಪದವಿಗೆ ಸಮಾನವೆಂದು ಪರಿಗಣಿಸಿದೆ. ಇದರಿಂದಾಗಿ ಸಿಎಸ್ ಮಾಡಿದವರು ಶೈಕ್ಷಣಿಕವಾಗಿ ಹೆಚ್ಚಿನ ಸಂಶೋಧನೆ ಅಥವಾ ಪಿಎಚ್‌ಡಿ ಮಾಡಲು ಅವಕಾಶವಿದೆ. ಅಷ್ಟೇ ಅಲ್ಲದೆ, UKENIC ಮನ್ನಣೆಯ ಪ್ರಕಾರ, ಸಿಎಸ್ ಎಕ್ಸಿಕ್ಯೂಟಿವ್ ಮತ್ತು ಪ್ರೊಫೆಷನಲ್ ಪ್ರೋಗ್ರಾಂಗಳು UK ಮತ್ತು UAEಗಳಲ್ಲಿ ಕ್ರಮವಾಗಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳಿಗೆ ಸಮಾನವಾಗಿವೆ.

ವಿನಾಯಿತಿ ಮತ್ತು ರಿಯಾಯಿತಿ

ಐಸಿಎಸ್‌ಐ ಸಂಸ್ಥೆಯು ಸಮಾಜದ ವಿವಿಧ ವರ್ಗಗಳ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ಮತ್ತು ಶುಲ್ಕದ ರಿಯಾಯಿತಿಯನ್ನು ನೀಡುತ್ತದೆ. ಹುತಾತ್ಮ ಸೈನಿಕರ ಮಕ್ಕಳು ಮತ್ತು ವಿಧವೆಯರಿಗೆ ಶೇ.100ರಷ್ಟು ಫೀಸ್ ರಿಯಾಯಿತಿ ನೀಡಲಾಗುತ್ತದೆ. ಜೊತೆಗೆ, ಜಮ್ಮು ಮತ್ತು ಕಾಶ್ಮೀರ, ಲಡಾಖ್ ವಿದ್ಯಾರ್ಥಿಗಳಿಗೆ ಶೇ.100ರಷ್ಟು ರಿಯಾಯಿತಿ ಇರಲಿದೆ. ಈಶಾನ್ಯ ರಾಜ್ಯಗಳು, ಹಿಮಾಚಲ ಪ್ರದೇಶ ಮತ್ತು ಎಸ್‌ಸಿ/ಎಸ್‌ಟಿ ಹಾಗೂ ದೈಹಿಕ ಅಂಗವಿಕಲ ವಿದ್ಯಾರ್ಥಿಗಳಿಗೆ ಶೇ.50ರಷ್ಟು ರಿಯಾಯಿತಿ ನೀಡಲಾಗುತ್ತದೆ. ವಿಶೇಷವಾಗಿ ಆರ್ಥಿಕವಾಗಿ ಹಿಂದುಳಿದ ಅರ್ಹ ವಿದ್ಯಾರ್ಥಿಗಳಿಗಾಗಿ 'ಸ್ಟೂಡೆಂಟ್ ಎಜುಕೇಶನ್ ಫಂಡ್ ಟ್ರಸ್ಟ್' ನೆರವು ನೀಡಲು ಕಾರ್ಯನಿರ್ವಹಿಸುತ್ತದೆ. ವೃತ್ತಿಜೀವನದಲ್ಲಿ ಸವಾಲು ಮತ್ತು ಆರ್ಥಿಕ ಭದ್ರತೆಯನ್ನು ಬಯಸುವ ವಿದ್ಯಾರ್ಥಿಗಳಿಗೆ ಕಂಪನಿ ಸೆಕ್ರೆಟರಿ ಒಂದು ಉತ್ತಮ ಆಯ್ಕೆಯಾಗಿದೆ. ದೇಶದ ಮೂಲೆ ಮೂಲೆಗಳಲ್ಲಿರುವ ಐಸಿಎಸ್‌ಐ ಕಚೇರಿಗಳು ಮತ್ತು ಪ್ರಾದೇಶಿಕ ಕೇಂದ್ರಗಳು ವಿದ್ಯಾರ್ಥಿಗಳಿಗೆ ನಿರಂತರ ಮಾರ್ಗದರ್ಶನ ನೀಡುತ್ತಿವೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ www.icsi.edu ಜಾಲತಾಣಕ್ಕೆ ಭೇಟಿ ನೀಡಬಹುದು.

ಅಗ್ಗದ ಮದ್ಯ ಅಗ್ಗ, ದುಬಾರಿ ಮದ್ಯ ತುಟ್ಟಿ

ಅಬಕಾರಿ ಸುಂಕ ನೀತಿಯಲ್ಲಿ ಸಮಗ್ರ ಬದಲಾವಣೆಗೆ ಸರ್ಕಾರದ ಕ್ರಮ • ಕರಡು ಮಸೂದೆ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯದ ಮೇಲೆ ವಿಧಿಸುತ್ತಿದ್ದ ಅಬಕಾರಿ ಸುಂಕ ನೀತಿಯಲ್ಲಿ ಭಾರಿ ಬದಲಾವಣೆಗೆ ರಾಜ್ಯ ಸರ್ಕಾರವು ಮುಂದಾಗಿದ್ದು, ಮಧ್ಯಮ ಮತ್ತು ಪ್ರೀಮಿಯಂ ದರದ ಮದ್ಯದ ಮೇಲಿನ ಸುಂಕ ಭಾರಿ ಪ್ರಮಾಣದಲ್ಲಿ ಏರಿಕೆಯಾಗಲಿದೆ. ಅಗ್ಗದ ಮದ್ಯದ ಬೆಲೆ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಲಿದೆ.

ಅಬಕಾರಿ ಸುಂಕ ನೀತಿಯನ್ನು ಸಮಗ್ರವಾಗಿ ಬದಲಾವಣೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದರು. ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರೂ ವಿಧಾನ ಮಂಡಲದ ಉಭಯ ಸದನಗಳಲ್ಲಿ, ಮದ್ಯದ ಮೇಲಿನ ತೆರಿಗೆ ಸ್ಲ್ಯಾಬ್‌ಗಳನ್ನು ಬದಲಾವಣೆ ಮಾಡುವುದಾಗಿ ಹೇಳಿದ್ದರು.

ಈಗ ಬ್ರ್ಯಾಂಡಿ, ವಿಸ್ಕಿ, ಜಿನ್, ರಮ್‌ನಂತಹ ಐಎಂಎಲ್ ಮೇಲಿನ 16 ತೆರಿಗೆ ದರದ ಸ್ಲ್ಯಾಬ್‌ಗಳು ಜಾರಿಯಲ್ಲಿವೆ. ಇದನ್ನು 8ಕ್ಕೆ ಇಳಿಸಲು ಸರ್ಕಾರ ಕ್ರಮ ತೆಗೆದುಕೊಂಡಿದೆ. ಈ ಸಲುವಾಗಿ 'ಕರ್ನಾಟಕ ಅಬಕಾರಿ (ಅಬಕಾರಿ ಸುಂಕ ಮತ್ತು ಶುಲ್ಕ) (ಎರಡನೇ ತಿದ್ದುಪಡಿ) ನಿಯಮಗಳು–2026'ರ ಕರಡನ್ನು ಹೊರಡಿಸಿದೆ.

ಆರಂಭಿಕ ಘೋಷಿತ ದರದ ಮೊದಲ ಸ್ಲ್ಯಾಬ್ ಅನ್ನು ಈ ಮೊದಲಿನಂತೆಯೇ ₹0ಯಿಂದ ₹470ರಷ್ಟೇ ಉಳಿಸಿಕೊಳ್ಳಲಾಗಿದೆ. ಈಗ ಇದಕ್ಕೆ ₹297 ಹೆಚ್ಚುವರಿ ಅಬಕಾರಿ ಸುಂಕ ವಿಧಿಸಲಾಗುತ್ತಿದ್ದು, ಪ್ರಸ್ತಾಪಿತ ಕರಡು ಮಸೂದೆಯಲ್ಲಿ ಈ ದರವನ್ನು ₹50ಕ್ಕೆ ಇಳಿಸಲಾಗಿದೆ. ₹471–₹520ರ ಎರಡನೇ ಸ್ಲ್ಯಾಬ್ ಅನ್ನೂ ಉಳಿಸಿಕೊಂಡು, ಅದಕ್ಕೆ ವಿಧಿಸುತ್ತಿರುವ ಹೆಚ್ಚುವರಿ ಅಬಕಾರಿ ಸುಂಕವನ್ನು ₹367ರಿಂದ ₹220ಕ್ಕೆ ಇಳಿಸಲಾಗುತ್ತದೆ. ಈ ಎರಡೂ ಸ್ಲ್ಯಾಬ್‌ಗಳ ಅಡಿಯಲ್ಲಿ ಬರುವ ಮದ್ಯದ ಮಾರಾಟ ಬೆಲೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಲಿದೆ.

ಆದರೆ, ನಂತರದ ಆರು ತೆರಿಗೆ ಸ್ಲ್ಯಾಬ್‌ಗಳನ್ನು ಸಮಗ್ರವಾಗಿ ಬದಲಾವಣೆ ಮಾಡಲಾಗಿದೆ. ಈಗ ಜಾರಿಯಲ್ಲಿರುವ ಸುಂಕಕ್ಕಿಂತ ಹೆಚ್ಚು ಸುಂಕ ವಿಧಿಸಲು ಕರಡು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ಈಗ 16ನೇ ತೆರಿಗೆ ಸ್ಲ್ಯಾಬ್‌ನಲ್ಲಿ (₹20,001 ಮತ್ತು ಮೇಲ್ಪಟ್ಟು ಘೋಷಿತ ದರ) ₹3,000 ಹೆಚ್ಚುವರಿ ಅಬಕಾರಿ ಸುಂಕ ವಿಧಿಸಲಾಗುತ್ತಿದೆ. ಇದು ಈಗ ಇರುವ ಅತ್ಯಂತ ಕಡೆಯ ತೆರಿಗೆ ಸ್ಲ್ಯಾಬ್. ಕರಡು ಮಸೂದೆಯಲ್ಲಿ ಕಡೆಯ ತೆರಿಗೆ ಸ್ಲ್ಯಾಬ್‌ನ ಘೋಷಿತ ದರವನ್ನು ₹5,001 ಮತ್ತು ಅದಕ್ಕಿಂತ ಹೆಚ್ಚಿನ ಮೊತ್ತಕ್ಕೆ ಮಿತಿಗೊಳಿಸಲಾಗಿದೆ. ಈ ಸ್ಲ್ಯಾಬ್‌ಗೆ ₹3,700 ಹೆಚ್ಚುವರಿ ಅಬಕಾರಿ ಸುಂಕ ವಿಧಿಸಲಾಗುತ್ತದೆ.

ಈಗ ಜಾರಿಯಲ್ಲಿರುವ ಸುಂಕ ನೀತಿಯ ಪ್ರಕಾರ ₹5,001ರ ಘೋಷಿತ ದರದ ಮದ್ಯಕ್ಕೆ ₹1,600ರಷ್ಟು ಹೆಚ್ಚುವರಿ ಅಬಕಾರಿ ಸುಂಕವಷ್ಟೇ ಅನ್ವಯವಾಗುತ್ತಿತ್ತು. ಕರಡು ಮಸೂದೆ ಜಾರಿಯಾದರೆ ಅಷ್ಟೇ ಘೋಷಿತ ದರದ ಮದ್ಯಕ್ಕೆ ಹೆಚ್ಚುವರಿಯಾಗಿ ₹2,100ರಷ್ಟು ಸುಂಕ ತೆರಬೇಕಾಗುತ್ತದೆ.

ರಾಜ್ಯ ಸರ್ಕಾರವು ಕರಡು ಮಸೂದೆಯ ಅಧಿಸೂಚನೆಯನ್ನು ಶನಿವಾರ ಹೊರಡಿಸಿದೆ. ಇದಕ್ಕೆ ಆಕ್ಷೇಪ ಸಲ್ಲಿಸಲು ಏಳು ದಿನಗಳ ಕಾಲಾವಕಾಶ ನೀಡಿದೆ. ಆನಂತರ ಮಸೂದೆಯು ಜಾರಿಯಾಗಲಿದೆ ಎಂದು ತಿಳಿಸಿದೆ.

ಶುದ್ಧ ಆಲ್ಕೋಹಾಲ್‌ಗೆ ಸುಂಕ

ಬ್ರಾಂಡಿ, ವಿಸ್ಕಿ, ಜಿನ್, ಮಿಲ್ಕ್ ಪಂಚ್ ಮತ್ತು ಇತರ ಮದ್ಯಗಳ ಮೇಲೆ, ಅವುಗಳಲ್ಲಿ ಇರುವ ಪ್ರತಿ ಒಂದು ಲೀಟರ್‌ನಷ್ಟು ಶುದ್ಧ ಆಲ್ಕೋಹಾಲ್‌ಗೆ ₹1,000 ಅಬಕಾರಿ ಸುಂಕ ವಿಧಿಸುವ ಪ್ರಸ್ತಾಪ ನೂತನ ನೀತಿಯಲ್ಲಿದೆ.

ಬಾಟಲಿಗಳಿಗೆ ತುಂಬಿದ ಬಿಯರ್‌ನಲ್ಲಿರುವ ಪ್ರತಿ ಒಂದು ಲೀಟರ್‌ನಷ್ಟು ಶುದ್ಧ ಆಲ್ಕೋಹಾಲ್‌ಗೆ ₹1,000 ಅಬಕಾರಿ ಸುಂಕ ವಿಧಿಸಲಾಗುತ್ತದೆ. ಬಿಯರ್, ಡ್ರಾಟ್ ಬಿಯರ್‌ಗೆ ಈಗ ಜಾರಿಯಲ್ಲಿರುವಷ್ಟೇ ದರದ ಸುಂಕವನ್ನು ಉಳಿಸಿಕೊಳ್ಳಲಾಗಿದೆ. ಆದರೆ ಹೆಚ್ಚುವರಿ ಅಬಕಾರಿ ಸುಂಕದಲ್ಲಿ ಬದಲಾವಣೆ ಮಾಡಲಾಗಿದೆ.

ಬಿಯರ್: ನೂತನ ಹೆಚ್ಚುವರಿ ಅಬಕಾರಿ ಸುಂಕ

ಸ್ಲ್ಯಾಬ್	ಘೋಷಿತ ದರ (ರೂಗಳಲ್ಲಿ)	ಪ್ರತಿ ಲೀಟರ್ ಶುದ್ಧ ಆಲ್ಕೋಹಾಲ್‌ಗೆ ಹೆಚ್ಚುವರಿ ಅಬಕಾರಿ ಸುಂಕ
1	000-500	₹800
2	501-700	₹1,400
3	701-ಮೇಲ್ಪಟ್ಟು	₹2,700

ಜಾರಿಯಲ್ಲಿರುವ ಸ್ಲ್ಯಾಬ್ ಮತ್ತು ಸುಂಕ

ಸ್ಲ್ಯಾಬ್ ಸಂಖ್ಯೆ	ಘೋಷಿತ ಬೆಲೆ (ರೂಗಳಲ್ಲಿ)	ಹೆಚ್ಚುವರಿ ಅಬಕಾರಿ ಸುಂಕ
1	0-470	₹297
2	471-520	₹367
3	521-570	₹461
4	571-650	₹603
5	651-750	₹620
6	751-900	₹770
7	901-1,050	₹870
8	1,051-1,300	₹970
9	1,301-1,800	₹1,200
10	1,801-2,500	₹1,400
11	2,501-5,000	₹1,600
12	5,001-8,000	₹2,000
13	8,001-12,500	₹2,400
14	12,501-15,000	₹2,600
15	15,001-20,000	₹2,800
16	20,001+	₹3,000

ಪ್ರಸ್ತಾಪಿತ ನೂತನ ಸ್ಲ್ಯಾಬ್ ಮತ್ತು ಸುಂಕ

ಸ್ಲ್ಯಾಬ್ ಸಂಖ್ಯೆ	ಘೋಷಿತ ಬೆಲೆ (ರೂಗಳಲ್ಲಿ)	ಹೆಚ್ಚುವರಿ ಅಬಕಾರಿ ಸುಂಕ
1	000-470	₹50
2	471-520	₹220
3	521-570	₹525
4	571-650	₹750
5	651-750	₹850
6	751-1,300	₹1,150
7	1,301-5,000	₹1,750
8	5,001+	₹3,700

ಚಿಟಿಕೆ ಸುದ್ದಿ

ಫೆ. 18ರಿಂದ ಬಾಹುಬಲಿ ಮಹಾಮಸ್ತಕಾಭಿಷೇಕ

ಉಡುಪಿ: ಕಾರ್ಕಳದ ಭಗವಾನ್ ಶ್ರೀ ಬಾಹುಬಲಿ ಸ್ವಾಮಿ ಮಹಾ ಮಸ್ತಕಾಭಿಷೇಕವು 2027ರ ಫೆಬ್ರುವರಿ 18ರಿಂದ 28ರವರೆಗೆ ನಡೆಯಲಿದೆ ಎಂದು ಮಹಾ ಮಸ್ತಕಾಭಿಷೇಕ ಸಮಿತಿ ಕಾರ್ಯಾಧ್ಯಕ್ಷ ಎಂ.ಎನ್. ರಾಜೇಂದ್ರ ಕುಮಾರ್ ತಿಳಿಸಿದರು.

ಮಹಾ ಮಸ್ತಕಾಭಿಷೇಕ ಸಮಿತಿ ವತಿಯಿಂದ ಕಾರ್ಕಳದ ಭಗವಾನ್ ಶ್ರೀ ಬಾಹುಬಲಿ ಪ್ರವಚನ ಮಂದಿರ ದಾನಶಾಲೆಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಈ ಮಾಹಿತಿ ನೀಡಿದರು.

ಕಾರ್ಕಳ ದಾನಶಾಲೆ ಜೈನ ಮಠದ ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿ ಮಾತನಾಡಿ, 'ಮಸ್ತಕಾಭಿಷೇಕ ಮಾಡುವುದು ಭಗವಂತನಿಗಾಗಿ ಅಲ್ಲ. ನಾವು ಮಾಡಿರುವ ಪ್ರಮಾದಗಳನ್ನು ಕಳೆಯಲು ಮಾಡುತ್ತೇವೆ' ಎಂದರು.

ಸಿಯುಕೆ 10ನೇ ಘಟಿಕೋತ್ಸವ ಏ.22ಕ್ಕೆ

ಕಲಬುರಗಿ: 'ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವ ಏಪ್ರಿಲ್ 22ರಂದು ಮಧ್ಯಾಹ್ನ 2 ಗಂಟೆಗೆ ನಡೆಯಲಿದೆ. ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

ಜಿಲ್ಲೆಯ ಕಡಗಂಚಿಯ ವಿ.ವಿ. ಕ್ಯಾಂಪಸ್‌ನಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕುಲಪತಿ ಬಟ್ಟು ಸತ್ಯನಾರಾಯಣ, '2025–26ನೇ ಸಾಲಿನಲ್ಲಿ 769 ವಿದ್ಯಾರ್ಥಿಗಳು ಪದವಿ ಪಡೆಯಲು ಅರ್ಹತೆ ಗಳಿಸಿದ್ದಾರೆ. 669 ಮಂದಿ ಘಟಿಕೋತ್ಸವದಲ್ಲಿ ಪದವಿ ಪ್ರಧಾನ ಮಾಡಲಾಗುತ್ತದೆ. 22 ಮಂದಿಗೆ 23 ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಗುವುದು' ಎಂದರು.

ಅಕ್ರಮ ಆಸ್ತಿ: ಪಶು ವಿ.ವಿ ಸಹ ಪ್ರಾಧ್ಯಾಪಕ ಅಮಾನತು

ಬೀದರ್: ಅಕ್ರಮ ಆಸ್ತಿ ಆರೋಪಕ್ಕೆ ಸಂಬಂಧಿಸಿ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಧೀನದ ಬೆಂಗಳೂರಿನ ಹೆಬ್ಬಾಳದ ಪಶು ವೈದ್ಯಕೀಯ ಕಾಲೇಜಿನ ಸಹ ಪ್ರಾಧ್ಯಾಪಕ ಎಚ್.ಸಿ. ಇಂದ್ರೇಶ್ ಅವರನ್ನು ಅಮಾನತುಗೊಳಿಸಿ ವಿ.ವಿ ಕುಲಸಚಿವ ಪಿ.ಟಿ.ರಮೇಶ್ ಆದೇಶಿಸಿದ್ದಾರೆ.

ಲೋಕಾಯುಕ್ತ ಪೊಲೀಸರು ಇಂದ್ರೇಶ್ ಅವರಿಗೆ ಸೇರಿದ ಸ್ಥಳಗಳ ಮೇಲೆ ಈಚೆಗೆ ದಾಳಿ ನಡೆಸಿದ್ದು, ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. 'ಇಂದ್ರೇಶ್ ತಪ್ಪು ಎಸಗಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಕರ್ನಾಟಕ ಪಶು ವೈದ್ಯಕೀಯ ಪರಿಷತ್ತಿನ ಅಧ್ಯಕ್ಷರೂ ಆದ ಇಂದ್ರೇಶ್ ಅವರನ್ನು ಅಮಾನತುಗೊಳಿಸಲಾಗಿದೆ ಎಂದು ಈ ಕುರಿತ ಆದೇಶದಲ್ಲಿ ತಿಳಿಸಿದ್ದಾರೆ.

ಬೆಳಗಾವಿ, ವಿಜಯಪುರದಲ್ಲಿ ಮಳೆ

ಬೆಳಗಾವಿ: ಬೆಳಗಾವಿ ನಗರ ಮತ್ತು ವಿಜಯಪುರ ಜಿಲ್ಲೆಯ ಹಲವೆಡೆ ಭಾನುವಾರ ಉತ್ತಮ ಮಳೆ ಸುರಿಯಿತು.

ಬೆಳಗಾವಿಯಲ್ಲಿ ಮಧ್ಯಾಹ್ನ ಮತ್ತು ರಾತ್ರಿ ಮಳೆಯಾಯಿತು. ಗೋಕಾಕ, ಹುಕ್ಕೇರಿಯಲ್ಲೂ ಗುಡುಗು, ಮಿಂಚು ಸಹಿತ ಜೋರು ಮಳೆ ಸುರಿಯಿತು.

ವಿಜಯಪುರ ಜಿಲ್ಲೆಯ ಕೊಲ್ಹಾರ ಪಟ್ಟಣದಲ್ಲಿ ಒಂದು ತಾಸು ಧಾರಾಕಾರ ಮಳೆಯಾಯಿತು. ಗಾಳಿಗೆ ವಿದ್ಯುತ್ ಕಂಬಗಳು ನೆಲಕಚ್ಚಿದವು. ತಾಂಬಾ, ತಿಕೋಟಾ, ಮುದ್ದೇಬಿಹಾಳ ಪಟ್ಟಣ ವ್ಯಾಪ್ತಿಯಲ್ಲೂ ಮಳೆಯಾಗಿದೆ.

ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನ ಲಿಂಗನಾಯಕನಹಳ್ಳಿ ತಾಂಡಾ ಸುತ್ತಮುತ್ತ ಆಲಿಕಲ್ಲು ಮಳೆ ಸುರಿಯಿತು. ಧಾರವಾಡ ನಗರ ಮತ್ತು ಜಿಲ್ಲೆಯ ನವಲಗುಂದ ತಾಲ್ಲೂಕಿನ ವಿವಿಧೆಡೆ ಭಾರಿ ಮಳೆಯಾಗಿದೆ. ಮಡಿಕೇರಿ ತಾಲ್ಲೂಕಿನ ನಾಪೋಕ್ಲು ಪಟ್ಟಣ ಸೇರಿ ಹೋಬಳಿಯ ಕೆಲವು ಭಾಗಗಳಲ್ಲಿ ಭಾನುವಾರ ಮಳೆ ಸುರಿಯಿತು.

'ಮಹಿಳಾ ಮೀಸಲಾತಿ: ಪ್ರಧಾನಿ ರಾಜಕೀಯ'

ಪ್ರಜಾವಾಣಿ ವಾರ್ತೆ

ಹಾವೇರಿ: 'ತಮಿಳುನಾಡು, ಪಶ್ಚಿಮ ಬಂಗಾಳದ ಚುನಾವಣೆ ಹಿನ್ನಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ಮಹಿಳಾ ಮೀಸಲಾತಿ ಮಸೂದೆ ನೆಪದಲ್ಲಿ ರಾಜಕೀಯ ಮಾಡುತ್ತಿದ್ದಾರೆ. ಅದಕ್ಕೆ ನಮ್ಮ ವಿರೋಧವಿದೆ. ಮಹಿಳಾ ಮೀಸಲಾತಿಗೆ ಕಾಂಗ್ರೆಸ್ ಎಂದಿಗೂ ವಿರೋಧಿಸಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಮಹಿಳಾ ಮೀಸಲಾತಿ ಮಸೂದೆಯು ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ 2023ರಲ್ಲಿಯೇ ಅಂಗೀಕಾರವಾದರೂ ಅದನ್ನು ಜಾರಿ ಮಾಡಲಿಲ್ಲ. ಈಗ ಕ್ಷೇತ್ರ ಮರುವಿಂಗಡಣೆ ಸೇರಿಸಿ ಮಸೂದೆ ತರುತ್ತಿದ್ದಾರೆ' ಎಂದು ಜಿಲ್ಲೆಯ ರಾಣೆಬೆನ್ನೂರಿನ ದೊಡ್ಡಕೆರೆ ಪ್ರದೇಶದಲ್ಲಿ ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

'ಜಿಲ್ಲಾ, ತಾಲ್ಲೂಕು ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡಬೇಕೆಂದು ಬಿಜೆಪಿ ಎಂದಿಗೂ ಒತ್ತಾಯಿಸಿಲ್ಲ' ಎಂದರು.

'ಕ್ಷೇತ್ರ ಮರುವಿಂಗಡಣೆಯಿಂದ ದಕ್ಷಿಣದ ರಾಜ್ಯಗಳಿಗೆ ಅನ್ಯಾಯವಾಗುತ್ತದೆ. ಮರುವಿಂಗಡಣೆ ನಂತರ ಕರ್ನಾಟಕದಲ್ಲಿ ಕೇವಲ 42 ಸ್ಥಾನಗಳಾಗುತ್ತವೆ. ಉತ್ತರ ಭಾರತದಲ್ಲಿ ಸ್ಥಾನಗಳು ಗಣನೀಯವಾಗಿ ಹೆಚ್ಚಲಿದ್ದು, ಇದಕ್ಕೆ ನಮ್ಮ ವಿರೋಧವಿದೆ' ಎಂದು ಹೇಳಿದರು.

> ಯೋಗೀಶಗೌಡ ಗೌಡರ್ ಕೊಲೆ ಪ್ರಕರಣದಲ್ಲಿ ವಿನಯ ಕುಲಕರ್ಣಿಗೆ ಜೀವಾವಧಿ ಶಿಕ್ಷೆಯಾಗಿದ್ದು, ಈ ಬಗ್ಗೆ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶ ಇದೆ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ



ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕಿನ ನಿಟ್ಟೂರು ಗ್ರಾಮದಲ್ಲಿ ಭಾನುವಾರ ನಡೆದ 'ಬೀರಲಿಂಗೇಶ್ವರ ಸ್ವಾಮಿ ದೇವಸ್ಥಾನದ ಸುವರ್ಣ ಮಹೋತ್ಸವ, ಭಕ್ತ ಕನಕದಾಸರ ಮಹಾದ್ವಾರ ಉದ್ಘಾಟನೆ' ಸಮಾರಂಭಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡೊಳ್ಳು ಬಾರಿಸುವ ಮೂಲಕ ಚಾಲನೆ ನೀಡಿದರು

'ಬಿಜೆಪಿ ಷಡ್ಯಂತ್ರಕ್ಕೆ ಸೋಲು'

ಹುಬ್ಬಳ್ಳಿ: 'ಮಹಿಳಾ ಮೀಸಲಾತಿ ನೆಪದಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ದಕ್ಷಿಣ ಭಾರತದ ಲೋಕಸಭಾ ಸ್ಥಾನಗಳನ್ನು ಕಡಿಮೆ ಮಾಡುವ ಷಡ್ಯಂತ್ರ ನಡೆಸಿತ್ತು. ಹೀಗಾಗಿ ಸಂಸತ್‌ನಲ್ಲಿ ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳು ಮಸೂದೆಯನ್ನು ಸೋಲಿಸಿವೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ದಕ್ಷಿಣ ಭಾರತದ ರಾಜ್ಯಗಳ ಲೋಕಸಭಾ ಸ್ಥಾನಗಳನ್ನು ಕಡಿಮೆ ಮಾಡಲು ಹೊರಟಿರುವ ಬಗ್ಗೆ ಬಿಜೆಪಿಯ ಯಾವೊಬ್ಬ ನಾಯಕರು ಸಹ ಮಾತನಾಡುತ್ತಿಲ್ಲ. ಮಹಿಳಾ ಮೀಸಲಾತಿ ಮಸೂದೆಯನ್ನು ನಾವು ಸೋಲಿಸಿದ್ದು, ಈ ಸೋಲು ಮುಂದೆ ನಿರಂತರವಾಗಿರಲಿದೆ' ಎಂದು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

'ಕಾಂಗ್ರೆಸ್‌ಗೆ ಕ್ಷಮೆಯಿಲ್ಲ'

ಬೆಂಗಳೂರು: 'ಮಹಿಳಾ ಮೀಸಲಾತಿ ಮಸೂದೆ ಸೋಲಲು ಕಾರಣರಾದ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷದವರನ್ನು ದೇಶದ ತಾಯಂದಿರು ಹಾಗೂ ಸೋದರಿಯರು ಯಾವತ್ತೂ ಕ್ಷಮಿಸಲಾರರು' ಎಂದು ಬಿಜೆಪಿ ಸಂಸದ ಅನುರಾಗ್ ಸಿಂಗ್ ಠಾಕೂರ್ ಹೇಳಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಕಾಂಗ್ರೆಸ್, ಡಿಎಂಕೆ, ಟಿಎಂಸಿ ಮತ್ತು ಸಮಾಜವಾದಿ ಪಕ್ಷಗಳು ಈ ಹಿಂದೆ ನಾಲ್ಕು ಬಾರಿ ಮಹಿಳಾ ಮೀಸಲಾತಿ ಮಸೂದೆಯನ್ನು ಸೋಲಿಸಿದ್ದವು. ಈಗ ಐದನೇ ಬಾರಿಯೂ ಸೋಲಿಸಿವೆ' ಎಂದು ಆರೋಪಿಸಿದರು.

'2024ರ ಲೋಕಸಭಾ ಚುನಾವಣೆ ಕಾರಣಕ್ಕೆ ಈ ಪಕ್ಷಗಳು 2023ರಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಬೆಂಬಲಿಸಿದ್ದವು. ಈಗ ಮಹಿಳೆಯರ ಬೆನ್ನಿಗೆ ಚೂರಿ ಹಾಕಿವೆ. ದೆಹಲಿಯ ಮಹಿಳೆಗೆ ಕೇರಳದ ವಯನಾಡ್‌ನಲ್ಲಿ ಸ್ಪರ್ಧಿಸಲು ಟಿಕೆಟ್ ನೀಡುವುದಾದರೆ, ಅಲ್ಲಿನ ಮಹಿಳೆಯರಿಗೆ ಟಿಕೆಟ್ ಬೇಡವೇ' ಎಂದು ಅವರು ಪ್ರಶ್ನಿಸಿದರು.

'ಡಿಎಂಕೆ ಸ್ವಾರ್ಥಕ್ಕೆ ದಕ್ಷಿಣ ರಾಜ್ಯಗಳ ಹಿತ ಬಲಿ'

ನವದೆಹಲಿ: ತಮಿಳುನಾಡಿನ ಡಿಎಂಕೆ ರಾಜಕೀಯ ಸ್ವಾರ್ಥಕ್ಕೆ ದಕ್ಷಿಣದ ರಾಜ್ಯಗಳ ಹಿತ ಬಲಿಯಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಭಾನುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮೊದಲು ಸಂವಿಧಾನ ತಿದ್ದುಪಡಿ ಮಸೂದೆಗೆ ಒಪ್ಪಿಗೆ ನೀಡಿದ್ದ ಆ ಪಕ್ಷವು ನಂತರ ಯೂಟರ್ನ್ ಹೊಡೆಯಿತು. ಇದರಿಂದ ದಕ್ಷಿಣ ರಾಜ್ಯಗಳಿಗೆ ಸಿಕ್ಕಿದ್ದ ಬಂಗಾರದಂಥ ಅವಕಾಶ ತಪ್ಪಿಹೋಯಿತು' ಎಂದು ಕಿಡಿಕಾರಿದರು.

'ಕೆಲ ದಿನಗಳ ಹಿಂದೆ ಕೇಂದ್ರದ ಗೃಹ ಸಚಿವ ಅಮಿತ್ ಶಾ ಕರೆದಿದ್ದ ಸಭೆಯಲ್ಲಿ ಭಾಗಿಯಾಗಿದ್ದ ಡಿಎಂಕೆ ನಾಯಕರಿಗೆ ಮಹಿಳಾ ಮೀಸಲು ಹಾಗೂ ಕ್ಷೇತ್ರ ಮರು ವಿಂಗಡಣೆ ಮಸೂದೆಗಳ ಬಗ್ಗೆ ಮನವರಿಕೆ ಮಾಡಿಕೊಡಲಾಗಿತ್ತು. ಆ ಸಭೆಯಲ್ಲಿ ಭಾಗವಹಿಸಿದ್ದ ಸಮಾಜವಾದಿ ಪಕ್ಷವೂ ವಿರೋಧ ಮಾಡಿರಲಿಲ್ಲ. ಅದಾದ ಮೇಲೆ 2–3 ದಿನಗಳಲ್ಲಿ ಮಾಧ್ಯಮ ಹೇಳಿಕೆ ನೀಡಿದ್ದ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, 'ಈ ಮಸೂದೆಗಳಿಗೆ ಅಂಗೀಕಾರ ನೀಡಲು ಜೂನ್ ತಿಂಗಳಲ್ಲಿ ಸಂಸತ್ ಅಧಿವೇಶನ ಕರೆಯಿರಿ' ಎಂದು ಕೇಂದ್ರಕ್ಕೆ ಸಲಹೆ ಮಾಡಿದ್ದರು. ಅಂದರೆ, ಅವರಿಗೆ ತಿದ್ದುಪಡಿ ಮಸೂದೆಗಳ ಬಗ್ಗೆ ಒಪ್ಪಿಗೆ ಇತ್ತು ಎಂದಾಯಿತಲ್ಲವೇ? ಈ ಕೂಡಲೇ ಮಸೂದೆಗಳನ್ನು ಅಂಗೀಕರಿಸಿದರೆ ಚುನಾವಣೆಯಲ್ಲಿ ಧಕ್ಕೆ ಆಗಬಹುದೆಂಬ ಕಾರಣಕ್ಕೆ ಆ ಪಕ್ಷವು ಮಸೂದೆಗಳಿಗೆ ಬೆಂಬಲ ನೀಡಲಿಲ್ಲ' ಎಂದು ಅವರು ದೂರಿದರು.

'ದಕ್ಷಿಣದ ರಾಜ್ಯಗಳಿಗೆ ಈ ತಿದ್ದುಪಡಿ ಮಸೂದೆಗಳಿಂದ ಅನ್ಯಾಯವಾಗುತ್ತಿದೆ ಎಂದು ಡಿಎಂಕೆ ಹೇಳುತ್ತಿರುವುದರಲ್ಲಿ ಎಳ್ಳಷ್ಟೂ ಸತ್ಯಾಂಶವಿಲ್ಲ. ಹಾಗೆ ನೋಡಿದರೆ ಡಿಎಂಕೆಯಿಂದಲೇ ದಕ್ಷಿಣಕ್ಕೆ ಅನ್ಯಾಯವಾಗುತ್ತಿದೆ. ಒಂದು ವೇಳೆ ಅನ್ಯಾಯವಾಗುವುದೇ ಆಗಿದ್ದರೆ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ, ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಹಾಗೂ ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಆಕ್ಷೇಪ ಎತ್ತಲಿಲ್ಲವೇಕೆ?' ಎಂದು ಕುಮಾರಸ್ವಾಮಿ ಅವರು ಪ್ರಶ್ನಿಸಿದರು.

ಸುದ್ದಿ 2 ನಿಮಿಷ

ಬಿಜೆಪಿ ಜತೆ ಮೈತ್ರಿ ಅಷ್ಟೇ, ಸಿದ್ಧಾಂತದಲ್ಲಿ ರಾಜಿ ಇಲ್ಲ: ನಿಖಿಲ್

ಚಿಕ್ಕಮಗಳೂರು: 'ಬಿಜೆಪಿ ಜತೆ ಮೈತ್ರಿಯಷ್ಟೇ, ಸಿದ್ಧಾಂತದಲ್ಲಿ ಯಾವುದೇ ರಾಜಿ ಇಲ್ಲ. ಜೆಡಿಎಸ್ ಜಾತ್ಯತೀತ ಪಕ್ಷವಾಗಿ ಉಳಿಯಲಿದೆ' ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

'ಜಾತ್ಯತೀತ ಜನತಾದಳ ಎಂಬುದು ಪಕ್ಷದ ಹೆಸರಿನಲ್ಲೇ ಇದೆ. ನಮ್ಮ ಸಿದ್ಧಾಂತ ಮತ್ತು ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. ಸರ್ವ ಜನಾಂಗದ ಶಾಂತಿಯ ತೋಟದ ಬಗ್ಗೆ ಎಚ್.ಡಿ. ಕುಮಾರಸ್ವಾಮಿ ಅವರಿಗೆ ನಂಬಿಕೆ ಇದೆ. ಅದರಲ್ಲಿ ಬದಲಾವಣೆ ಇಲ್ಲವೇ ಇಲ್ಲ' ಎಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

'ಯಾವತ್ತಿಗೂ ಜಾತ್ಯತೀತ ಪಕ್ಷವಾಗಿಯೇ ಉಳಿದಿದ್ದೇವೆ. ಧರ್ಮ, ಜಾತಿ, ಸಮುದಾಯಗಳ ಆಧಾರದಲ್ಲಿ ಈವರೆಗೆ ಜೆಡಿಎಸ್ ರಾಜಕಾರಣ ಮಾಡಿಲ್ಲ. ಎಲ್ಲರನ್ನೂ ಸಮಾನವಾಗಿ ಕಂಡಿದೆ. ಮುಂದೆಯೂ ಅದೇ ರೀತಿ ಇರಲಿದೆ. ಒಂದು ಪಕ್ಷದೊಂದಿಗೆ ಕೈಜೋಡಿಸಿದ್ದೇವೆ. ವಿಲೀನವಾಗಿಲ್ಲ. ನಮ್ಮದು ಸ್ವತಂತ್ರ ರಾಜಕೀಯ ಪಕ್ಷ' ಎಂದರು.



'ಒಂದು ಸಿದ್ಧಾಂತರ ಮೇಲೆ ನಂಬಿಕೆ ಇಟ್ಟುಕೊಂಡು ಎಚ್.ಡಿ.ದೇವೇಗೌಡರು ಪಕ್ಷ ಮುನ್ನಡೆಸಿದ್ದಾರೆ. ಕಾರ್ಯಕರ್ತರು ಪಕ್ಷ ಕಟ್ಟಿದ್ದಾರೆ. ಯಾರೇ ಪಕ್ಷಕ್ಕೆ ಬಂದರೂ ಕರೆದುಕೊಳ್ಳುವ ಸನ್ನಿವೇಶ ಇಲ್ಲ. ಅವರು ಪಕ್ಷ ಬಿಟ್ಟಿದ್ದು ಯಾವಾಗ, ಯಾವ ಕಾರಣಕ್ಕೆ ಬಿಟ್ಟರು, ಬಿಡುವ ಸಂದರ್ಭದಲ್ಲಿ ಸಾರ್ವಜನಿಕವಾಗಿ ಏನೆಲ್ಲಾ ಮಾತನಾಡಿದ್ದಾರೆ ಎಂಬುದನ್ನು ಪರಿಗಣಿಸಿ ಪಕ್ಷದ ವರಿಷ್ಠರು ನಿರ್ಧಾರ ಕೈಗೊಳ್ಳಲಿದ್ದಾರೆ' ಎಂದರು.

ವಿಜಯಪುರ: 'ಅಕ್ಸಾ' ಪ್ರತಿಭಟನೆಗೆ ಅನುಮತಿ ನಿರಾಕರಣೆ

ವಿಜಯಪುರ: ಸರ್ಕಾರಿ ಹುದ್ದೆಗಳ ಭರ್ತಿ ಹಾಗೂ ಕೆಪಿಎಸ್‌ಸಿಯಿಂದ ನಡೆದ ನೇಮಕಾತಿ ಪರೀಕ್ಷೆಗಳ ಅಕ್ರಮದ ಬಗ್ಗೆ ತನಿಖೆಗೆ ಆಗ್ರಹಿಸಿ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘಟನೆ (ಅಕ್ಸಾ) ವತಿಯಿಂದ ಏ.21ರಂದು ನಗರದಲ್ಲಿ ನಡೆಸಲು ಉದ್ದೇಶಿಸಿದ್ದ ಹೋರಾಟಕ್ಕೆ ಜಿಲ್ಲಾ ಪೊಲೀಸ್ ಇಲಾಖೆ ಅನುಮತಿ ನಿರಾಕರಿಸಿದೆ.

ಕೆಪಿಎಸ್‌ಸಿಯಿಂದ ನಡೆದಿರುವ ಎಲ್ಲ ಪರೀಕ್ಷೆಗಳಲ್ಲಿನ ಅಕ್ರಮಗಳ ತನಿಖೆಯನ್ನು ಕೂಡಲೇ ಸಿಬಿಐ ಕೊಡಬೇಕು. ಸರ್ಕಾರದ ವಿವಿಧ ಇಲಾಖೆಗಳಲ್ಲಿ 2.84 ಲಕ್ಷ ಹುದ್ದೆಗಳು ಖಾಲಿ ಇದ್ದು, ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಬೇಕು ಎಂದು ಒತ್ತಾಯಿಸಿ 500 ಉದ್ಯೋಗಾಕಾಂಕ್ಷಿಗಳೊಂದಿಗೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇತೃತ್ವದಲ್ಲಿ ನಗರದ ದರ್ಬಾರ್ ಮೈದಾನದಲ್ಲಿ ಅನಿರ್ದಿಷ್ಟಾವಧಿ ಹೋರಾಟ ನಡೆಸಲು ಅಕ್ಸಾ ಅಧ್ಯಕ್ಷ ಕಾಂತಕುಮಾರ ಪೊಲೀಸ್ ಅನುಮತಿ ಕೋರಿದ್ದರು.

'ಪೊಲೀಸರು ಮನವಿ ಪತ್ರ ಪರಿಶೀಲಿಸಿ, ಅದಕ್ಕೆ ಸ್ಪಷ್ಟೀಕರಣ ಕೋರಿ ಎರಡು ಬಾರಿ ನೋಟಿಸ್ ಜಾರಿ ಮಾಡಿದ್ದರು. ಸ್ಪಷ್ಟೀಕರಣದ ಉತ್ತರಗಳು ಸಮರ್ಪಕವಾಗಿಲ್ಲ ಎಂಬುದು ಸೇರಿ 14 ಅಂಶಗಳನ್ನು ಉಲ್ಲೇಖಿಸಿ ಅನುಮತಿ ನಿರಾಕರಿಸಿದ್ದಾರೆ' ಎಂದು ಕಾಂತಕುಮಾರ ತಿಳಿಸಿದ್ದಾರೆ.

'ಅಗ್ನಿವೀರ್' ನೇಮಕಾತಿ ರ‍್ಯಾಲಿ ಆರಂಭ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ವಿವಿಧ ಜಿಲ್ಲೆಗಳ 6,300 ಮಂದಿ ನೋಂದಣಿ
- ಎಂಟು ದಿನ ನಡೆಯಲಿರುವ ನೇಮಕಾತಿ ರ‍್ಯಾಲಿ

ಮೈಸೂರು: ಭಾರತೀಯ ಸೇನೆಯಿಂದ ಇಲ್ಲಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಏ.27ರವರೆಗೆ ನಡೆಯುವ 'ಅಗ್ನಿವೀರ್' ಸೇನಾ ನೇಮಕಾತಿ ರ‍್ಯಾಲಿ ಭಾನುವಾರ ಆರಂಭಗೊಂಡಿತು.

ಮೊದಲ ದಿನ ವಿವಿಧ ಜಿಲ್ಲೆಗಳ 400 ಅಭ್ಯರ್ಥಿಗಳು ಪಾಲ್ಗೊಂಡಿದ್ದರು. ಎಂಟು ದಿನಗಳ ಈ ರ‍್ಯಾಲಿಯಲ್ಲಿ ಪರೀಕ್ಷೆ ಎದುರಿಸಲು 6,300 ಮಂದಿ ನೋಂದಾಯಿಸಿದ್ದಾರೆ.

ಬೆಂಗಳೂರಿನ ಸೇನಾ ನೇಮಕಾತಿ ಕಚೇರಿ, ಜಿಲ್ಲಾಡಳಿತ, ಕ್ರೀಡಾ ಇಲಾಖೆ ಸಹಯೋಗದಲ್ಲಿ ಏರ್ಪಡಿಸಿರುವ ರ‍್ಯಾಲಿಯ ಮೊದಲ ದಿನ, ಆನ್‌ಲೈನ್ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಇಇ) ಅರ್ಹತೆ ಪಡೆದ ಬೆಂಗಳೂರು ನಗರ, ಗ್ರಾಮಾಂತರ, ತುಮಕೂರು, ಮಂಡ್ಯ, ಮೈಸೂರು, ಬಳ್ಳಾರಿ, ಚಾಮರಾಜನಗರ, ರಾಮನಗರ, ಕೊಡಗು, ಕೋಲಾರ, ಚಿಕ್ಕಬಳ್ಳಾಪುರ, ಹಾಸನ, ಚಿತ್ರದುರ್ಗದ ಅಭ್ಯರ್ಥಿಗಳು ದೈಹಿಕ ಕ್ಷಮತೆ ಪರೀಕ್ಷೆ ಎದುರಿಸಿದರು.

'ಆಕಾಂಕ್ಷಿಗಳಿಗೆ ಓಟ, ಚಿನ್‌ಅಪ್ಸ್, ಪುಷ್‌ಅಪ್ಸ್ ಸೇರಿದಂತೆ ದೈಹಿಕ ಕಾರ್ಯಕ್ಷಮತೆ ಪರೀಕ್ಷೆ ನಡೆಸಲಾಗಿದೆ. ಆಯ್ಕೆಯಾದ ಶೇ 70ರಷ್ಟು ಅಭ್ಯರ್ಥಿಗಳಿಗೆ ಮರುದಿನ ವೈದ್ಯಕೀಯ ಪರೀಕ್ಷೆ ನಡೆಸಲಾಗುತ್ತದೆ' ಎಂದು ಸೇನೆ ನೇಮಕಾತಿ ಅಧಿಕಾರಿ ಕರ್ನಲ್ ವಿವೇಕ್ ಜಮಾದಾರ್ ಮಾಹಿತಿ ನೀಡಿದರು.

'ಅಭ್ಯರ್ಥಿಗಳ ವಾಸ್ತವ್ಯಕ್ಕೆ ನಂಜರಾಜ ಬಹದ್ದೂರ್ ಛತ್ರದಲ್ಲಿ ವ್ಯವಸ್ಥೆ ಮಾಡಲಾಗಿದೆ. ಒಬ್ಬ ಅಭ್ಯರ್ಥಿಯು 1ರಿಂದ 2 ದಿನ ಮಾತ್ರವೇ ಇಲ್ಲಿ ತಂಗುತ್ತಾರೆ' ಎಂದು ಅಧಿಕಾರಿಗಳು ತಿಳಿಸಿದರು.

'ಬಲವಂತದ ಮತಾಂತರ ತಡೆಗೆ ಕಠಿಣ ಕಾಯ್ದೆ'

ಪ್ರಜಾವಾಣಿ ವಾರ್ತೆ



ಮಿಲಿಂದ್ ಪರಾಂಡೆ

ಮಂಗಳೂರು: 'ಬಲವಂತದ ಮತಾಂತರ ನಿರ್ಬಂಧಿಸಲು, 'ಲವ್ ಜಿಹಾದ್' ತಡೆ ಹಾಗೂ ಗೋವುಗಳ ರಕ್ಷಣೆಗೆ ಕೇಂದ್ರ ಸರ್ಕಾರ ಹಾಗೂ ಎಲ್ಲ ರಾಜ್ಯ ಸರ್ಕಾರಗಳು ಕಟ್ಟುನಿಟ್ಟಿನ ಕಾನೂನು ರೂಪಿಸಬೇಕು' ಎಂದು ವಿಶ್ವ ಹಿಂದೂ ಪರಿಷತ್ತಿನ ಕೇಂದ್ರೀಯ ಸಂಘಟನಾ ಕಾರ್ಯದರ್ಶಿ ಮಿಲಿಂದ್ ಪರಾಂಡೆ ಒತ್ತಾಯಿಸಿದರು.

ಎರಡು ದಿನ ಇಲ್ಲಿ ನಡೆದ ಬಜರಂಗದಳ ಕರ್ನಾಟಕ ದಕ್ಷಿಣ ಪ್ರಾಂತದ ಸಂಯೋಜಕರ ಸಮಾವೇಶದ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದರು.

'ಗೋವು ಕಳ್ಳಸಾಗಣೆಗೆ ಬಳಕೆಯಾದ ವಾಹನವನ್ನು ಜಪ್ತಿ ಮಾಡಿ, ಅದರ ಮಾಲೀಕನ ವಿರುದ್ಧವೂ 2020ರ ಗೋಹತ್ಯೆ ನಿಷೇಧ ಕಾಯ್ದೆಯಡಿ ಕ್ರಮಕೈಗೊಳ್ಳಬೇಕು. ಗೋ ಕಳ್ಳಸಾಗಣೆ ತಡೆಗೆ ಅಲ್ಲಲ್ಲಿ ತಪಾಸಣಾ ಚೌಕಿಗಳನ್ನು ಸ್ಥಾಪಿಸಬೇಕು' ಎಂದು ಹೇಳಿದರು.

'ದೇಶದಲ್ಲಿ 'ಲವ್ ಜಿಹಾದ್' ಹೆಚ್ಚುತ್ತಿದ್ದು, ಮಹಿಳೆಯರೂ ಈ ಸಂಚಿನ ಭಾಗವಾಗಿದ್ದಾರೆ. ಟಿಸಿಎಸ್ ಕಂಪನಿಯ ನಾಸಿಕ್ ಶಾಖೆಯಲ್ಲಿ ಮಹಿಳಾ ಸಿಬ್ಬಂದಿಯ ಮೇಲೆ ಶೋಷಣೆ ನಡೆಸಿದ ಆರೋಪವನ್ನು ಮಾನವ ಸಂಪನ್ಮೂಲ ವಿಭಾಗದ ಅಧಿಕಾರಿಗಳೇ ಎದುರಿಸಿದ್ದಾರೆ' ಎಂದರು.

'ಕೆಲ ಕಚೇರಿಗಳಲ್ಲಿ ಮಾನವ ಸಂಪನ್ಮೂಲ ವಿಭಾಗದ ಅಧಿಕಾರಿಗಳು ಮಹಿಳಾ ಉದ್ಯೋಗಿಗಳನ್ನು ಪ್ರತ್ಯೇಕಿಸಿ, ಕಚೇರಿಯೊಳಗೆ ಮೊಬೈಲ್ ಒಯ್ಯಲು ಬಿಡದೇ ಅವರು ರಾಜಿಯಾಗಲೇಬೇಕಾದ ಸನ್ನಿವೇಶ ಸೃಷ್ಟಿಸುತ್ತಾರೆ' ಎಂದರು.



ವಿಜಯನಗರ ಜಿಲ್ಲೆ ಮರಿಯಮ್ಮನಹಳ್ಳಿ ಸಮೀಪದ 114ಡಣಾಪುರ ಗ್ರಾಮದ ಬಳಿಯ ರಾಷ್ಟ್ರೀಯ ಹೆದ್ದಾರಿ–50ರಲ್ಲಿ ಸರಣಿ ಅಪಘಾತ ಮಾಡಿದ ಲಾರಿ, ರಸ್ತೆ ಪಕ್ಕದ ಹಳ್ಳಕ್ಕೆ ಮಗುಚಿದೆ

ಸರಣಿ ಅಪಘಾತ: 4 ಸಾವು

ಪ್ರಜಾವಾಣಿ ವಾರ್ತೆ

ಮರಿಯಮ್ಮನಹಳ್ಳಿ (ವಿಜಯನಗರ ಜಿಲ್ಲೆ): ಸಮೀಪದ 114-ಡಣಾಪುರ ಗ್ರಾಮದ ಬಳಿಯ ರಾಷ್ಟ್ರೀಯ ಹೆದ್ದಾರಿ-50ರಲ್ಲಿ ಭಾನುವಾರ ಬೆಳಿಗ್ಗೆ ಬೆಳ್ಳುಳ್ಳಿ ಸಾಗಣೆ ಲಾರಿ ಡಿಕ್ಕಿ ಹೊಡೆದು ಸಂಭವಿಸಿದ ಸರಣಿ ಅಪಘಾತದಲ್ಲಿ ಒಂದೇ ಕುಟುಂಬದ ಮೂವರು ಸೇರಿ ನಾಲ್ವರು ಮೃತಪಟ್ಟಿದ್ದಾರೆ.

ಬೈಕ್‌ನಲ್ಲಿ ಹೋಗುತ್ತಿದ್ದ ತಿಮ್ಮಲಾಪುರ ಗ್ರಾಮದ ಎಚ್.ದುರುಗಪ್ಪ (55), ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಕಿತ್ನೂರು ಗ್ರಾಮದ ಸುಜಾತಾ (40) ಅವರು ಸ್ಥಳದಲ್ಲೇ ಮೃತಪಟ್ಟಿದ್ದು, ಸುಜಾತಾ ಅವರ ತಂದೆ ನಾಗಪ್ಪ (80), ಅವರ ಸಹೋದರ ಕೊಟ್ರೇಶ್ (28) ಅವರು ಕೊಪ್ಪಳ ಆಸ್ಪತ್ರೆಯಲ್ಲಿ ಸಂಜೆ ಮೃತಪಟ್ಟರು.

ಸುಜಾತಾ ಅವರ ಸಹೋದರನಿಗೆ ಮದುವೆಗೆ ಹೆಣ್ಣು ನೋಡಲು ಕಂಪ್ಲಿಗೆ ಎರಡು ಬೈಕ್‌ಗಳಲ್ಲಿ ತೆರಳುತ್ತಿದ್ದಾಗ ಈ ಘಟನೆ ನಡೆದಿದೆ. ಘಟನೆಯಲ್ಲಿ 20 ಜನ ಗಾಯಗೊಂಡಿದ್ದಾರೆ.

ದೆಹಲಿಯಿಂದ ಬೆಂಗಳೂರಿಗೆ ಬೆಳ್ಳುಳ್ಳಿ ಚೀಲಗಳನ್ನು ತುಂಬಿಕೊಂಡು ಹೋಗುತ್ತಿದ್ದ ಲಾರಿಯು ಮೊದಲು ಘಟನೆ ನಡೆದ ಸ್ಥಳದಿಂದ ಮೂರು ಕಿ.ಮೀ ಹಿಂದೆ ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ಡಣಾಪುರ ಬಳಿಯ ಕಾರ್ ಹಾಗೂ ವಿಆರ್‌ಎಲ್ ಲಾರಿ ಹಾಗೂ ಹೊಸಪೇಟೆ-ಚಿತ್ರದುರ್ಗ ಮಾರ್ಗದ ಸಾರಿಗೆ ಸಂಸ್ಥೆಯ ಬಸ್‌ಗೆ ಡಿಕ್ಕಿ ಹೊಡೆದಿದೆ.

ಡಿಕ್ಕಿ ರಭಸಕ್ಕೆ ಬಸ್ ಮತ್ತು ಎದುರು ಬರುತ್ತಿದ್ದ ಕಂಟೇನರ್ ಲಾರಿ ಮುಖಾಮುಖಿ ಡಿಕ್ಕಿಯಾಗಿವೆ. ನಂತರ ಲಾರಿ 2 ಬೈಕ್‌ಗಳಿಗೆ ಡಿಕ್ಕಿ ಹೊಡೆದಿದ್ದು, ಒಂದು ಬೈಕ್ ಸಮೇತ ಸೇತುವೆ ಬಲಕ್ಕೆ ಹತ್ತಾರು ಅಡಿ ಆಳಕ್ಕೆ ಉರುಳಿದೆ. ಲಾರಿ ಚಾಲಕನ ನಿರ್ಲಕ್ಷ್ಯವೇ ಸರಣಿ ಅಪಘಾತಕ್ಕೆ ಕಾರಣ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ ತಿಳಿಸಿದರು.

ಅಪಘಾತದಿಂದಾಗಿ ಹೆದ್ದಾರಿಯ ಎರಡೂ ಬದಿ 3 ಕಿ.ಮೀಗೂ ಅಧಿಕ ದೂರ ದಟ್ಟಣೆ ಉಂಟಾಗಿತ್ತು.

ಕೆರೆಯಲ್ಲಿ ಮುಳುಗಿ ವಿದ್ಯಾರ್ಥಿ ಸಾವು

ಕೊಪ್ಪಳ: ಬಿಸಿಲಿನ ಬೇಗೆ ತಣಿಸಲು ತಾಲ್ಲೂಕಿನ ಮಾದಿನೂರು ಗ್ರಾಮ ಸಮೀಪದ ಕೆರೆಯಲ್ಲಿ ಈಜಾಡಲು ಹೋಗಿದ್ದ ವಿದ್ಯಾರ್ಥಿ ಆಕಾಶ ಹರಿಜನ (17) ಭಾನುವಾರ ಮೃತಪಟ್ಟಿದ್ದಾರೆ. ಕುಕನೂರು ತಾಲ್ಲೂಕಿನ ಮನ್ನಾಪುರದ ಇವರು, ದದೇಗಲ್‌ನ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಡಿಪ್ಲೊಮಾ ಎರಡನೇ ವರ್ಷ ಓದುತ್ತಿದ್ದರು.

ಅಸ್ವಸ್ಥಗೊಂಡಿದ್ದ ಬಾಲಕ ಸಾವು

ರಬಕವಿ ಬನಹಟ್ಟಿ: ಸಮೀಪದ ಕೃಷ್ಣಾ ನದಿಗೆ ಈಜಲು ಹೋಗಿ ನೀರಿನಲ್ಲಿ ಮುಳುಗಿ ಅಸ್ವಸ್ಥಗೊಂಡಿದ್ದ ಬಾಲಕ ಚಿಕಿತ್ಸೆಗೆ ಸ್ಪಂದಿಸದೆ ಭಾನುವಾರ ಮೃತಪಟ್ಟಿದ್ದಾನೆ. ಹುಬ್ಬಳ್ಳಿಯ ರಾಹುಲ ಅಜ್ಜನವರ (11) ಮೃತ ಬಾಲಕ. ರಜೆಗೆ ಸಂಬಂಧಿಕರ ಮನೆಗೆ ಬಂದಿದ್ದಾಗ ಅವಘಡ ಸಂಭವಿಸಿದೆ. ಅಸ್ವಸ್ಥಗೊಂಡಿದ್ದ ಅತನನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಮಳೆ: ಸಿಡಿಲಿಗೆ ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ಕೊಪ್ಪಳ ಜಿಲ್ಲೆಗಳಲ್ಲಿ ಭಾನುವಾರ ಮಳೆಯಾಗಿದೆ. ಸಿಡಿಲು ಬಡಿದು ಬೀದರ್ ಜಿಲ್ಲೆಯಲ್ಲಿ ಕುರಿಗಾಹಿ, ಬಾಗಲಕೋಟೆ ಜಿಲ್ಲೆಯಲ್ಲಿ ಮಹಿಳೆ ಮೃತಪಟ್ಟಿದ್ದಾರೆ. ಅಲ್ಲದೆ, ಹಲವು ಎತ್ತು, ಎಮ್ಮೆಗಳು ಸಾವನ್ನಪ್ಪಿವೆ.

ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಕೊಹಿನೂರ ಗ್ರಾಮದ ಜಿಂದಾರಾಮ್ ಧೂಳಪ್ಪ ಹೆಡೆ (26) ಅವರು ಹೊಲದಲ್ಲಿ ಕುರಿ ಕಾಯುತ್ತಿದ್ದಾಗ ಸಿಡಿಲು ಬಡಿದಿದ್ದು, ಸ್ಥಳದಲ್ಲಿ ಮೃತಪಟ್ಟರು.

ಕೊಪ್ಪಳ ಜಿಲ್ಲೆಯ ಹನುಮಸಾಗರ ಸಮೀಪದ ರಂಗಾಪುರ ಗ್ರಾಮದಲ್ಲಿ ಸಿಡಿಲು ಬಡಿದು ಎರಡು ಜಾನುವಾರು ಸತ್ತಿವೆ. ಗ್ರಾಮದ ಶೇಖಪ್ಪ ಕನಕಪ್ಪ ವಾಲೀಕಾರ ಅವರ ಜಮೀನಿನಲ್ಲಿ ಎಮ್ಮೆ, ಮುತ್ತಪ್ಪ ಶರಣಪ್ಪ ಮಜ್ಜಗಿ ಅವರ ಜಮೀನಿನಲ್ಲಿ ಎತ್ತು ಮೃತಪಟ್ಟಿದೆ.

ಕಲಬುರಗಿ ಜಿಲ್ಲೆ ಆಳಂದ ತಾಲ್ಲೂಕಿನ ಹಿರೊಳ್ಳಿ ಗ್ರಾಮದಲ್ಲಿ ಹೊಲದಲ್ಲಿ ಕಟ್ಟಿದ್ದ ಎರಡು ಎತ್ತುಗಳು ಸಿಡಿಲು ಬಡಿದು ಮೃತಪಟ್ಟಿವೆ. ರೈತ ಅನೀಲ ಚಿಕ್ಕಳ್ಳಿ ಅವರಿಗೆ ಈ ಎತ್ತುಗಳು ಸೇರಿವೆ.

ಇಳಕಲ್ (ಬಾಗಲಕೋಟೆ ಜಿಲ್ಲೆ): ಸಮೀಪದ ವಜ್ಜಲ್ ಗ್ರಾಮದ ಹೊಲವೊಂದರಲ್ಲಿ ಭಾನುವಾರ ಸಂಜೆ ಸಿಡಿಲು ಬಡಿದು ಶ್ಯಾವಮ್ಮ ಮಲ್ಲಪ್ಪ ವಾಲಿಕಾರ ಅವರು ಮೃತಪಟ್ಟಿದ್ದಾರೆ.

'ಬಸವ ಬೆಳಕು' ಪಸರಿಸಲು ಬಸವ ಸಮಿತಿ ಪರಿಶ್ರಮ; ವಿವಿಧ ವಿ.ವಿ.ಗಳ ಸಹಯೋಗ

37 ಭಾಷೆಗಳಲ್ಲಿ 'ವಚನ ಸಾಹಿತ್ಯ'ದ ಕಂಪು

• ಬಷೀರಅಹ್ಮದ್ ನಗಾರಿ

ಕಲಬುರಗಿ: 12ನೇ ಶತಮಾನದಲ್ಲಿ ವಿಶಿಷ್ಟ ಸಾಹಿತ್ಯ ಪ್ರಕಾರ, ಸಮಸಮಾಜ ನಿರ್ಮಾಣದ ಆಶಯ, ಕಾಯಕ, ದಾಸೋಹ, ಭಕ್ತಿ ಮಾರ್ಗ ತೋರುವ ಬಸವಾದಿ ಶರಣರ ವಚನಗಳ ಕಂಪು ಈಗ ಗಡಿಯಾಚೆಗೂ ಪಸರಿಸುತ್ತಿದೆ.

ಸಂಶೋಧಕ ದಿ.ಎಂ.ಎಂ.ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ರಾಜ್ಯ ಸರ್ಕಾರ 'ಸಮಗ್ರ ವಚನ ಸಂಪುಟ'ಗಳನ್ನು ಪ್ರಕಟಿಸಿತ್ತು. ಅದರಿಂದ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಸೇರಿ 173 ಶರಣ–ಶರಣೆಯರ ಆಯ್ದ 2,500 ವಚನಗಳನ್ನು ಅನುವಾದಿಸುವ ಕಾರ್ಯ 2008ರಲ್ಲಿ ಶುರುವಾಗಿತ್ತು.

ಈತನಕ 28 ಭಾರತೀಯ ಹಾಗೂ 9 ವಿದೇಶಿ ಭಾಷೆಗಳಿಗೆ ಈ ವಚನಗಳು ಅನುವಾದಗೊಂಡಿವೆ. ಇದಕ್ಕಾಗಿ ಬಸವ ಸಮಿತಿಯು ಕರ್ನಾಟಕ ಕೇಂದ್ರಿಯ ವಿ.ವಿ (ಸಿಯುಕೆ), ಬನಾರಸ್ ಹಿಂದೂ ವಿ.ವಿ, ಅಸ್ಸಾಂ ವಿ.ವಿ, ಜೆಎನ್‌ಯು, ಕೆಯುಡಿ ಸೇರಿ 15 ವಿ.ವಿಗಳೊಂದಿಗೆ ಸೇರಿ ಹಗಲು ರಾತ್ರಿ ಪರಿಶ್ರಮದ ಬೆವರು ಹರಿಸಿದೆ.

ಏ.20ರಂದು ಬೆಂಗಳೂರಿನಲ್ಲಿ, ಬಸವ ಜಯಂತಿ ಕಾರ್ಯಕ್ರಮದಲ್ಲಿ ಸಾಂಕೇತಿಕವಾಗಿ ಚೈನೀಸ್, ಜರ್ಮನ್, ಜಾಪನೀಸ್, ಫ್ರೆಂಚ್, ಸ್ಪ್ಯಾನಿಷ್, ನೇಪಾಳಿ ಭಾಷೆಗಳಲ್ಲಿ ಅನುವಾದಿತ ಕೃತಿಗಳ ಬಿಡುಗಡೆಗೆ ಆಗಲಿದೆ.



> 'ವಚನ ಸಾಹಿತ್ಯದಲ್ಲಿ ನೀತಿಗಳಿವೆ, ಮೌಲ್ಯಗಳಿವೆ. ಅಂಥ ಸಾಹಿತ್ಯದ ಅನುವಾದಕ್ಕೆ ವಿಶ್ವವಿದ್ಯಾಲಯದ ಮೂವರು ವಿದೇಶಿ ಭಾಷೆಗಳ ತಜ್ಞರ ಸೇವೆ ಒದಗಿಸಿದ್ದಕ್ಕೆ ಹೆಮ್ಮೆ ಇದೆ
> **ಪ್ರೊ.ಬಟ್ಟು ಸತ್ಯನಾರಾಯಣ,** ಕುಲಪತಿ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ

'ಅನುವಾದದಲ್ಲಿ ಎ.ಐ ಬಳಕೆಗೆ ಚಿಂತನೆ'



'ವಚನ ಸಾಹಿತ್ಯವನ್ನು ಕನ್ನಡದಿಂದ ಈತನಕ 28 ಭಾರತೀಯ ಭಾಷೆ ಹಾಗೂ 9 ವಿದೇಶಿ ಭಾಷೆಗಳಿಗೆ ಅನುವಾದಿಸಲಾಗಿದೆ. ಉಜ್ಬೇಕ್, ರಷ್ಯನ್, ಕೊರಿಯಾ ಭಾಷೆಗಳಿಗೆ ಅನುವಾದ ಕಾರ್ಯ ಪ್ರಗತಿಯಲ್ಲಿದೆ. ಈತನಕ ಸಂಪನ್ಮೂಲ ವ್ಯಕ್ತಿಗಳ ನೆರವು ಪಡೆಯುತ್ತಿದ್ದೆವು. ಇದೀಗ ಕೃತಕ ಬುದ್ಧಿಮತ್ತೆ ನೆರವಿನಲ್ಲಿ 2027ರ ಹೊತ್ತಿಗೆ ಆಯ್ದ 2,500 ವಚನಗಳನ್ನು ಜಗತ್ತಿನ ಎಲ್ಲ ಭಾಷೆಗಳಿಗೂ ಅನುವಾದಿಸುವ ಗುರಿಯಿದೆ' ಎನ್ನುತ್ತಾರೆ ಬೆಂಗಳೂರಿನ ಕೇಂದ್ರ ಬಸವ ಸಮಿತಿಯ ಅಧ್ಯಕ್ಷ ಅರವಿಂದ ಜತ್ತಿ.

3 ಭಾಷೆಗಳಿಗೆ ಸಿಯುಕೆ ಸಹಯೋಗ: ಕನ್ನಡದಲ್ಲಿರುವ ವಚನ ಸಾಹಿತ್ಯವನ್ನು ಸ್ಪ್ಯಾನಿಷ್, ಜರ್ಮನ್, ಜಾಪನೀಸ್ ಭಾಷೆಗಳಿಗೆ ಅನುವಾದಿಸಲು ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿ.ವಿಯ ಭಾಷಾ ತಜ್ಞರು ಸಹಯೋಗ ನೀಡಿದ್ದಾರೆ. ಈ ಕುರಿತು ಬಸವ ಸಮಿತಿ ಹಾಗೂ ಸಿಯುಕೆ 2021ರಲ್ಲಿ ಶೈಕ್ಷಣಿಕ ಒಪ್ಪಂದ ಮಾಡಿಕೊಂಡಿದ್ದವು.

ಒಪ್ಪಂದದಡಿ ಕರ್ನಾಟಕ ಕೇಂದ್ರೀಯ ವಿವಿಯ ಪಿಯಾಲಿ ರಾಯ್ ಅವರು ಜಾಪನೀಸ್ ಭಾಷೆಗೆ, ಶಿವಂ ಮಿಶ್ರಾ ಜರ್ಮನ್ ಭಾಷೆಗೆ ಹಾಗೂ ಪಿ.ಕುಮಾರ ಮಂಗಲಂ ಸ್ಪ್ಯಾನಿಷ್ ಭಾಷೆಗೆ ವಚನಗಳ ಅನುವಾದಕ್ಕೆ ಶ್ರಮಿಸಿದ್ದಾರೆ. ಕರ್ನಾಟಕ ಕೇಂದ್ರೀಯ ವಿ.ವಿ. ಪ್ರಾಧ್ಯಾಪಕ ಗಣಪತಿ ಸಿನ್ನೂರ ಸಂಯೋಜಕರಾಗಿ ಕೆಲಸ ಮಾಡಿದ್ದಾರೆ.

ಜಾಪನೀಸ್ ಭಾಷೆಗೆ ಬೆಂಗಳೂರು ನಗರ ವಿ.ವಿ.ಯ ಸುಧಾ ಶ್ರೀಧರ, ಜರ್ಮನ್ ಭಾಷೆಗೆ ಭಾನುಮೂರ್ತಿ ನೆರವಾಗಿದ್ದಾರೆ.

ಬಸವಣ್ಣ ಮತ್ತು ಭಕ್ತಿ: ಬದಲಾದ ವ್ಯಾಕರಣ

• ಎಚ್. ಎಸ್. ಮುರಳೀಧರ



ಭಕ್ತಿಗೆ ಲೋಕದಲ್ಲಿರುವ ವ್ಯಾಕರಣವೆಂದರೆ ದೇವನಿಗಾಗಿ ಮಾಡುವ ಮತ್ತು ದೇವನನ್ನು ಬೇಡುವ ವ್ಯಾಕರಣ. ಇಲ್ಲಿ ದೇವನನ್ನು ಬೇಡಿದರೂ ಅದು ದೇವನಿಗಾಗಿ ಬೇಡುವುದಾಗದೆ ಲೋಕಕ್ಕಾಗಿ ಬೇಡುವುದೇ ಆಗಿರುತ್ತದೆ. ಇಲ್ಲಿ ಲೋಕವನ್ನು ಒಂದು ಕೊರತೆಯ ನೆಲೆಯಲ್ಲಿ ಕಾಣಲಾಗುತ್ತದೆ. ಅಲ್ಲದೆ ಆ ಕೊರತೆಯನ್ನು ತುಂಬಿಕೊಳ್ಳುವುದಕ್ಕಾಗಿ ದೇವನನ್ನು ಅವಲಂಬಿಸಲಾಗುತ್ತದೆ. ಇಲ್ಲಿ ದೇವನಿಗಾಗಿ ಲೋಕವಲ್ಲ, ಲೋಕಕ್ಕಾಗಿ ದೇವನಿರುತ್ತಾನೆ. ಈ ಹಿನ್ನೆಲೆಯಲ್ಲಿ ಬಸವಣ್ಣನ ಒಂದು ವಚನವನ್ನು ಗಮನಿಸಬಹುದು: 'ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು. ನೀನಲ್ಲದೆ ಮತ್ತಾರು ಇಲ್ಲವಯ್ಯ.'

ಇಲ್ಲಿ ದೇವನೊಂದಿಗಿನ ಒಂದು ಸಂಬಂಧವನ್ನು ಸ್ಥಾಪಿಸಲಾಗುತ್ತಿದೆ. ಆದರೆ ಇಲ್ಲೊಂದು ಪಲ್ಲಟವಿದೆ. ಅದು ಲೋಕಸಂಬಂಧವನ್ನು ದೇವಸಂಬಂಧಕ್ಕೆ ಸ್ಥಳಾಂತರಿಸುವ ಪಲ್ಲಟವಾಗಿದೆ. ಈ ಸ್ಥಳಾಂತರವನ್ನು ಎರಡು ನೆಲೆಗಳಲ್ಲಿ ಈ ವಚನ ಸಾಧಿಸುತ್ತದೆ. ಮೊದಲನೆಯ ಹಂತದಲ್ಲಿ 'ನೀನು ನೀನು' ಎಂದು ಅವಧಾರಣೆಯನ್ನು ತರುವುದರ ಮೂಲಕ; ಎರಡನೆಯ ಹಂತದಲ್ಲಿ 'ನೀನಲ್ಲದೆ ಮತ್ತಾರು ಇಲ್ಲವಯ್ಯ' ಎಂಬ ನಿರಾಕರಣೆಯ ಮೂಲಕ.

ಈ ಅವಧಾರಣೆಯಲ್ಲಿ ಒಂದು ಲೋಕದ ವ್ಯಾಕರಣವಿದೆ. 'ನೀನಲ್ಲದೆ ಮತ್ತಾರು ಇಲ್ಲ' ಎನ್ನುವುದರ ಮೂಲಕ ಅದು ತನ್ನ ಜವಾಬ್ದಾರಿಯನ್ನು ಆ ಇನ್ನೊಬ್ಬ ವ್ಯಕ್ತಿಯ ಮೇಲೆ ಹೊರಿಸುತ್ತದೆ. ಹೀಗೆ ಹೊರಿಸಿದ್ದನ್ನು ತಾರ್ಕಿಕವಾಗಿ ಸಮರ್ಥಿಸುವ ಕೆಲಸವನ್ನು ಇಲ್ಲಿನ ಅವಧಾರಣೆ ಮಾಡುತ್ತದೆ. ಇದೊಂದು ಒಪ್ಪಿಸುವ ಭಾಷಿಕ ವಿಧಾನವೂ ಹೌದು. ಇಲ್ಲಿನ ತಾರ್ಕಿಕ ಸರಣಿಯನ್ನು ಅನುಸರಿಸಿಕೊಂಡು ಬಂದರೆ ತನ್ನ 'ಒಪ್ಪಿಸುವಿಕೆಯೇ' ಇಲ್ಲಿಯವರೆಗಿನ ಮಂಡನೆಯ ಶಿಖರವೂ ಹೌದು. ಆದರೆ ಈ ಸಹಜ ವ್ಯಾಕರಣ ವ್ಯಾಕರಣ ಇಲ್ಲಿಂದ ಮುಂದಕ್ಕೆ ಇದಕ್ಕಿದ್ದಂತೆ ಪಲ್ಲಟಗೊಂಡುಬಿಡುತ್ತದೆ. ಮುಂದಿನ ವಾಕ್ಯ ತನ್ನನ್ನು ಒಪ್ಪಿಕೊಳ್ಳುವವನ ಮುಂದೆ ಎರಡು ಆಯ್ಕೆಗಳನ್ನು ಇಡುತ್ತದೆ: 'ಹಾಲಲದ್ದು ನೀರಲದ್ದು.'

ಆದರೆ ಇಲ್ಲಿಯವರೆಗಿನ ತಾರ್ಕಿಕ ಸರಣಿಯ ಪರಿಶೀಲನೆಯಿಂದ ಸ್ಪಷ್ಟವಾಗುವುದೇನೆಂದರೆ ಇಲ್ಲಿಯ ಮಂಡನೆ 'ಹಾಲಲದ್ದು' ಎಂಬ ಒಂದು ಆಯ್ಕೆಯನ್ನು ಮಾತ್ರ ಭಾಷಿಕವಾಗಿ ಒಪ್ಪಿಕೊಳ್ಳಬಲ್ಲುದಾಗಿದೆ. ಎರಡನೆಯ ಆಯ್ಕೆಯನ್ನು ಭಾಷಿಕ ರಚನೆಯೇ ನಿರಾಕರಿಸಿಬಿಡುತ್ತದೆ. ಇಷ್ಟಾದರೂ ಇಲ್ಲಿನ ತಾರ್ಕಿಕ ಪಲ್ಲಟ ಮಾತ್ರ ಅವೆರಡನ್ನೂ ಒಂದೇ ಆಯ್ಕೆಯ ಎರಡು ಸಂಗತಿಗಳೋ ಎಂಬಂತೆ ಒಂದು ನಿರ್ಲಿಪ್ತಿಯ ದನಿಯಲ್ಲಿ ಮುಂದಿಡುತ್ತಿದೆ. ಈ ಪಲ್ಲಟದ ಅನಿರೀಕ್ಷಿತತೆ ಒಂದು ಕ್ಷಣ ಕೇಳುಗನಾದ ಕೂಡಲಸಂಗಮನನ್ನೂ ಅಲುಗಾಡಿಸಿರಲು ಸಾಕು. ಇಲ್ಲಿಯ ವ್ಯಾಕರಣ ನುಡಿಯ ಜಾಡನ್ನು ಮಾತ್ರವಲ್ಲದೆ ಭಕ್ತಿಯನ್ನೂ ಅಲುಗಾಡಿಸಬಲ್ಲದಾಗಿದೆ. ಇದು ಭಕ್ತಿಯನ್ನು ಹಿತದ ನಂಟಿನಿಂದ ಬಿಡಿಸುವ ಎದೆಗಾರಿಕೆಯನ್ನು ತೋರುತ್ತದೆ.

ಲೋಕದ ಎಲ್ಲ ಅಹಿತಗಳನ್ನು ಅವು ಇರುವಂತೆಯೇ ಕಾಣುವ ಹಾಗೂ ಸ್ವೀಕರಿಸುವ ಈ ಧೈರ್ಯ ಭಕ್ತನನ್ನೂ ದೇವನನ್ನೂ ಬೇರೊಂದು ಬಗೆಯ ಸಂಬಂಧದಲ್ಲಿ ಸ್ಥಾಪಿಸುತ್ತದೆ. ಇನ್ನೊಂದು ನಿಟ್ಟಿನಿಂದ ನೋಡುವುದಾದರೆ ಅಹಿತವನ್ನು ದೇವನೊಂದಿಗಿನ ಸಂಬಂಧವು ಸ್ಥಾಪನೆಗೊಳ್ಳುವ ನಿಟ್ಟಿನಲ್ಲಿನ ಒಂದು ಅನಿವಾರ್ಯವನ್ನಾಗಿ ಮಾಡುತ್ತದೆ. ಬೇರೊಂದು ವಚನವು ಹೇಳುವಂತೆ, 'ಶಿವಭಕ್ತನಾಗಿ ತನ್ನ ಹಿಡಿದಹನೆಂದು ಹೋದರೆ ನುಗ್ಗು ಮಾಡುವ, ನುಸಿಯ ಮಾಡುವ, ಮಣ್ಣ ಮಾಡುವ, ಮಸಿಯ ಮಾಡುವ'. ಇದು ಭಕ್ತಿಯೆಂಬ ಅಸ್ತಿತ್ವದ ಅನಿವಾರ್ಯವೂ ಆಗಿದೆ. ಇದು ಸಂಭವಿಸಿದಾಗ ಮಾತ್ರ 'ಕಡೆಗೆ ತನ್ನಂತೆ ಮಾಡುವ' ಪ್ರಕ್ರಿಯೆ ಸಾಧ್ಯವಾಗುತ್ತದೆ. ಹೀಗೆ ಅಹಿತವನ್ನು ಭಕ್ತಿಯ ಅನಿವಾರ್ಯ ಅಂಗವಾಗಿಸುವ ದರ್ಶನ ಮಾತ್ರವೇ ಅದನ್ನು ಇನ್ನೊಂದು ಅತಿರೇಕವಾದ 'ತೋರುಂಬ ಲಾಭ'ವಾಗುವ ಅಪಾಯದಿಂದ ಪಾರುಮಾಡಬಲ್ಲದು. ಬಸವಣ್ಣನ ಕ್ರಾಂತಿಗೆ ಹೊರಗಿನ ಆಯಾಮಗಳಿರುವುದು ವೇದ್ಯವೇ. ಆದರೆ ಅದಕ್ಕೆ ಅಷ್ಟೇ ಮುಖ್ಯವಾದ ಒಳಗಿನ ಆಯಾಮಗಳಿರುವುದನ್ನು ಗಮನಿಸದಿರುವಂತಿಲ್ಲ. ಆ ನಿಟ್ಟಿನಲ್ಲಿ ಇದೊಂದು ಕಿರುನೋಟ. ❖

ಅಕ್ಷಯ ತೃತೀಯಾ: ಏಕ ಅನೇಕದ ಸಂಭ್ರಮ

• ನವೀನ ಭಟ್ಟ ಗಂಗೋತ್ರಿ



ವೈಶಾಖ ಶುಕ್ಲದ ಮೂರನೆಯ ದಿನವೇ ಅಕ್ಷಯ ತೃತೀಯಾ. ಭಾರತದ ನಾನಾ ರಾಜ್ಯಗಳ ನಾನಾ ಸಮುದಾಯಗಳಲ್ಲಿ ನಾನಾ ಹೆಸರುಗಳಲ್ಲಿ ಈ ದಿನವನ್ನು ವಿಶೇಷ ನೆನಕೆಯಿಂದ ಆಚರಿಸುವುದು ಇದೆ. ಒಂದೇ ಸಂಗತಿಯನ್ನು ನಾನಾ ರೀತಿಯಲ್ಲಿ ಪರಿಭಾವಿಸುವುದು, ಸಂಭ್ರಮಿಸಿ ಆಲಿಂಗಿಸುವುದು ಭಾರತತತ್ತ್ವ. ನಾವಿದನ್ನು ನಮ್ಮ ನುಡಿ, ವೇಷ, ಭಾಷೆ, ಹಬ್ಬ ಮತ್ತು ಸಂಪ್ರದಾಯಗಳಲ್ಲಿ ಧಾರಾಳವಾಗಿ ನೋಡಬಹುದು.

ಕನ್ನಡನಾಡಿನಲ್ಲಿ 'ಅಕ್ಷಯತದಿಗೆ' ಎಂದು ಕರೆಯಿಸಿಕೊಳ್ಳುವ ಈ ಪರ್ವದಿನವು ಹಿಂದಿ ಮತ್ತು ತತ್ಸೋದರಿ ಭಾಷೆಯ ನಾಡುಗಳಲ್ಲಿ 'ಆಖಾ ತೀಜ್' ಅಥವಾ 'ಅಕ್ತಿ' ಎಂದೂ ಕರೆಸಿಕೊಳ್ಳುತ್ತದೆ.

ಈ ದಿನದೊಂದಿಗೆ ರಾಷ್ಟ್ರದಾದ್ಯಂತ ನೆಲೆಗೊಂಡಿರುವ ಮಂಗಲಬುದ್ಧಿಯನ್ನು ನೋಡಿದರೆ ಅಚ್ಚರಿಯಾಗುತ್ತದೆ. ಕಾಡುಪಾಲಾದ ಪಾಂಡವರಿಗೆ ವನವಾಸದ ಅನುಕೂಲಕ್ಕಾಗಿ ಭಗವಾನ್ ಸೂರ್ಯನು ಅಕ್ಷಯ ಪಾತ್ರೆಯನ್ನು ಕರುಣಿಸಿದ್ದು ಇದೇ ದಿನವಂತೆ. ಈ ದಿನದಂದೇ ಒಡಿಶಾದಲ್ಲಿ ರೈತರು ಭೂಮಿಪೂಜೆಯನ್ನು ಮಾಡಿ ಖಾರಿಫ್ ಬೆಳೆಯ ಮೊದಲ ಬಿತ್ತನೆ ಆರಂಭಿಸುತ್ತಾರೆ – 'ಅಖಿ ಮುಠಿ ಅನುಕೂಲ' ಎಂಬ ಹೆಸರಿನ ಈ ಸಂಪ್ರದಾಯ ಇಡೀ ರಾಜ್ಯದಲ್ಲಿ ಸಡಗರದಿಂದ ನಡೆಯುತ್ತದೆ. ಅದೇ ದಿನ ಪುರಿಯ ಜಗನ್ನಾಥ ಮಂದಿರದ ರಥಯಾತ್ರೆಗೆ ರಥನಿರ್ಮಾಣ ಆರಂಭವಾಗುತ್ತದೆ. ಉತ್ತರ ಪ್ರದೇಶದ ವೃಂದಾವನದ ಬಾಂಕೇ ಬಿಹಾರಿ ಮಂದಿರದಲ್ಲಿ ವರ್ಷದಲ್ಲಿ ಇದೊಂದೇ ದಿನ ಭಕ್ತರಿಗೆ ಕೃಷ್ಣನ ಪಾದದರ್ಶನ ಭಾಗ್ಯ ಸಿಗುತ್ತದೆ. ಮಹಾರಾಷ್ಟ್ರದಲ್ಲಿ ವಿವಾಹಿತ ಮಹಿಳೆಯರು ಪರಸ್ಪರ ಹಳದಿ-ಕುಂಕುಮ ನೀಡಿ ಗೌರಿಯನ್ನು ಪ್ರಾರ್ಥಿಸುತ್ತಾರೆ. ಹಿಮಾಲಯದ ಯಮುನೋತ್ರಿ ಮತ್ತು ಗಂಗೋತ್ರಿ ದೇವಾಲಯಗಳು ಚಳಿಗಾಲದ ಮುಚ್ಚಿಕೆಯ ನಂತರ ಈ ಶುಭದಿನದಂದೇ ತೆರೆದುಕೊಳ್ಳುತ್ತವೆ.

ಜೈನಸಮಾಜಕ್ಕೂ ಇದು ಅತ್ಯಂತ ಪವಿತ್ರ ದಿನ. ಆದಿ ತೀರ್ಥಂಕರ ಋಷಭದೇವರು ದೀರ್ಘ ತಪಶ್ಚರ್ಯೆಯ ನಂತರ ಈ ದಿನ ಕಬ್ಬಿನ ರಸದ ರೂಪದಲ್ಲಿ ಮೊದಲ ಆಹಾರ ಸ್ವೀಕರಿಸಿದರೆಂಬ ಶ್ರದ್ಧೆ ಅವರದ್ದು. ಹೀಗಾಗಿ ಜೈನರು ವರ್ಷಪೂರ್ತಿ ಆಚರಿಸುವ ವರ್ಷೀತಪ' ಉಪವಾಸವನ್ನು ಈ ದಿನ ಕಬ್ಬಿನ ರಸವನ್ನು ಸ್ವೀಕರಿಸುವ ಮೂಲಕ ಮುಕ್ತಾಯಗೊಳಿಸುತ್ತಾರೆ.

ಇದಿಷ್ಟಲ್ಲದೆ ಅಕ್ಷಯತೃತೀಯ ಕನ್ನಡ ನಾಡಿಗೆ ಇನ್ನೊಂದು ಕಾರಣಕ್ಕೆ ಬಲು ಮನನೀಯವಾದ ದಿನ; ಈ ದಿನವೇ ಭಕ್ತಿ ಭಂಡಾರಿ ಬಸವಣ್ಣನವರು ಅವತರಿಸಿದರು ಅನ್ನುವ ಕಾರಣಕ್ಕೆ. ವೇದೋಪನಿಷತ್ತುಗಳ ತಾತ್ತ್ವಿಕ ಸಾರವನ್ನು ಮತ್ತು ಜೀವನದೃಷ್ಟಿಯನ್ನು ಲೋಕಕ್ಕೆ ಸರಳ ವಚನಗಳ ಮೂಲಕ ಕೊಡಮಾಡಿದ ಮಹಾತ್ಮ ಅವರು. ಉಪನಿಷತ್ತತ್ತ್ವವು ಅಜರಾಮರ ಅಕ್ಷಯ ಎನ್ನುವುದಕ್ಕೂ ಈ ದಿನವೊಂದು ನೆನಪಿನ ಗಂಟು.

ಇನ್ನು ಈ ದಿನ ಖರೀದಿಸಿದ ಬಂಗಾರವು ಅಕ್ಷಯವಾಗಿ ಮುಂದುವರಿಯುತ್ತದೆ ಅನ್ನುವ ಭಾರತದ ಶ್ರೀಸಾಮಾನ್ಯ ಶ್ರದ್ಧೆಯಾದರೂ ಭಾರತದ 'ಉಳಿತಾಯ ಕೇಂದ್ರಿತ ಪಾರಂಪರಿಕ ಆರ್ಥಿಕ ವ್ಯವಸ್ಥೆ'ಗೆ ಪೂರಕವಾದದ್ದೇ ಆಗಿದೆ. ಸಾಲಕೇಂದ್ರಿತ ಆರ್ಥಿಕ ಚಿಂತನೆಗಳು ಹೆಚ್ಚುತ್ತಿರುವ ಹೊತ್ತಿನಲ್ಲಿ ಅಕ್ಷಯ ತೃತೀಯಾ ಹಬ್ಬವು ಹೊಸ ತಲೆಮಾರಿನ ಜನತೆಯಲ್ಲಿ ಹೂಡಿಕೆ ಮತ್ತು ಉಳಿಕೆಯ ಪ್ರಜ್ಞೆಯನ್ನು ಬೆಳೆಸಲೆಂಬುದು ಆಶಯ. ಹಾಗೇ ನಮ್ಮ ಸಾಂಸ್ಕೃತಿಕ ಗುರುತುಗಳಲ್ಲಿ ಒಂದಾದ 'ದಾನ'ವನ್ನೂ ಈ ದಿನವೇ ಮಾಡಿದರೆ ಒಳಿತೆಂಬ ಅರಿವು ಮೂಡಲಿ. ❖

ಈ ವರ್ಷದಿಂದ ಉಚಿತ ನೋಟ್‌ಬುಕ್ ವಿತರಣೆ

• ಎ.ಎಂ.ಸುರೇಶ

ಬೆಂಗಳೂರು: ಎಲ್‌ಕೆಜಿಯಿಂದ ದ್ವಿತೀಯ ಪಿಯುಸಿವರೆಗಿನ ಸುಮಾರು 46 ಲಕ್ಷ ಮಕ್ಕಳಿಗೆ 2026–27ನೇ ಶೈಕ್ಷಣಿಕ ಸಾಲಿನಿಂದ ಮೊದಲ ಬಾರಿಗೆ ಉಚಿತವಾಗಿ ನೋಟ್ ಬುಕ್‌ಗಳನ್ನು ವಿತರಿಸಲು ಶಾಲಾ ಶಿಕ್ಷಣ ಇಲಾಖೆ ಸಿದ್ಧತೆ ನಡೆಸಿದೆ.

ಸರ್ಕಾರಿ ಶಾಲೆಗಳಲ್ಲಿ 10ನೇ ತರಗತಿವರೆಗೆ ಸುಮಾರು 38 ಲಕ್ಷ ಮಕ್ಕಳು ಹಾಗೂ ಪಿಯುಸಿಯಲ್ಲಿ ಸುಮಾರು 8 ಲಕ್ಷ ಮಕ್ಕಳು ಓದುತ್ತಿದ್ದು, ಅವರಿಗೆ ಈ ವರ್ಷದಿಂದ ಉಚಿತವಾಗಿ ನೋಟ್‌ಬುಕ್‌ಗಳನ್ನು ವಿತರಿಸಲಾಗುತ್ತದೆ ಎಂದು ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಎಲ್‌ಕೆಜಿ ಮಕ್ಕಳಿಗೆ ಚಟುವಟಿಕೆ ಆಧಾರಿತ ಕಲಿಕೆಗೆ ಪೂರಕವಾದ ಪುಸ್ತಕಗಳ ಮುದ್ರಣ ಕಾರ್ಯ ಈಗಾಗಲೇ ಶುರುವಾಗಿದೆ. 1ನೇ ತರಗತಿಯಿಂದ ಪಿಯುಸಿವರೆಗೆ ನೋಟ್‌ಬುಕ್‌ಗಳನ್ನು ನೀಡಲು ಸುಮಾರು ₹80 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಇದನ್ನು ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ಭರಿಸಲು ಪ್ರಯತ್ನಿಸಲಾಗುತ್ತಿದೆ. ಇದು ಸಾಧ್ಯವಾಗದೆ ಇದ್ದರೆ ಬೇರೆ ರೂಪದಲ್ಲಿ ಅನುದಾನ ಒದಗಿಸಲಾಗುತ್ತದೆ.

ಸಮಗ್ರ ಶಿಕ್ಷಣ ಕರ್ನಾಟಕದ ಅಡಿ ಈ ವರ್ಷ ₹1,816 ಕೋಟಿ ಅನುದಾನ ನಿಗದಿಯಾಗಿದೆ. ಇದರಲ್ಲಿ ಯಾವ, ಯಾವ ಯೋಜನೆಗಳಿಗೆ ಎಷ್ಟು ಹಣ ಖರ್ಚು ಮಾಡಬೇಕು ಎಂದು ಕ್ರಿಯಾ ಯೋಜನೆ ರೂಪಿಸಲಾಗಿದೆ. ಮೇ ತಿಂಗಳ ಮೊದಲ ವಾರದಲ್ಲಿ ನಡೆಯುವ ಯೋಜನಾ ಅನುಮೋದನೆ ಮಂಡಳಿ (ಪಿಎಬಿ) ಸಭೆಯಲ್ಲಿ ಒಪ್ಪಿಗೆ ಪಡೆದ ನಂತರ, ಯೋಜನೆಗಳು ಕಾರ್ಯಗತಗೊಳ್ಳಲಿವೆ ಎಂದು ತಿಳಿಸಿದರು. ಇದರಲ್ಲಿ ಕೇಂದ್ರ ಮತ್ತು ರಾಜ್ಯದ ಪಾಲು ಕ್ರಮವಾಗಿ ಶೇ 80:20ರಷ್ಟು ಇದೆ. ಶಿಕ್ಷಕರ ಸಂಬಳಕ್ಕೆ ₹600 ಕೋಟಿ ನಿಗದಿಯಾಗಿದೆ. ಇದನ್ನು ಹೊರತುಪಡಿಸಿ ಉಳಿದ ಹಣವನ್ನು ಗ್ರಂಥಾಲಯಗಳಿಗೆ, ಶೌಚಾಲಯಗಳ ನಿರ್ವಹಣೆ, ಮಕ್ಕಳಿಗೆ ಹೆಚ್ಚುವರಿಯಾಗಿ ಒಂದು ಜೊತೆ ಸಮವಸ್ತ್ರ, ಒಂದರಿಂದ 8ನೇ ತರಗತಿವರೆಗಿನ ಅನುದಾನಿತ ಶಾಲೆಗಳ ಮಕ್ಕಳಿಗೆ ಪಠ್ಯಪುಸ್ತಕ ನೀಡುವುದು ಇತ್ಯಾದಿ ಕಾರ್ಯಕ್ರಮಗಳಿಗೆ ವೆಚ್ಚ ಮಾಡಲು ನಿರ್ಧರಿಸಲಾಗಿದೆ.

ಪಿಎಂಶ್ರೀ ಯೋಜನೆ: ರಾಜ್ಯದಲ್ಲಿರುವ 5,190 ಪಿಎಂಶ್ರೀ ಶಾಲೆಗಳಿಗೆ ಈ ವರ್ಷ ₹318 ಕೋಟಿ ಅನುದಾನ ನಿಗದಿಪಡಿಸಲಾಗಿದೆ. ಇದರಲ್ಲಿ ಯಾವುದಕ್ಕೆ, ಎಷ್ಟು ಹಣ ವೆಚ್ಚ ಮಾಡಬೇಕು ಎಂದು ಕ್ರಿಯಾ ಯೋಜನೆ ಸಿದ್ಧಪಡಿಸಲಾಗಿದೆ. ಇದೇ 27ರಂದು ನಡೆಯುವ ಯೋಜನಾ ಅನುಮೋದನೆ ಮಂಡಳಿ (ಪಿಎಬಿ) ಸಭೆಯಲ್ಲಿ ಒಪ್ಪಿಗೆ ಪಡೆದ ನಂತರ 2026–27ನೇ ಸಾಲಿನ ಯೋಜನೆಗಳನ್ನು ಜಾರಿಗೊಳಿಸಲಾಗುತ್ತದೆ.

ಕಳೆದ ವರ್ಷ ಪಿಎಂಶ್ರೀ ಯೋಜನೆಯಡಿ ₹290 ಕೋಟಿ ಅನುದಾನ ನೀಡಲಾಗಿತ್ತು. ಅದಕ್ಕೆ ಹೋಲಿಸಿದರೆ ಈ ವರ್ಷ ₹28 ಕೋಟಿ ಹೆಚ್ಚಿಗೆ ಅನುದಾನ ನಿಗದಿಯಾಗಿದೆ. ಪಿಎಂಶ್ರೀ ಶಾಲೆಗಳನ್ನು ಕೇಂದ್ರ ಸರ್ಕಾರವೇ ಗುರುತಿಸಿದೆ. ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿದ್ದು, ಪ್ರಯೋಗಾಲಯ, ಆಟದ ಮೈದಾನ ಇತ್ಯಾದಿಗಳ ಜೊತೆಗೆ ಯೋಗ, ಸಂಗೀತ, ನೃತ್ಯ, ಕೌಶಲ, ಕಂಪ್ಯೂಟರ್ ಶಿಕ್ಷಣವನ್ನು ಕಲಿಸಲಾಗುತ್ತಿದೆ. ಇದಕ್ಕಾಗಿಯೇ ವಿಷಯವಾರು ಪ್ರತ್ಯೇಕ ಶಿಕ್ಷಕರು ಇದ್ದಾರೆ.

6ನೇ ತರಗತಿಯಿಂದ ಕೌಶಲ ಶಿಕ್ಷಣ

ಈ ವರ್ಷ 6ರಿಂದ 8ನೇ ತರಗತಿವರೆಗಿನ ಮಕ್ಕಳಿಗೆ ಕೌಶಲ ಶಿಕ್ಷಣ ನೀಡಲಾಗುತ್ತದೆ. ಇದಕ್ಕಾಗಿ ಪಠ್ಯಪುಸ್ತಕ ಸಿದ್ಧಪಡಿಸಲಾಗುತ್ತಿದ್ದು, ಅದನ್ನೂ ಉಚಿತವಾಗಿ ನೀಡಲಾಗುವುದು ಎಂದು ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕಿ ಕೆ.ವಿದ್ಯಾಕುಮಾರಿ ತಿಳಿಸಿದರು.

ಚಟುವಟಿಕೆ ಆಧಾರಿತ ಕೌಶಲ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ. ಐ.ಟಿ., ಆಟೊ ಮೊಬೈಲ್ ಸೇರಿದಂತೆ 5–6 ವಿಷಯಗಳ ಬಗ್ಗೆ ಪ್ರಾಥಮಿಕ ಹಂತವಾಗಿ ಕಲಿಸಲಾಗುತ್ತದೆ. 9ನೇ ತರಗತಿಯಿಂದ ಕೌಶಲ ಶಿಕ್ಷಣವನ್ನು ಕಡ್ಡಾಯಗೊಳಿಸಲಾಗಿದೆ ಎಂದರು.



ಯೋಜನಾ ಅನುಮೋದನೆ ಮಂಡಳಿಯಲ್ಲಿ ಒಪ್ಪಿಗೆ ದೊರೆತ ನಂತರ ಅನುದಾನ ಬಿಡುಗಡೆಯಾಗಲಿದೆ. ಕ್ರಿಯಾ ಯೋಜನೆಗೆ ಅನುಗುಣವಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು.
ಕೆ.ವಿದ್ಯಾಕುಮಾರಿ, ರಾಜ್ಯ ಯೋಜನಾ ನಿರ್ದೇಶಕಿ, ಸಮಗ್ರ ಶಿಕ್ಷಣ ಕರ್ನಾಟಕ

ಖೇರಾ ವಿರುದ್ಧ ಜಾಮೀನು ರಹಿತ ವಾರಂಟ್ ಜಾರಿಗೆ ನಿರಾಕರಣೆ

ಗುವಾಹಟಿ (ಪಿಟಿಐ): ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಪತ್ನಿ ನೀಡಿರುವ ದೂರಿಗೆ ಸಂಬಂಧಿಸಿ ಕಾಂಗ್ರೆಸ್ ನಾಯಕ ಪವನ್ ಖೇರಾ ವಿರುದ್ಧ ಜಾಮೀನು ರಹಿತ ಬಂಧನ ವಾರಂಟ್ ಜಾರಿಗೊಳಿಸುವಂತೆ ಪೊಲೀಸರು ಮಾಡಿದ್ದ ಮನವಿಯನ್ನು ಗುವಾಹಟಿಯ ಸ್ಥಳೀಯ ನ್ಯಾಯಾಲಯವೊಂದು ತಿರಸ್ಕರಿಸಿದೆ.

ಕಾಮ್‌ರೂಪ್ ಮೆಟ್ರೊ ಹಿರಿಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ನ್ಯಾಯಾಧೀಶರು ಏ.7ರಂದು ಈ ಕುರಿತ ಆದೇಶವನ್ನು ಕಾಯ್ದಿರಿಸಿದ್ದರು. ಭಾನುವಾರ ಆದೇಶ ಪ್ರಕಟಗೊಂಡಿದೆ.

'ಜಾಮೀನುರಹಿತ ವಾರಂಟ್ ಜಾರಿಗೆ ಕೋರಿ ತನಿಖಾಧಿಕಾರಿಗಳು ನೀಡಿರುವ ಮಾಹಿತಿಗಳು ಊಹಾತ್ಮಕವಾಗಿವೆ ಮತ್ತು ಅದಕ್ಕೆ ಯಾವುದೇ ಪೂರಕ ದಾಖಲೆಗಳಿಲ್ಲ' ಎಂದು ನ್ಯಾಯಾಲಯ ಹೇಳಿದೆ.

'ಹಿಮಂತ ಅವರ ಪತ್ನಿ ರಿನಿಕಿ ಭುಯಾನ್ ಅವರು ಹಲವು ಪಾಸ್‌ಪೋರ್ಟ್ ಮತ್ತು ವಿದೇಶಗಳಲ್ಲಿ ಆಸ್ತಿ ಹೊಂದಿದ್ದಾರೆ. ಈ ಬಗ್ಗೆ ಹಿಮಂತ ಅವರು ಚುನಾವಣಾ ಅಫಿಡವಿಟ್‌ನಲ್ಲಿ ಉಲ್ಲೇಖಿಸಿಲ್ಲ' ಎಂದು ಪವನ್ ಖೇರಾ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದ್ದರು.

ಕೃಷ್ಣಗಿರಿ ಕನ್ನಡಿಗರ ಸೆಳೆಯಲು ಕಸರತ್ತು

ಡಿಎಂಕೆ, ಎಐಎಡಿಎಂಕೆ ಸೆಣಸಾಟ
ಗಡಿಯಲ್ಲಿ ರಂಗೇರಿದ ಕಣ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮತದಾರರ ಮನ ಸೆಳೆಯಲು ಮುಖಂಡರ ಇನ್ನಿಲ್ಲದ ಪ್ರಯತ್ನ
- 'ಮಿನಿ ಬೆಂಗಳೂರು' ಎಂದೇ ಚಿರಪರಿಚಿತ ಆಗಿರುವ ಕ್ಷೇತ್ರ

ಆನೇಕಲ್: ತಮಿಳುನಾಡು ವಿಧಾನಸಭೆ ಚುನಾವಣೆಯ ಮತದಾನಕ್ಕೆ (ಏ.23) ಕೆಲವೇ ದಿನಗಳು ಬಾಕಿ ಉಳಿದಿದ್ದು, ಗಡಿ ಜಿಲ್ಲೆ ಕೃಷ್ಣಗಿರಿಯ ಆರು ವಿಧಾನಸಭಾ ಕ್ಷೇತ್ರ ಗಳಲ್ಲಿ ಚುನಾವಣಾ ಕಣ ರಂಗೇರಿದೆ.

ಕೊನೆಯ ಹಂತದಲ್ಲಿ ಮತದಾರರ ಮನ ಸೆಳೆಯಲು ಬಿರು ಬಿಸಿಲಿನ ನಡುವೆ ಎಲ್ಲಾ ಪಕ್ಷಗಳ ಮುಖಂಡರು, ಕಾರ್ಯಕರ್ತರು ಇನ್ನಿಲ್ಲದ ಪ್ರಯತ್ನ ನಡೆಸಿದ್ದಾರೆ.

ಕೃಷ್ಣಗಿರಿ ಜಿಲ್ಲೆಯ ಥಳೀ, ಹೊಸೂರು, ವೇಪನಪಲ್ಲಿ, ಕೃಷ್ಣಗಿರಿ, ಬರಗೂರು, ಉತ್ತಂಗರೈ ವಿಧಾನಸಭಾ ಕ್ಷೇತ್ರಗಳಲ್ಲಿ ಎಲ್ಲಾ ರಾಜಕೀಯ ಪಕ್ಷಗಳೂ ಕನ್ನಡಿಗರ ಮನವೊಲಿಕೆಗೆ ಮುಂದಾಗಿವೆ. ಇದೇ ಕಾರಣದಿಂದ ಕೃಷ್ಣಗಿರಿ ಜಿಲ್ಲೆಯ ಆರು ವಿಧಾನಸಭಾ ಕ್ಷೇತ್ರಗಳ ಉಸ್ತುವಾರಿಯನ್ನು ಕಾಂಗ್ರೆಸ್ ಪಕ್ಷ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ವಹಿಸಿದೆ.

ಆನೇಕಲ್ ಗಡಿಯಲ್ಲಿರುವ ಹೊಸೂರು ವಿಧಾನಸಭಾ ಕ್ಷೇತ್ರ ಕೈಗಾರಿಕೆ, ವ್ಯಾಪಾರ, ಬಹುರಾಷ್ಟ್ರೀಯ ಕಂಪನಿ ಹಾಗೂ ನೂರಾರು ಕಾರ್ಖಾನೆಗಳಿಂದಾಗಿ 'ಮಿನಿ ಬೆಂಗಳೂರು' ಎಂದೇ ತಮಿಳುನಾಡಿನಲ್ಲಿ ಚಿರಪರಿಚಿತ.

ಇಲ್ಲಿ ಡಿಎಂಕೆ ಮತ್ತು ಎಐಎಡಿಎಂಕೆ ಪಕ್ಷಗಳ ನಡುವೆ ನೇರ ಸೆಣಸಾಟ ನಡೆಯುತ್ತಿದೆ. ಎಐಎಡಿಎಂಕೆಯಿಂದ ಮಾಜಿ ಶಾಸಕ ಪಿ.ಬಾಲಕೃಷ್ಣಾ ರೆಡ್ಡಿ ಮತ್ತು ಡಿಎಂಕೆಯಿಂದ ಹೊಸೂರು ಮಾಜಿ ಮೇಯರ್ ಹಾಗೂ ಬೂತ್ ಮಟ್ಟದಿಂದ ಪಕ್ಷ ಸಂಘಟಿಸಿದ ಎಸ್.ಎ.ಸತ್ಯ ಕಣದಲ್ಲಿದ್ದಾರೆ. ಟಿವಿಕೆ ಪಕ್ಷದಿಂದ ವೆಂದಕರಸಣ್ ಮತ್ತು ಎನ್‌ಟಿಕೆ ಪಕ್ಷದಿಂದ ಸ್ಟಾಲಿನ್ ಕಣದಲ್ಲಿದ್ದಾರೆ.

ಎಐಎಡಿಎಂಕೆ ಅಭ್ಯರ್ಥಿ ಬಾಲಕೃಷ್ಣಾ ರೆಡ್ಡಿ ಪ್ರಬಲ ರೆಡ್ಡಿ ಸಮುದಾಯಕ್ಕೆ ಸೇರಿದ್ದು, 2016ರಲ್ಲಿ ಹೊಸೂರು ಶಾಸಕರಾಗಿದ್ದವರು. ಡಿಎಂಕೆ ಅಭ್ಯರ್ಥಿ ಹೊಸೂರು ಮಾಜಿ ಮೇಯರ್ ಆಗಿದ್ದವರು. ಹಾಗಾಗಿ ಇಬ್ಬರೂ ಕ್ಷೇತ್ರದ ಜನರಿಗೆ ಚಿರಪರಿಚಿತರು.

ಹಾಲಿ ಶಾಸಕ, ಒಕ್ಕಲಿಗ ಸಮುದಾಯದ ವೈ.ಪ್ರಕಾಶ್ ಅವರಿಗೆ ಡಿಎಂಕೆ ಈ ಬಾರಿ ಟಿಕೆಟ್ ನಿರಾಕರಿಸಿರುವುದು ಆ ಪಕ್ಷದ ಅಭ್ಯರ್ಥಿ ಗೆಲುವಿನ ಮೇಲೆ ಯಾವ ರೀತಿ ಪರಿಣಾಮ ಬೀರಲಿದೆ ಎನ್ನುವ ಕುತೂಹಲ ಹುಟ್ಟಿಸಿದೆ.ಆದರೆ, ಪ್ರಕಾಶ್ ನಡೆ ಇನ್ನೂ ನಿಗೂಢವಾಗಿದೆ. ಹೊಸೂರು ಕ್ಷೇತ್ರದಲ್ಲಿ ಒಕ್ಕಲಿಗ ಸಮುದಾಯದ ಮತದಾರರು ನಿರ್ಣಾಯಕ ಸಂಖ್ಯೆಯಲ್ಲಿದ್ದಾರೆ. ಅವರು ಡಿಎಂಕೆ ವಿರುದ್ಧ ಮುನಿಸಿಕೊಂಡರೆ ಡಿಎಂಕೆ ಅಭ್ಯರ್ಥಿಗೆ ಕಷ್ಟವಾಗಲಿದೆ. ಒಕ್ಕಲಿಗರ ಮತ ಸೆಳೆಯಲು ಎಐಎಡಿಎಂಕೆ ಇನ್ನಿಲ್ಲದಂತೆ ಪ್ರಯತ್ನ ನಡೆಸಿದೆ.

ಕ್ಷೇತ್ರದಲ್ಲಿ ಒಟ್ಟು 3,28,295 ಮತದಾರರಿದ್ದು 1,69,099 ಪುರುಷರು ಮತ್ತು 1,69,124 ಮಹಿಳಾ ಮತದಾರರಿದ್ದಾರೆ. ಕ್ಷೇತ್ರದಲ್ಲಿ ಪುರುಷರು ಮತ್ತು ಮಹಿಳೆಯರು ಸಮ ಪ್ರಮಾಣದಲ್ಲಿದ್ದಾರೆ.

ಕೃಷ್ಣಗಿರಿ ಜಿಲ್ಲೆಯ ವೇಪನಪಲ್ಲಿ ವಿಧಾನಸಭಾ ಕ್ಷೇತ್ರದಲ್ಲೂ ಡಿಎಂಕೆ ಅಭ್ಯರ್ಥಿ ಪಿ.ಎಸ್.ಶ್ರೀನಿವಾಸನ್ ಮತ್ತು ಎಐಎಡಿಎಂಕೆ ಅಭ್ಯರ್ಥಿ ಕೆ.ಪಿ. ಮುನಿಸ್ವಾಮಿ ನಡುವೆ ಪ್ರಬಲ ಸ್ಪರ್ಧೆ ಏರ್ಪಟ್ಟಿದೆ. ಡಿಎಂಕೆ ಭದ್ರಕೋಟೆಯಾಗಿದ್ದ ವೇಪನಪಲ್ಲಿಯನ್ನು 2021ರಲ್ಲಿ ಮೊದಲ ಬಾರಿ ಎಐಎಡಿಎಂಕೆ ಪಕ್ಷದ ಕೆ.ಪಿ.ಮುನಿಸ್ವಾಮಿ ವಶಪಡಿಸಿಕೊಂಡಿದ್ದರು. ಈ ಬಾರಿ ಇವರಿಬ್ಬರ ನಡುವೆಯೇ ತೀವ್ರ ಪೈಪೋಟಿ ಏರ್ಪಟ್ಟಿದೆ.

ಕೃಷ್ಣಗಿರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದಿಂದ ಮಾಜಿ ಸಂಸದ ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ ಡಾ.ಎ.ಚೆಲ್ಲಕುಮಾರ್ ಸ್ಪರ್ಧಿಸಿದ್ದರೆ, ಎಡಿಎಂಕೆ ಪಕ್ಷದಿಂದ ಕೆ.ಅಶೋಕ್ ಕುಮಾರ್ ಕಣದಲ್ಲಿದ್ದಾರೆ. ಎನ್‌ಟಿಕೆ ಪಕ್ಷದಿಂದ ಸುಗಂತಿ ಮತ್ತು ಟಿವಿಕೆ ಪಕ್ಷದಿಂದ ಮುಗಂದ್ ಕಣದಲ್ಲಿದ್ದಾರೆ. ಚೆಲ್ಲಕುಮಾರ್ ಕಾಂಗ್ರೆಸ್ ಹೈಕಮಾಂಡ್‌ನೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಈ ಕ್ಷೇತ್ರದ ಕಾಂಗ್ರೆಸ್ ಉಸ್ತುವಾರಿಯಾಗಿದ್ದಾರೆ. 2011, 2021ರಲ್ಲಿ ಎಐಎಡಿಎಂಕೆ ಮತ್ತು 2016ರಲ್ಲಿ ಡಿಎಂಕೆ ಗೆಲುವು ಸಾಧಿಸಿತ್ತು. ಕ್ಷೇತ್ರದಲ್ಲಿ ಒಟ್ಟು 2,65,037 ಮತದಾರರಿದ್ದಾರೆ. ಬರಗೂರು ವಿಧಾನಸಭಾ ಕ್ಷೇತ್ರದಲ್ಲಿ ಡಿಎಂಕೆ ಪಕ್ಷದ ಮತಿಯಳಗನ್ ಮತ್ತು ಎಡಿಎಂಕೆ ಪಕ್ಷದಿಂದ ಗೋವಿಂದಅರಸನ್ ಸೆಣಸಾಡುತ್ತಿದ್ದಾರೆ. ಎನ್‌ಟಿಕೆ ಪಕ್ಷದಿಂದ ಕವಿನ್ ಮತ್ತು ಟಿವಿಕೆ ಪಕ್ಷದಿಂದ ಇ.ಮುರಳೀಧರನ್ ಕಣದಲ್ಲಿದ್ದಾರೆ.

ಎಐಎಡಿಎಂಕೆ ಪಕ್ಷದ ಭದ್ರಕೋಟೆ ಉತ್ತಂಗರೈ ವಿಧಾನಸಭಾ ಕ್ಷೇತ್ರದಲ್ಲಿ ಎಐಎಡಿಎಂಕೆಯಿಂದ ಟಿ.ಎಂ. ತಮಿಳ್ ಸೆಲ್ವಂ, ಕಾಂಗ್ರೆಸ್‌ನಿಂದ ಕೆ.ಕುಪ್ಪುಸ್ವಾಮಿ, ಎನ್‌ಟಿಕೆಯಿಂದ ಮೇಗಳ ಮತ್ತು ಟಿವಿಕೆಯಿಂದ ಎಂ.ರಮೇಶ್ ಕಣದಲ್ಲಿದ್ದಾರೆ. 2011, 2016, 2021 ಸತತ 3 ಅವಧಿಗೆ ಎಐಎಡಿಎಂಕೆ ಅಭ್ಯರ್ಥಿ ಇಲ್ಲಿಂದ ಗೆಲುವು ಸಾಧಿಸಿದ್ದಾರೆ. ಈ ಬಾರಿ ಕಾಂಗ್ರೆಸ್ ಎಐಎಡಿಎಂಕೆ ಕೋಟೆ ಭೇದಿಸಲು ಸಜ್ಜಾಗಿದೆ.

ಸ್ಟಾಲಿನ್, ನಾಯ್ಡು ಪ್ರಚಾರ

ಡಿಎಂಕೆ ಮೈತ್ರಿ ಅಭ್ಯರ್ಥಿಗಳ ಪರ ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಭಾನುವಾರ ಹೊಸೂರಿನ ಅಂದವಾಡಿಯಲ್ಲಿ ಪ್ರಚಾರ ನಡೆಸಿದರು. ಎಐಎಡಿಎಂಕೆ ಮತ್ತು ಬಿಜೆಪಿ ಮೈತ್ರಿಕೂಟದ ಪರ ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಸೋಮವಾರ ಪ್ರಚಾರ ನಡೆಸಲಿದ್ದಾರೆ. ಹೊಸೂರು, ಥಳೀ,ವೇಪನಪಲ್ಲಿ, ಕೃಷ್ಣಗಿರಿ ವಿಧಾನಸಭಾ ಕ್ಷೇತ್ರಗಳ ಇಂಡಿಯಾ ಒಕ್ಕೂಟದ ಅಭ್ಯರ್ಥಿಗಳ ಪರವಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಸೋಮವಾರ ಮತಯಾಚನೆ ಮಾಡಲಿದ್ದಾರೆ.

ಪ್ರಾದೇಶಿಕ ಪಕ್ಷಗಳ ಅಸ್ತಿತ್ವಕ್ಕೆ ಎನ್‌ಡಿಎ ಕಂಟಕ: ಸ್ಟಾಲಿನ್

ಆನೇಕಲ್: ಪ್ರಾದೇಶಿಕ ಅಸ್ಮಿತೆಗಾಗಿ ಹೋರಾಡುತ್ತಿರುವ ಪ್ರಾದೇಶಿಕ ಪಕ್ಷಗಳ ಅಸ್ತಿತ್ವಕ್ಕೆ ಬಿಜೆಪಿ ನೇತೃತ್ವದ ಎನ್‌ಡಿಎ ಕಂಟಕ ಎಂದು ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಟೀಕಿಸಿದರು.

ಹೊಸೂರು ಕ್ಷೇತ್ರದ ಅಂದವಾಡಿಯಲ್ಲಿ ಕಾಂಗ್ರೆಸ್, ಡಿಎಂಕೆ ಮೈತ್ರಿಕೂಟದ ಅಭ್ಯರ್ಥಿಗಳ ಪರ ಮತಯಾಚಿಸಿದ ಅವರು, ಎನ್‌ಡಿಎ ವಿನಾಶಕಾರಿ ಶಕ್ತಿಗಳ ಕೂಟ ಎಂದು ಜರಿದರು.

ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯದ ಹಕ್ಕುಗಳಿಗಾಗಿ ಹೋರಾಡುತ್ತಿರುವ ಪ್ರಾದೇಶಿಕ ಪಕ್ಷಗಳ ಅಸ್ಮಿತೆಯನ್ನು ನಾಶಪಡಿಸುವ ಕಾರ್ಯಸೂಚಿ ಹೊಂದಿರುವ ಒಕ್ಕೂಟ ವ್ಯವಸ್ಥೆ ವಿರೋಧಿಗಳಾದ ಬಿಜೆಪಿ ಹಾಗೂ ಅದರ ಮಿತ್ರ ಪಕ್ಷಗಳಿಗೆ ಈ ಬಾರಿ ತಮಿಳುನಾಡು ಮತದಾರರು ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ತಮಿಳುನಾಡಿನಲ್ಲಿ ಬಿಜೆಪಿ ಶಾಶ್ವತವಾಗಿ ಬಾಗಿಲು ಮುಚ್ಚಲಿದೆ. ದ್ರಾವಿಡರ ಅಸ್ಮಿತೆಗಾಗಿ ಹೋರಾಡುತ್ತಿರುವ ಡಿಎಂಕೆ ಮತ್ತೊಮ್ಮೆ ಗೆಲ್ಲುವುದು ನಿಶ್ಚಿತ ಎಂದು ಸ್ಟಾಲಿನ್ ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್ ಪಕ್ಷ ಮಹಿಳೆಯರ ಪರ ಮತ್ತು ಮಹಿಳಾ ರಾಜಕೀಯ ಪ್ರಾತಿನಿಧ್ಯ ಕಾಯ್ದೆ ಪರವಾಗಿದೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ಪಷ್ಟಪಡಿಸಿದರು.

ಸದ್ಯ ಅಸ್ತಿತ್ವದಲ್ಲಿರುವ 543 ಲೋಕಸಭಾ ಕ್ಷೇತ್ರಗಳಲ್ಲಿಯೇ ಮಹಿಳಾ ಮೀಸಲಾತಿ ಜಾರಿಗೊಳಿಸಬೇಕು. ಆದರೆ, ಬಿಜೆಪಿ ಅಧಿಕಾರ ದುರುಪಯೋಗ ಪಡಿಸಿಕೊಂಡು ಚುನಾವಣೆ ಗೆಲ್ಲಲು ಹಿಂಬಾಗಿಲು ಮೂಲಕ ಯತ್ನಿಸಿದ್ದರಿಂದ ಮಹಿಳಾ ಮೀಸಲಾತಿ ಮಸೂದೆಗೆ ಲೋಕಸಭೆಯಲ್ಲಿ ಸೋಲಾಯಿತು ಎಂದರು.

ಕೇಂದ್ರ ಸರ್ಕಾರದ ತಪ್ಪು ಹಾಗೂ ಜನವಿರೋಧಿ ನೀತಿಗಳಿಂದಾಗಿ ಬಡವರು ಮತ್ತು ಆರ್ಥಿಕವಾಗಿ ಹಿಂದುಳಿದವರು ಪರದಾಡುವಂತಾಗಿದೆ. ಸಂವಿಧಾನ ವಿರೋಧಿಯಾದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಈ ಚುನಾವಣೆಯಲ್ಲಿ ಮತದಾರರು ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಇಂಡಿಯಾ ಒಕ್ಕೂಟದ ಶಕ್ತಿ. ಅವರಿಗೆ ಬಲ ತುಂಬುವುದು ಕಾಂಗ್ರೆಸ್ ಕರ್ತವ್ಯ. ತಮಿಳುನಾಡು ಅಭಿವೃದ್ಧಿಗೆ ರಾಜ್ಯದಲ್ಲಿ ಡಿಎಂಕೆ ನೇತೃತ್ವ ಅಗತ್ಯ' ಎಂದು ಘೋಷಿಸಿದರು.

ನೆತ್ತಿ ಸುಡುವ ಬಿಸಿಲನ್ನೂ ಲೆಕ್ಕಿಸದೆ ಎರಡೂ ಪಕ್ಷಗಳ ಸಾವಿರಾರು ಕಾರ್ಯಕರ್ತರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಡಿಎಂಕೆ-ಕಾಂಗ್ರೆಸ್ ಮೈತ್ರಿಕೂಟದ ಅಭ್ಯರ್ಥಿಗಳಾದ ಚೆಲ್ಲಕುಮಾರ್, ರಾಮಚಂದ್ರನ್, ಸತ್ಯ, ಶ್ರೀನಿವಾಸನ್, ಮತಿಯಳಗನ್, ಕೆ.ಕುಪ್ಪುಸ್ವಾಮಿ, ಡಿಎಂಕೆ ಜಿಲ್ಲಾ ಕಾರ್ಯದರ್ಶಿ ವೈ.ಪ್ರಕಾಶ್ ಹಾಗೂ ಶಾಸಕ ಬಿ.ಶಿವಣ್ಣ, ಕೆಪಿಸಿಸಿ ಕಾರ್ಯದರ್ಶಿ ಎಂ.ಬಾಬುರೆಡ್ಡಿ, ಬಮೂಲ್ ನಿರ್ದೇಶಕ ಆರ್. ಕೆ.ರಮೇಶ್, ಗಟ್ಟಹಳ್ಳಿ ಸೀನಪ್ಪ ಭಾಗವಹಿಸಿದ್ದರು.



ಅಭ್ಯರ್ಥಿಗಳ ಪರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಮತಯಾಚನೆ ಮಾಡಿದರು

ಪಟಾಕಿ ಸ್ಫೋಟ: 23ಕ್ಕೂ ಹೆಚ್ಚು ಸಾವು

ಒಂದನೇ ಪುಟದಿಂದ...

ಇವರಲ್ಲಿ ಮೂವರು ಮಹಿಳೆಯರು ಸೇರಿದ್ದು, ಅವರಿಗೆ ಶೇಕಡ 60ರಷ್ಟು ಸುಟ್ಟ ಗಾಯಗಳಾಗಿವೆ' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಕಟ್ಟನಾರಪಟ್ಟಿಯ ಮುತ್ತುಮಾಣಿಕ್ಯಂ ಎಂಬವರಿಗೆ ಸೇರಿದ 'ವನಜಾ' ಹೆಸರಿನ ಪಟಾಕಿ ತಯಾರಿಕೆ ಘಟಕದಲ್ಲಿ ಸ್ಫೋಟ ಸಂಭವಿಸಿದೆ. ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ. ಅನೇಕ ಮಂದಿ ಕಟ್ಟಡಗಳ ಅವಶೇಷಗಳಡಿ ಸಿಲುಕಿರುವ ಸಾಧ್ಯತೆ ಇದ್ದು, ಸಾವಿನ ಸಂಖ್ಯೆ ಇನ್ನೂ ಹೆಚ್ಚಬಹುದು ಎಂದು ಪೊಲೀಸ್, ಅಗ್ನಿಶಾಮಕ ಇಲಾಖೆಯ ಮೂಲಗಳು ತಿಳಿಸಿವೆ.

ಪಟಾಕಿ ತಯಾರಿಕಾ ಘಟಕವು ನಾಗ್ಪುರದ ಪೆಟ್ರೋಲಿಯಂ ಮತ್ತು ಸ್ಫೋಟಕ ಸುರಕ್ಷತಾ ಸಂಸ್ಥೆಯಿಂದ (ಪಿಇಎಸ್‌ಒ) ಪರವಾನಗಿ ಪಡೆದು ಕೊಂಡಿರುವುದು ಪೊಲೀಸರ ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ.



ಸ್ಫೋಟದ ಬಳಿಕ ದಟ್ಟ ಹೊಗೆ ಎದ್ದಿದ್ದ ದೃಶ್ಯ – ಪಿಟಿಐ ಚಿತ್ರ

ಹಲವು ಗಂಟೆಗಳ ಕಾರ್ಯಾಚರಣೆ

ಘಟನೆ ನಡೆದ ಕೆಲ ಹೊತ್ತಿನಲ್ಲೇ ಅಗ್ನಿಶಾಮಕ ದಳದ ಸಿಬ್ಬಂದಿ, ಪೊಲೀಸರು ಸ್ಥಳಕ್ಕೆ ಧಾವಿಸಿದರು. ಆದರೆ, ಬೆಂಕಿಯ ಜ್ವಾಲೆ ಇಡೀ ಕಟ್ಟಡವನ್ನು ಆವರಿಸಿದ್ದರಿಂದ, ಆರಂಭಿಕ ಸ್ಫೋಟದ ನಂತರ ಮತ್ತೆ ಮತ್ತೆ ಪಟಾಕಿಗಳು ಸಿಡಿಯುತ್ತಲೇ ಇದ್ದಿದ್ದರಿಂದ ರಕ್ಷಣಾ ಕಾರ್ಯಾಚರಣೆಗೆ ಅಡ್ಡಿಯಾಯಿತು. ಬೆಂಕಿ ನಂದಿಸಲು ಹಲವು ಗಂಟೆಗಳೇ ಬೇಕಾಯಿತು ಎಂದು ರಕ್ಷಣಾ ಕಾರ್ಯದಲ್ಲಿ ತೊಡಗಿದ್ದ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಎರಡನೇ ದುರಂತ; ಕ್ರಮಕ್ಕೆ ಸಿಎಂ ಸೂಚನೆ

ವಿರುಧುನಗರ ಜಿಲ್ಲೆಯ ವೆಂಬಕೊಟ್ಟೈ ಪ್ರದೇಶದ ಪಟಾಕಿ ತಯಾರಿಕಾ ಘಟಕವೊಂದರಲ್ಲಿ ಇತ್ತೀಚೆಗೆ ಸ್ಫೋಟ ಸಂಭವಿಸಿ ನಾಲ್ವರು ಮೃತಪಟ್ಟಿದ್ದರು. ಈಗ ಮತ್ತೊಂದು ದುರಂತ ಇದೇ ಜಿಲ್ಲೆಯಲ್ಲಿ ನಡೆದಿದೆ.

'ಸಚಿವ ಕೆ.ಕೆ.ಎಸ್.ಆರ್. ರಾಮಚಂದ್ರನ್ ಮತ್ತು ತಂಗಂ ತೆನ್ನರಸು ಅವರಿಗೆ ತಕ್ಷಣವೇ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆಯನ್ನು ತ್ವರಿತಗೊಳಿಸಲು ಮತ್ತು ಮೇಲ್ವಿಚಾರಣೆ ನಡೆಸಲು ಸೂಚಿಸಿದ್ದೇನೆ. ವಿರುಧುನಗರ ಜಿಲ್ಲಾಧಿಕಾರಿಯನ್ನು ಸಂಪರ್ಕಿಸಿ ತುರ್ತು ಕ್ರಮ ವಹಿಸಲು ನಿರ್ದೇಶಿಸಲಾಗಿದೆ. ಮೃತಪಟ್ಟವರ ಕುಟುಂಬದ ಜತೆಗೆ ತಮಿಳುನಾಡು ಸರ್ಕಾರ ಇದೆ' ಎಂದು ಮುಖ್ಯಮಂತ್ರಿ ಸ್ಟಾಲಿನ್ ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ರಸ್ತೆ ಸುರಕ್ಷತೆ ಕೂಡ ಜೀವಿಸುವ ಹಕ್ಕಿನ ಭಾಗ • ಸುರಕ್ಷತೆಗೆ ಮಾರ್ಗಸೂಚಿ ಪ್ರಕಟಿಸಿದ ಸುಪ್ರೀಂ ಕೋರ್ಟ್

'ಹೆದ್ದಾರಿಗಳು ಸಾವಿನ ದಾರಿಗಳಾಗಬಾರದು'

ನವದೆಹಲಿ (ಪಿಟಿಐ): 'ಆಡಳಿತದ ಆಲಸ್ಯ ಧೋರಣೆ, ಮೂಲಸೌಕರ್ಯ ಕೊರತೆಯ ಕಾರಣಕ್ಕಾಗಿ ದೇಶದ ಹೆದ್ದಾರಿಗಳು, ಎಕ್ಸ್‌ಪ್ರೆಸ್‌ವೇಗಳು ಸಾವಿನ ದಾರಿಗಳಾಗಬಾರದು' ಎಂದು ಸುಪ್ರೀಂ ಕೋರ್ಟ್ ಹೇಳಿದೆ. ರಸ್ತೆ ಸುರಕ್ಷತೆಗಾಗಿ ದೇಶದಾದ್ಯಂತ ಜಾರಿ ಮಾಡುವಂತೆ ನ್ಯಾಯಾಲಯವೇ ಮಾರ್ಗಸೂಚಿಯನ್ನೂ ರೂಪಿಸಿದೆ.

'ಯಾರೋ ಒಬ್ಬರು ಇನ್ನೊಬ್ಬರ ಹತ್ಯೆ ಮಾಡಿದಾಗ ಮಾತ್ರವೇ 'ಜೀವಿಸುವ ಹಕ್ಕು' ಉಲ್ಲಂಘನೆಯಾಗುವುದಿಲ್ಲ. ಜನರು ಸುರಕ್ಷಿತವಾಗಿ ಜೀವಿಸುವ ವಾತಾವರಣ ಸೃಷ್ಟಿಸಬೇಕು ಎನ್ನುವುದೂ ಈ ಹಕ್ಕಿನ ಭಾಗವೇ ಆಗಿದೆ. ಈ ಜವಾಬ್ದಾರಿ ಸರ್ಕಾರಗಳ ಮೇಲಿದೆ' ಎಂದು ಜೆ.ಕೆ. ಮಾಹೇಶ್ವರಿ ಮತ್ತು ಎ.ಎಸ್. ಚಂದೂರ್ಕರ್ ಅವರ ಪೀಠ ಅಭಿಪ್ರಾಯಪಟ್ಟಿದೆ.

'ಭಾರತದಲ್ಲಿನ ಒಟ್ಟು ರಸ್ತೆಯ ಸಂಪರ್ಕ ವಿಸ್ತೀರ್ಣದಲ್ಲಿ ರಾಷ್ಟ್ರೀಯ ಹೆದ್ದಾರಿಯ ಪ್ರಮಾಣವು ಶೇ 2ರಷ್ಟು ಮಾತ್ರ. ಆದರೆ, ದೇಶದಲ್ಲಿ ರಸ್ತೆ ಅಪಘಾತದಲ್ಲಿ ಸಂಭವಿಸುವ ಒಟ್ಟು ಸಾವುಗಳ ಸಂಖ್ಯೆಯಲ್ಲಿ ಶೇ 30ರಷ್ಟು ಇಂಥ ರಾಷ್ಟ್ರೀಯ ಹೆದ್ದಾರಿಗಳಲ್ಲೇ ಸಂಭವಿಸುತ್ತಿವೆ' ಎಂದು ಪೀಠ ಹೇಳಿದೆ.

ರಸ್ತೆ ಮತ್ತು ಸಾರಿಗೆ ಸಚಿವಾಲಯ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಮತ್ತು ರಾಜ್ಯ, ಕೇಂದ್ರಾಡಳಿತ ಪ್ರದೇಶಗಳಿಗೆ ಮಾರ್ಗಸೂಚಿಗಳನ್ನು ನೀಡಿ ಇದೇ 13ರಂದು ಪೀಠ ಆದೇಶಿಸಿದೆ.

'ಹೆದ್ದಾರಿಗಳಲ್ಲಿ ಅಕ್ರಮವಾಗಿ ವಾಹನ ನಿಲ್ಲಿಸುವುದು ಮತ್ತು ಬ್ಲಾಕ್‌ಸ್ಪಾಟ್‌ಗಳಂಥ ಸಮಸ್ಯೆಗಳನ್ನು ಸರ್ಕಾರಗಳು ಪರಿಹರಿಸಬಹುದು. ಇಂಥ ಪರಿಹರಿಸಬಹುದಾದ ಸಮಸ್ಯೆಗಳಿಂದ ಒಂದು ಸಾವು ಸಂಭವಿಸುವುದೂ ಸರ್ಕಾರದ ವೈಫಲ್ಯ. ನಾವು ನೀಡಿದ ಮಾರ್ಗಸೂಚಿಗಳು ಪಾಲನೆ ಆಗುತ್ತಿವೆಯೇ ಇಲ್ಲವೇ ಎನ್ನುವ ಬಗ್ಗೆ ಆದೇಶ ಬಂದ 75 ದಿನಗಳ ಒಳಗಾಗಿ ಎಲ್ಲ ರಾಜ್ಯಗಳಿಂದ ದತ್ತಾಂಶಗಳನ್ನು ಸಂಗ್ರಹಿಸಿ ನಮಗೆ ಸ್ಥಿತಿಗತಿ ವರದಿ ನೀಡಬೇಕು' ಎಂದು ಹೆದ್ದಾರಿ ಪ್ರಾಧಿಕಾರಕ್ಕೆ ಪೀಠ ಸೂಚಿಸಿದೆ.

ಪ್ರಕರಣವೇನು?: ರಾಜಸ್ಥಾನದ ಫಲೋದಿ ಮತ್ತು ತೆಲಂಗಾಣದ ರಂಗಾರೆಡ್ಡಿಯಲ್ಲಿ 2025ರ ನವೆಂಬರ್ 2 ಮತ್ತು 3ರಂದು ನಡೆದ ಪ್ರತ್ಯೇಕ ರಸ್ತೆ ಅಪಘಾತಗಳಲ್ಲಿ 34 ಮಂದಿ ಮೃತಪಟ್ಟಿದ್ದರು. ಮೂಲಸೌಕರ್ಯಗಳ ಕೊರತೆ ಕಾರಣಕ್ಕೆ ಈ ಅಪಘಾತಗಳು ಸಂಭವಿಸಿದ್ದವು. ಈ ಕುರಿತು ಸುಪ್ರೀಂ ಕೋರ್ಟ್ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದೆ.

ಮಾರ್ಗಸೂಚಿಗಳೇನು?

- ಹೆದ್ದಾರಿಗಳ ಪಕ್ಕದಲ್ಲಿ ಹೊಸ ಡಾಬಾ ಅಥವಾ ಇನ್ನ್ಯಾವುದೇ ತಿನಿಸುಗಳ ವಾಣಿಜ್ಯ ಸಂಕೀರ್ಣ ನಿರ್ಮಾಣಕ್ಕೆ ನಿರ್ಬಂಧ ಹೇರಬೇಕು. ಈಗಾಗಲೇ ಇರುವ ಇಂಥ ಸಂಕೀರ್ಣಗಳನ್ನು ಮುಚ್ಚಬೇಕು. ನಮ್ಮ ಆದೇಶದ 60 ದಿನಗಳ ಒಳಗಾಗಿ ಹೆದ್ದಾರಿ ಪಕ್ಕದಲ್ಲಿರುವ ಎಲ್ಲ ಅಕ್ರಮ ಕಟ್ಟಡಗಳನ್ನು ಜಿಲ್ಲಾಧಿಕಾರಿ ನೆಲಸಮ ಮಾಡಬೇಕು
- ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅಥವಾ ಲೋಕೋಪಯೋಗಿ ಇಲಾಖೆಯಿಂದ ಅನುಮತಿ ಪಡೆದುಕೊಳ್ಳದೇ ಹೆದ್ದಾರಿ ಸುರಕ್ಷತಾ ವಲಯದ ಒಳಗೆ ವಾಣಿಜ್ಯ ಉದ್ದೇಶಕ್ಕೆ ನೀಡಲಾಗಿರುವ ಎಲ್ಲ ಪರವಾನಗಿ ಮತ್ತು ಎನ್‌ಒಸಿಗಳನ್ನು ಯಾವುದೇ ಇಲಾಖೆ, ಅಧಿಕಾರಿಗಳು ಅಥವಾ ಸ್ಥಳೀಯ ಸಂಸ್ಥೆಗಳು ನವೀಕರಿಸುವಂತಿಲ್ಲ. ಇಂಥ ಪರವಾನಗಿಗಳನ್ನು 30 ದಿನಗಳ ಒಳಗಾಗಿ ಪರಿಶೀಲಿಸಿ, ಅಗತ್ಯ ಕ್ರಮ ತೆಗೆದುಕೊಳ್ಳಬೇಕು
- ಭಾರಿ ವಾಹನ ಅಥವಾ ವಾಣಿಜ್ಯ ವಾಹನಗಳು ಯಾವುದೇ ರಾಷ್ಟ್ರೀಯ ಹೆದ್ದಾರಿಗಳ ಪಕ್ಕದಲ್ಲಿ ನಿಲುಗಡೆ ಮಾಡುವಂತಿಲ್ಲ. ನಿಗದಿ ಮಾಡಿರುವ ನಿಲುಗಡೆ ಜಾಗದಲ್ಲಿಯೇ (ಲೇ ಬೇಗಳಲ್ಲಿ) ವಾಹನಗಳನ್ನು ನಿಲ್ಲಿಸಬೇಕು
- ಆಧುನಿಕ ಸಂಚಾರ ನಿರ್ವಹಣಾ ವ್ಯವಸ್ಥೆ (ಎಟಿಎಂಎಸ್) ಮೂಲಕ ರಾಜ್ಯ ಪೊಲೀಸರಿಗೆ ಎಲ್ಲ ಮಾಹಿತಿಗಳು ದೊರೆಯಬೇಕು. ಜಿಪಿಎಸ್, ಛಾಯಾಚಿತ್ರಗಳ ಸಾಕ್ಷ್ಯ ಮತ್ತು ಇ-ಚಲನ್ ವ್ಯವಸ್ಥೆ ಇರಬೇಕು
- ರಾಷ್ಟ್ರೀಯ ಹೆದ್ದಾರಿ ಹಾದು ಹೋಗುವ ಜಿಲ್ಲೆಗಳಲ್ಲಿ ನಮ್ಮ ಆದೇಶದ 15 ದಿನಗಳ ಒಳಗಾಗಿ ಆಯಾ ಜಿಲ್ಲಾಧಿಕಾರಿ ಹೆದ್ದಾರಿ ಸುರಕ್ಷತಾ ಕಾರ್ಯಪಡೆಯನ್ನು ರಚಿಸಬೇಕು. ಈ ಪಡೆಯಲ್ಲಿ ಜಿಲ್ಲಾಡಳಿತದ ಒಬ್ಬ ಅಧಿಕಾರಿ, ಪೊಲೀಸ್ ಅಧಿಕಾರಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಒಬ್ಬ ಅಧಿಕಾರಿ, ಲೋಕೋಪಯೋಗಿ ಇಲಾಖೆಯ ಅಧಿಕಾರಿ ಮತ್ತು ಸ್ಥಳೀಯ ಸಂಸ್ಥೆಗಳ ಒಬ್ಬ ಅಧಿಕಾರಿ ಇರಬೇಕು
- ಹೆದ್ದಾರಿಗಳಲ್ಲಿ ಅಕ್ರಮವಾಗಿ ವಾಹನ ನಿಲುಗಡೆ ಮಾಡುವ ಬಗ್ಗೆ ನಿಗಾ ಇರಿಸಲು ನಿರಂತರ ಗಸ್ತು ತಿರುಗುವ, ಕಣ್ಗಾವಲು ಇರಿಸುವ ವ್ಯವಸ್ಥೆ ಮಾಡಬೇಕು. ಹೆದ್ದಾರಿಗಳಲ್ಲಿ ಅಲ್ಲಲ್ಲಿ ಕ್ಯಾಮೆರಾ, ವೇಗ ಪತ್ತೆ ವ್ಯವಸ್ಥೆ, ತುರ್ತು ಪ್ರತಿಕ್ರಿಯೆ ವ್ಯವಸ್ಥೆ, ಟ್ರಕ್‌ಗಳ ನಿಲುಗಡೆಗಾಗಿ ಜಾಗ ನಿಗದಿ, ಅಪಘಾತ ಸಂಭವಿಸುವ ಬ್ಲಾಕ್‌ಸ್ಪಾಟ್ ಗುರುತಿಸುವಿಕೆ, ತುರ್ತು ಸಂದರ್ಭದಲ್ಲಿ ವಿವಿಧ ಸಂಸ್ಥೆಗಳ ಸಹಕಾರ, ರಸ್ತೆ ಸುರಕ್ಷತಾ ಸಮಿತಿಗಳ ರಚನೆ, ಅಪಘಾತಗಳ ವರದಿ ವ್ಯವಸ್ಥೆಗಳು ಇರಬೇಕು

ಅನುದಾನ ಕೊರತೆ ಅಥವಾ ಯಾವುದೇ ಆಡಳಿತಾತ್ಮಕ ಸಮಸ್ಯೆಗಳು ಜನರ ಜೀವಕ್ಕೆ ಕುತ್ತು ತರಬಾರದು. 60 ದಿನಗಳೊಳಗೆ ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು ಸಿದ್ಧಪಡಿಸಬೇಕು
ಸುಪ್ರೀಂಕೋರ್ಟ್ ನ್ಯಾಯಪೀಠ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 **editpage@prajavani.co.in**

ಅಭಿಮತ



ಸುಭಾಷಿತ

ಜ್ಞಾನದ ಬೆಳಕು ಹೊರಗಡೆಯಿಂದ ಹತ್ತಿಸಬಲ್ಲ ಲಾಟೀನಿನ ಬೆಳಕಲ್ಲ; ಅದು ಸ್ವಯಂಪ್ರಭೆ ಬೀರುವ ಮಿಂಚುಹುಳದ ಜೀವಕ್ರಿಯೆಯ ಫಲವಾದ ಬೆಳಕು.


-**ರವೀಂದ್ರನಾಥ ಟ್ಯಾಗೋರ್**

ಸಂಪಾದಕೀಯ

ವಿನಯ ಕುಲಕರ್ಣಿಗೆ ಜೀವಾವಧಿ ಶಿಕ್ಷೆ ಜನಪ್ರತಿನಿಧಿಗಳ ಕುಕೃತ್ಯಕ್ಕೆ ಪಾಠ

ಜಿಲ್ಲಾ ಪಂಚಾಯಿತಿಯ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣದಲ್ಲಿ ಧಾರವಾಡ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಸೇರಿದಂತೆ 16 ಜನರಿಗೆ ಜೀವಾವಧಿ ಹಾಗೂ ಇನ್ನೊಬ್ಬ ಅಪರಾಧಿಗೆ 7 ವರ್ಷಗಳ ಜೈಲು ಶಿಕ್ಷೆಯನ್ನು ನ್ಯಾಯಾಲಯ ವಿಧಿಸಿದೆ. ಚುನಾಯಿತ ಪ್ರತಿನಿಧಿಯೊಬ್ಬ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವುದು ರಾಜ್ಯದಲ್ಲಿ ತೀರಾ ಅಪರೂಪ. ಸಂಪತ್ತು ಹಾಗೂ ಅಧಿಕಾರದ ಮದದಿಂದ ಎದುರಾಳಿಯನ್ನು ನಿವಾರಿಸಿಕೊಳ್ಳಬಹುದೆಂಬ ಧಾರ್ಷ್ಟ್ಯದ ಜನಪ್ರತಿನಿಧಿಗಳಿಗೆ ಶಾಶ್ವತ ಪಾಠವಾಗುವ ತೀರ್ಪನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ನೀಡಿದ್ದಾರೆ. ಒಟ್ಟು 21 ಆರೋಪಿಗಳಲ್ಲಿ 17 ಜನರನ್ನು ಅಪರಾಧಿಗಳು ಎಂದು ನ್ಯಾಯಾಲಯ ತೀರ್ಪು ನೀಡಿದೆ. ವಿನಯ ಕುಲಕರ್ಣಿ ಹಾಗೂ ಆತನ ಮಾವ ಚಂದ್ರಶೇಖರ ಇಂಡಿ ಸೇರಿ 16 ಜನರಿಗೆ ಜೀವಾವಧಿ ಶಿಕ್ಷೆ ಹಾಗೂ ವಿಕಾಸ ಕಲಬುರಗಿಗೆ 7 ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ. ಸುಳ್ಳು ಹೇಳಿಕೆ ನೀಡಿದ ಆರೋಪದಡಿ ಪೊಲೀಸ್ ಅಧಿಕಾರಿಗಳೂ ಹಾಗೂ ಪ್ರಾಸಿಕ್ಯೂಷನ್ ಸಾಕ್ಷಿಗಳಾದ ಶಿವಾನಂದ ಚಲವಾದಿ, ಬಾಬು ಕಟಗಿ ಮತ್ತು ಶಂಕರಗೌಡ ಬಸನಗೌಡ ಪಾಟೀಲ ಸೇರಿದಂತೆ ಹಲವರ ವಿರುದ್ಧ ಪರ್ಜರಿ (ಸುಳ್ಳು ಸಾಕ್ಷ್ಯ ನೀಡುವಿಕೆ) ಕೇಸು ದಾಖಲಿಸುವಂತೆ ಆದೇಶಿಸಿದ್ದಾರೆ.

2016ರ ಜೂನ್ 15ರ ಬೆಳಗ್ಗೆ ಯೋಗೀಶ್‌ಗೌಡ ಅವರ ಭೀಕರ ಕೊಲೆ ನಡೆದಿತ್ತು. ಆರಂಭದಲ್ಲಿ ಇದನ್ನು ಜಮೀನಿನ ವ್ಯಾಜ್ಯಕ್ಕೆ ಸಂಬಂಧಿಸಿದ ಹತ್ಯೆ ಎಂದು ಭಾವಿಸಲಾಗಿತ್ತು. ಬಳಿಕ ರಾಜಕೀಯ ವೈಷಮ್ಯದ ಆಯಾಮ ಪ್ರಕರಣಕ್ಕೆ ಸೇರಿಕೊಂಡಿತು. ಪೊಲೀಸ್ ಇನ್‌ಸ್ಪೆಕ್ಟರ್ ಚನ್ನಕೇಶವ ಟಿಂಗರಿಕರ ತನಿಖೆಯನ್ನು ಸರಿಯಾಗಿ ನಡೆಸಿಲ್ಲ ಎಂಬ ಆಪಾದನೆಗಳು ಕೇಳಿಬಂದಿದ್ದವು. ಆರೋಪಿಗಳೊಂದಿಗೆ ರಾಜಿಸಂಧಾನ ಮಾಡಿಕೊಳ್ಳುವಂತೆ ಡಿವೈಎಸ್‌ಪಿಗಳಾಗಿದ್ದ ತುಳಜಪ್ಪ ಸುಲ್ಫಿ ಹಾಗೂ ಬಿ.ಕೆ. ಚಂದ್ರಶೇಖರ ಒತ್ತಡ ಹೇರಿದ್ದರು ಎಂದು ಯೋಗೀಶ್‌ಗೌಡ ಅವರ ಸೋದರ ಗುರುನಾಥಗೌಡ ಗೌಡರ್ ದೂರು ನೀಡಿದ್ದರು. ಏತನ್ಮಧ್ಯೆ, ವಿನಯ ಕುಲಕರ್ಣಿ ಕೊಲೆ ಪ್ರಕರಣದ ಸೂತ್ರಧಾರ ಎಂಬ ಆರೋಪವೂ ಬಂತು. 2019ರಲ್ಲಿ ಅಧಿಕಾರಕ್ಕೆ ಬಂದ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ, ತನಿಖೆಯನ್ನು ಸಿಬಿಐಗೆ ವಹಿಸಿತು. ಪ್ರಕರಣದ ಬೆನ್ನುಹತ್ತಿದ ಸಿಬಿಐ ಪೊಲೀಸರು ಸಾಕ್ಷ್ಯಗಳನ್ನು ಕಲೆಹಾಕಿದರು. ವಿನಯ ಕುಲಕರ್ಣಿ ಪಾತ್ರ ತನಿಖೆಯಲ್ಲಿ ಸಾಬೀತಾಯಿತು.



ಶಾಸಕ ವಿನಯ ಕುಲಕರ್ಣಿ ಅವರಿಗೆ ಆಗಿರುವ ಜೀವಾವಧಿ ಶಿಕ್ಷೆಯು, ಜನಹಿತದ ಬದಲು ಸಮಾಜಘಾತುಕ ಕೃತ್ಯಗಳಿಗೆ ಅಧಿಕಾರ ಬಳಸುವ ರಾಜಕಾರಣಿಗಳಿಗೆ ಎಚ್ಚರಿಕೆಯ ಪಾಠದಂತಿದೆ.

2020ರಲ್ಲಿ ವಿನಯ ಕುಲಕರ್ಣಿ ಅವರನ್ನು ಬಂಧಿಸಿದ ಸಿಬಿಐ, ವಿಚಾರಣೆ ನಡೆಸಿತು. 2021ರ ಫೆಬ್ರುವರಿಯಲ್ಲಿ ನ್ಯಾಯಾಲಯಕ್ಕೆ ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಸಿದ ಸಿಬಿಐ ವಿನಯ ಕುಲಕರ್ಣಿಯನ್ನು 15ನೇ ಆರೋಪಿಯಾಗಿಸಿತು.

ಕೊಲೆಯಾದ ಯೋಗೀಶ್‌ಗೌಡ ಕೂಡ ಅಪರಾಧ ಕೃತ್ಯಗಳಲ್ಲಿ ಆರೋಪಿಯಾಗಿದ್ದರು. ಕೊಲೆ ಸೇರಿದಂತೆ ಇಪ್ಪತ್ತೈದು ಪ್ರಕರಣಗಳು ಅವರ ಮೇಲೆ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದವು. ಯೋಗೀಶ್‌ಗೌಡ ಹಾಗೂ ವಿನಯ ಕುಲಕರ್ಣಿ ಅವರ ನಡುವಿನ ತಿಕ್ಕಾಟಕ್ಕೆ ರಾಜಕಾರಣದ ಜೊತೆಗೆ ವೈಯಕ್ತಿಕ ಸಂಘರ್ಷದ ಸ್ವರೂಪವೂ ಇತ್ತು. ಅಪರಾಧ ಜಗತ್ತಿನೊಂದಿಗೆ ರಾಜಕಾರಣಿಗಳು ಹೊಂದಿರುವ ಸಖ್ಯಕ್ಕೆ ಕೊಲೆ ಆಗಿರುವ ಹಾಗೂ ಕೊಲೆ ಮಾಡಿಸಿರುವ ಇಬ್ಬರೂ ಉದಾಹರಣೆಗಳೇ. ಈ ಪ್ರಕರಣವನ್ನು, ರಾಜಕಾರಣದಿಂದ ನಶಿಸಿಹೋಗುತ್ತಿರುವ ನೈತಿಕತೆ ಹಾಗೂ ಮೌಲ್ಯವ್ಯವಸ್ಥೆಯ ಸಂಕೇತವಾಗಿಯೂ ನೋಡಬಹುದಾಗಿದೆ. ಯೋಗೀಶ್‌ಗೌಡ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯ ಪ್ರಕ್ರಿಯೆಯ ಒಂದು ಅಧ್ಯಾಯ ಮುಕ್ತಾಯವಾಗಿದ್ದು, ಅಪರಾಧಿಗಳು ಜೈಲು ಸೇರಿದ್ದಾರೆ. ತನಿಖೆ ನ್ಯಾಯಯುತವಾಗಿದ್ದರೆ ಎಷ್ಟೇ ಪ್ರಭಾವಿಗಳಾದರೂ ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳಲಾಗದು ಎಂಬುದನ್ನು ತೀರ್ಪು ಸಾಬೀತುಪಡಿಸಿದೆ. ಜನಪ್ರತಿನಿಧಿಗಳು ನಡೆ ನುಡಿಯಲ್ಲಿ ಜನರಿಗೆ ಮಾದರಿಯಾಗಿರಬೇಕೆಂಬ ಅಪೇಕ್ಷೆ ಮರೆಯಾಗಿ ಬಹುಕಾಲವಾಗಿದೆ. ಶಾಸನಸಭೆಗೆ ಆಯ್ಕೆಯಾಗುವವರು ಶಾಸನ ರಚನೆಯ ಮೂಲಕ ನಾಡಿನ ಪುರೋಭಿವೃದ್ಧಿಗೆ ಶ್ರಮಿಸಬೇಕು ಎಂಬುದು ಯುಟೋಪಿಯಾ (ಕಲ್ಪನೆಯ ಕಲ್ಯಾಣ ರಾಜ್ಯ) ಎನ್ನುವಂತಾಗಿದೆ. ಶಾಸಕರು, ಸಂಸದರಾದವರು ಅತ್ಯಾಚಾರ, ಕೊಲೆಯಂತಹ ಹೀನಪಾತಕಗಳಲ್ಲಿ ಭಾಗಿಯಾಗುತ್ತಿರುವುದು ಹೆಚ್ಚುತ್ತಿರುವುದಕ್ಕೆ ಇತ್ತೀಚಿನ ದಿನಗಳಲ್ಲಿ ಕರ್ನಾಟಕದಲ್ಲಿ ನಡೆದ ಪ್ರಕರಣಗಳು ಸಾಕ್ಷಿಯಾಗಿವೆ. ಜನಪ್ರತಿನಿಧಿಗಳು ತಮ್ಮ ಎದುರಾಳಿಗಳನ್ನು ಜನ ಕಲ್ಯಾಣ ಹಾಗೂ ರಾಜಕೀಯವಾಗಿ ಎದುರಿಸಿ ಗೆಲ್ಲಬೇಕೇ ಹೊರತು, ಕೊಂದು ಮುಗಿಸುವ ದಾರಿ ಹಿಡಿಯುವ ಕ್ರೌರ್ಯ ಅನ್ಯಾಯದ ಪರಮಾವಧಿ. ಜನಪ್ರತಿನಿಧಿಗಳ ಕೈಗಳು ಜನರ ಕಣ್ಣೀರು ಒರೆಸಲು ಬಳಕೆಯಾಗಬೇಕೇ ಹೊರತು, ರಕ್ತ ಹರಿಸುವಂತೆ ಆಗಬಾರದು. ಅಂತಹ ದುಷ್ಕೃತ್ಯ ಎಸಗುವವರು, ಪ್ರಚೋದನೆ ನೀಡುವವರು ಯಾರೇ ಆದರೂ ಶಿಕ್ಷಾರ್ಹರು ಎಂಬುದನ್ನು ನ್ಯಾಯಾಲಯ ತನ್ನ ಆದೇಶದ ಮುಖೇನ ಸ್ಪಷ್ಟಪಡಿಸಿದೆ. ಇಂತಹ ದುರುಳರು ಯಾವ ಪಕ್ಷದವರೇ ಆಗಿದ್ದರೂ ಅವರಿಗೆ ವಿನಾಯಿತಿ ಕೊಡದೇ ಕಾನೂನಿನಡಿ ತಂದು ಶಿಕ್ಷಿಸುವ ಸ್ವಾಯತ್ತ ಅಧಿಕಾರವನ್ನು ಸರ್ಕಾರ ಪೊಲೀಸರಿಗೆ ನೀಡಬೇಕು. ಎರಡು ವರ್ಷಕ್ಕಿಂತ ಹೆಚ್ಚಿನ ಶಿಕ್ಷೆಗೆ ಗುರಿಯಾದರೆ ಶಾಸಕತ್ವ ಅನರ್ಹಗೊಳ್ಳುತ್ತದೆ ಎಂಬ ನಿಯಮದಡಿ ವಿನಯ ಕುಲಕರ್ಣಿಯನ್ನು ತಕ್ಷಣವೇ ಅನರ್ಹಗೊಳಿಸಬೇಕು.

ಯುವಶಕ್ತಿ ಸಮೃದ್ಧ! ಫಲ ಅಪೂರ್ಣ?



ವಿಶ್ಲೇಷಣೆ

ವೇಣುಗೋಪಾಲ್ ಟಿ. ಎಸ್

ಸಮೃದ್ಧ ಯುವಶಕ್ತಿ ಭಾರತದ ಅಭಿವೃದ್ಧಿಗೆ ಬಳಕೆಯಾಗುತ್ತಿದೆಯೆ? ಯುವಜನರ ಸಬಲೀಕರಣಕ್ಕೆ ಅಗತ್ಯವಾದ ಗುಣಮಟ್ಟದ ಶಿಕ್ಷಣ ಹಾಗೂ ಉತ್ತಮ ಸಂಬಳದ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಆರ್ಥಿಕತೆ ನಮ್ಮಲ್ಲಿದೆಯೆ? ಈ ಪ್ರಶ್ನೆಗಳಿಗೆ ದೊರೆಯುವ ಉತ್ತರವೇ ಯುವಶಕ್ತಿ ನಮ್ಮಲ್ಲಿ ಹೇಗೆ ಬಳಕೆಯಾಗುತ್ತಿದೆ ಎನ್ನುವುದನ್ನು ಹೇಳುವಂತಿದೆ.

ಭಾರತ ಜಗತ್ತಿನಲ್ಲೇ ಹೆಚ್ಚು ಯುವಜನರಿರುವ ದೇಶ. ಜಗತ್ತಿನ ಪ್ರತಿ ಐವರು ಯುವಜನರಲ್ಲಿ ಒಬ್ಬರು ಭಾರತೀಯರಾಗಿರುತ್ತಾರೆ. ಸಂತಸದ ವಿಷಯವೆಂದರೆ, ನಮ್ಮಲ್ಲಿ ಶೇ 70ರಷ್ಟು ದುಡಿಯುವ ವಯಸ್ಸಿನವರು. ಮಕ್ಕಳು, ವೃದ್ಧರು ಮೊದಲಾದ ಅವಲಂಬಿತರಿಗೆ ಹೋಲಿಸಿದರೆ ದುಡಿಯುವ ಸಾಮರ್ಥ್ಯ ಇರುವವರು ಹೆಚ್ಚಿಗೆ ಇದ್ದಾರೆ. ಇದು ದೇಶದ ಅರ್ಥಿಕತೆಗೆ ದೊಡ್ಡ ಲಾಭ. ಅದೇ ಕಾರಣಕ್ಕೆ ಅದನ್ನು 'ಡೆಮೊಗ್ರಫಿಕ್ ಡಿವಿಡೆಂಡ್' (ಜನಸಂಖ್ಯಾ ಲಾಭಾಂಶ) ಎಂದು ಕರೆಯುತ್ತಾರೆ. ಆದರೆ, ನಿಜವಾಗಿ ಈ ಯುವಶಕ್ತಿಯಿಂದ ದೇಶಕ್ಕೆ ಲಾಭವಾಗಬೇಕಾದರೆ ಆ ಶಕ್ತಿಯನ್ನು ದೇಶದ ಪ್ರಗತಿಗೆ ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದಕ್ಕೆ ಸಾಧ್ಯವಾಗಬೇಕು. ಅದು ದೇಶದ ಯುವಕರಿಗೆ ಎಂತಹ ಶಿಕ್ಷಣ, ಕೌಶಲ ಮತ್ತು ಉದ್ಯೋಗಾವಕಾಶಗಳು ಸಿಗುತ್ತವೆ ಎನ್ನುವುದನ್ನು ಅವಲಂಬಿಸಿರುತ್ತದೆ. ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಪ್ರಕಟಿಸಿರುವ ಈ ವರ್ಷದ 'ಸ್ಟೇಟ್ ಆಫ್ ವರ್ಕಿಂಗ್ ಇಂಡಿಯಾ-2026' ವರದಿಯು ನಮ್ಮ ಯುವಜನರ ಶಿಕ್ಷಣದಿಂದ ಪ್ರಾರಂಭಿಸಿ, ಅವರ ಉದ್ಯೋಗದ ಹುಡುಕಾಟ, ಕೊನೆಗೆ ಕೆಲಸಕ್ಕೆ ಸೇರುವವರೆಗಿನ ಪಯಣದ ನಾಲ್ಕು ದಶಕಗಳ ಚಿತ್ರವನ್ನು ಕಟ್ಟಿಕೊಟ್ಟಿದೆ.

ಕಳೆದ ನಾಲ್ಕು ದಶಕಗಳಲ್ಲಿ ಭಾರತದ ಜನಸಂಖ್ಯೆ ದುಪ್ಪಟ್ಟಾಗಿ, ಈಗ 150 ಕೋಟಿಯಾಗಿದೆ. 15ರಿಂದ 29ರ ವಯೋಮಾನದ ಯುವಜನರ ಸಂಖ್ಯೆ 37 ಕೋಟಿ ದಾಟಿದೆ. ಅವರಲ್ಲಿ ಓದುತ್ತಿರುವವರನ್ನು ಬಿಟ್ಟರೆ, ಉಳಿದ 26 ಕೋಟಿ ಯುವಜನರು ಉದ್ಯೋಗ ಮಾಡಲು ತಯಾರಿದ್ದಾರೆ. ಇವರೇ ನಮ್ಮ ದೇಶದ ನಿಜವಾದ ಶಕ್ತಿ. ಆದರೆ, ಪರಿಸ್ಥಿತಿ ಹೀಗೆಯೇ ಇರುವುದಿಲ್ಲ. ಗರಿಷ್ಠ ಮಟ್ಟದಲ್ಲಿರುವ ಯುವಜನರ ಸಂಖ್ಯೆ ಇಳಿಯುತ್ತದೆ. ಈಗಾಗಲೇ, ಇಳಿಮುಖ ವಾಗುವುದಕ್ಕೆ ಪ್ರಾರಂಭವಾಗಿದೆ. ಕರ್ನಾಟಕದಂತಹ ರಾಜ್ಯಗಳಲ್ಲಿ ಅದು ಗಣನೀಯವಾಗಿ ಇಳಿದಿದೆ. 2036ರ ವೇಳೆಗೆ ಯುವಜನರ ಸಂಖ್ಯೆ 24.50 ಕೋಟಿಗೆ ಇಳಿಯುವ ನಿರೀಕ್ಷೆಯಿದೆ.

ನಮ್ಮದು ಜಗತ್ತಿನಲ್ಲೇ ಬಹುದೊಡ್ಡ ಶಿಕ್ಷಣ ವ್ಯವಸ್ಥೆಯಾಗಿದೆ. ಬೇಸರದ ಸಂಗತಿಯೆಂದರೆ, ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ಮತ್ತು ಸಾಮಾಜಿಕ ಅಸಮಾನತೆ ನಮ್ಮಲ್ಲಿನ್ನೂ ತೀವ್ರವಾಗಿಯೇ ಇದೆ. ಉನ್ನತ ಶಿಕ್ಷಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಯುವಕರ ದಾಖಲಾತಿಯ ದರ ರಾಷ್ಟ್ರೀಯ ಸರಾಸರಿಗಿಂತ ಬಹಳ ಕಡಿಮೆಯಿದೆ.

ಅದಕ್ಕೆ ಹಲವು ಕಾರಣಗಳಿವೆ. ನಮ್ಮಲ್ಲಿನ ಒಟ್ಟಾರೆ ಕಾಲೇಜುಗಳಲ್ಲಿ ಶೇ 60ಕ್ಕೂ ಹೆಚ್ಚಿನವು ಖಾಸಗಿ ಕಾಲೇಜುಗಳು. ಅಲ್ಲಿ ಶಿಕ್ಷಣ ತುಂಬಾ ದುಬಾರಿ. ಎಂಜಿನಿಯರಿಂಗ್, ವೈದ್ಯಕೀಯ ಪದವಿಗಳ ಓದಿನ ವೆಚ್ಚ ಬಡ ಕುಟುಂಬಗಳ ವಾರ್ಷಿಕ ಸರಾಸರಿ ಖರ್ಚಿಗಿಂತಲೂ ಹೆಚ್ಚಾಗಿರುತ್ತದೆ. ವಿದ್ಯಾರ್ಥಿಗಳು ತಮ್ಮ ಆಸಕ್ತಿಗಿಂತ ಹೆಚ್ಚಾಗಿ ಕುಟುಂಬದ ಹಣಕಾಸಿನ ಸ್ಥಿತಿ ನೋಡಿಕೊಂಡು ಓದಬೇಕಾಗುತ್ತದೆ. ಪರಿಶಿಷ್ಟ ಜಾತಿ ಹಾಗೂ ಪಂಗಡದ ಹೆಚ್ಚಿನ ವಿದ್ಯಾರ್ಥಿಗಳಿಗೆ ವೃತ್ತಿಪರ ಶಿಕ್ಷಣ ಸಾಧ್ಯವಾಗುವುದಿಲ್ಲ. ಅವರು ಹೆಚ್ಚಾಗಿ ಮಾನವಿಕ ವಿಜ್ಞಾನದ ಕೋರ್ಸ್‌ಗಳನ್ನೇ ಆರಿಸಿಕೊಳ್ಳುತ್ತಿದ್ದಾರೆ. ಯುವಜನರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ ಅವರ ಭವಿಷ್ಯವನ್ನು ನಿರ್ಧರಿಸುತ್ತಿದೆ. ಕಳೆದ ದಶಕದಲ್ಲಿ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಿಸಿದೆ ಎನ್ನುವುದು ನಿಜ. ಆದರೆ, ತಾರತಮ್ಯ ಇನ್ನೂ ಉಳಿದೇ ಇದೆ.

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ವರದಿ ಗಮನಿಸಿರುವ ಇನ್ನೊಂದು ಮುಖ್ಯ ಸಂಗತಿಯೆಂದರೆ, 2017ರ ನಂತರದ ದಿನಗಳಲ್ಲಿ ಓದನ್ನು ಮಧ್ಯದಲ್ಲೇ ನಿಲ್ಲಿಸಿ ಕೆಲಸ ಮಾಡಲು ಮುಂದಾಗುವ ಯುವಕರ ಸಂಖ್ಯೆ ಹೆಚ್ಚುತ್ತಿದೆ. ಉನ್ನತ ಶಿಕ್ಷಣಕ್ಕೆ ದಾಖಲಾಗುತ್ತಿರುವವರ ಸಂಖ್ಯೆ ಕಡಿಮೆಯಾಗುತ್ತಿದೆ. ವರದಿ ಹೇಳುವಂತೆ, ಕುಟುಂಬವನ್ನು ಆರ್ಥಿಕವಾಗಿ ಬೆಂಬಲಿಸಬೇಕಾದ ಅನಿವಾರ್ಯತೆಯಿಂದ ಯುವಕರು ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸುತ್ತಿದ್ದಾರೆ. ಹೀಗೆ ಓದನ್ನು ಅರ್ಧಕ್ಕೆ ನಿಲ್ಲಿಸಿ ಕೆಲಸ ಹಿಡಿಯುತ್ತಿರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ; ಕಳೆದ ದಶಕದಲ್ಲಿ ಅದು ಶೇ 14ರಷ್ಟು ಹೆಚ್ಚಾಗಿದೆ. ಹೆಣ್ಣುಮಕ್ಕಳ ದಾಖಲಾತಿ ಸಂಖ್ಯೆಯಲ್ಲಿ ಅಂತಹ ವ್ಯತ್ಯಾಸವಾಗಿಲ್ಲ. ಆದರೆ, ಹೆಣ್ಣುಮಕ್ಕಳಲ್ಲೂ ಕುಟುಂಬದ ಆರ್ಥಿಕ ಪರಿಸ್ಥಿತಿಯಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ಕೆಲಸಕ್ಕೆ ಸೇರುತ್ತಿದ್ದಾರೆ.

ಕಳೆದ ಎರಡು ದಶಕಗಳಲ್ಲಿ ಪ್ರತಿ ವರ್ಷ ಸುಮಾರು 50 ಲಕ್ಷ ಯುವಜನರು ಪದವಿ ಮುಗಿಸಿ ಹೊರಬರುತ್ತಿದ್ದಾರೆ. ಆದರೆ, ಅವರಲ್ಲಿ ಶೇ 40 ರಷ್ಟು ಜನಕ್ಕೆ ಕೆಲಸ ಸಿಗುತ್ತಿಲ್ಲ. ಈಗ ಕೆಲಸವಿಲ್ಲದ ಪದವೀಧರರ ಸಂಖ್ಯೆ ಕೋಟಿ ದಾಟಿದೆ. ನಮ್ಮಲ್ಲಿ ಪದವೀಧರರು ಹೆಚ್ಚಾಗಿಬಿಟ್ಟರು ಎನ್ನುವುದು ಉದ್ಯೋಗ ಸಿಗದಿರುವುದಕ್ಕೆ ಕಾರಣವಲ್ಲ. ನಮ್ಮಷ್ಟೇ ಆದಾಯವಿರುವ ಬೇರೆ ದೇಶಗಳಿಗೆ ಹೋಲಿಸಿದರೆ ಅಲ್ಲಿಯೂ ಉನ್ನತ ಶಿಕ್ಷಣದ ದಾಖಲಾತಿ ದರ ಭಾರತದಷ್ಟೇ ಇದೆ. ನಾವು ಗುಣಮಟ್ಟದ ಉದ್ಯೋಗವನ್ನು ಸೃಷ್ಟಿಸುವಲ್ಲಿ ವಿಫಲರಾಗಿದ್ದೇವೆ ಅನ್ನುವುದು ವಾಸ್ತವ. ಆದರಲ್ಲೂ ಪ್ರತಿ ತಿಂಗಳು ಸೂಕ್ತ ಸಂಬಳ ಸಿಗುವ ಗುಣಮಟ್ಟದ ಕೆಲಸ ದೊರಕುತ್ತಿರುವುದು ವರ್ಷಕ್ಕೆ ಕೇವಲ 17 ಲಕ್ಷ ಮಂದಿಗೆ ಮಾತ್ರ. ಅಂದರೆ, ಶಿಕ್ಷಣದ ಮೂಲಕ ನಮ್ಮ ಯುವಜನರ ಬದುಕಿನಲ್ಲಿ ಸುಧಾರಣೆಯನ್ನು ಸಾಧಿಸುವುದಕ್ಕೆ ನಮಗೆ ಸಾಧ್ಯವಾಗುತ್ತಿಲ್ಲ. ಬದಲಿಗೆ ಕುಟುಂಬದ ಆರ್ಥಿಕ ಸಂಕಷ್ಟ ನೀಗಿಕೊಳ್ಳುವುದಕ್ಕೆ ಯುವಜನರು ಓದನ್ನು ಮಧ್ಯದಲ್ಲೇ ಬಿಟ್ಟು ಅನಿವಾರ್ಯವಾಗಿ ಉದ್ಯೋಗ ಹುಡುಕಬೇಕಾದ ಸಂದರ್ಭಗಳು ಹೆಚ್ಚಾಗುತ್ತಿವೆ.

ನಮ್ಮ ಆರ್ಥಿಕತೆ ಗುಣಮಟ್ಟದ ಉದ್ಯೋಗಗಳನ್ನು ಸೃಷ್ಟಿಸುವಲ್ಲಿ ವಿಫಲವಾಗಿ ರುವುದರಿಂದ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಕೃಷಿಯನ್ನು ಅವಲಂಬಿಸುತ್ತಿದ್ದಾರೆ. ಕೃಷಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಕಳೆದ ಐದು ವರ್ಷಗಳಲ್ಲಿ ಸೃಷ್ಟಿಯಾದ ಹೊಸ ಕೆಲಸಗಳಲ್ಲಿ ಅರ್ಧದಷ್ಟು ಸೃಷ್ಟಿಯಾಗಿರುವುದು ಕೃಷಿಯಲ್ಲಿ. ಹೀಗೆ ಕೃಷಿಯಲ್ಲಿ ಉದ್ಯೋಗ ಕಂಡುಕೊಂಡವರಲ್ಲಿ ಸಿಂಹಪಾಲು ಮಹಿಳೆಯರದು.

ಕೃಷಿಯೇತರ ಕ್ಷೇತ್ರಗಳಲ್ಲಿನ ಹೆಚ್ಚಿನ ಮಹಿಳೆಯರು ಸ್ವಯಂ ಉದ್ಯೋಗದಲ್ಲಿ ತೊಡಗಿಕೊಂಡಿದ್ದಾರೆ. ಸ್ವಯಂ ಉದ್ಯೋಗದಲ್ಲಿ ತೊಡಗಿಕೊಂಡ ಮಹಿಳೆಯರ ಸಂಖ್ಯೆ ಕಳೆದ ದಶಕದಲ್ಲಿ ನಾಲ್ಕು ಪಟ್ಟು ಹೆಚ್ಚಾಗಿದೆ. ಸ್ವಯಂ ಉದ್ಯೋಗ ಬಿಟ್ಟರೆ ಮಹಿಳೆಯರು ಹೆಚ್ಚಾಗಿ ಉತ್ಪಾದನಾ ವಲಯ, ಐಟಿ, ಆರೋಗ್ಯ ಹಾಗೂ ಶಿಕ್ಷಣದಂತಹ ಸೇವಾ ವಲಯಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಆದರೆ, ಯುವಕರ ಉದ್ಯೋಗದ ಮಾದರಿಯಲ್ಲಿ ಹೆಚ್ಚಿನ ಬದಲಾವಣೆಯಾಗಿಲ್ಲ. ಅವರು ಇಂದಿಗೂ ವ್ಯಾಪಾರ, ಸಾರಿಗೆ ಮತ್ತು ಕಟ್ಟಡ ನಿರ್ಮಾಣದಂತಹ ವಲಯಗಳಲ್ಲೇ ಹೆಚ್ಚಾಗಿ ಕೆಲಸ ಮಾಡುತ್ತಿದ್ದಾರೆ.

ಕಳೆದ ದಶಕಗಳವರೆಗೆ ಏರುತ್ತಿದ್ದ ಪದವೀಧರರ ವರಮಾನ, ಅದರಲ್ಲೂ ಯುವಕರ ವರಮಾನ, ಇತ್ತೀಚೆಗೆ ಇಳಿಯಲು ಪ್ರಾರಂಭವಾಗಿದೆ. ಆದರೆ, ಯುವತಿಯರ ನೈಜ ವರಮಾನದಲ್ಲಿ ಸ್ವಲ್ಪಮಟ್ಟಿನ ಏರಿಕೆಯಾಗಿದೆ. ಯುವಕರ ವರಮಾನದಲ್ಲಿ ಇಳಿತ, ಯುವತಿಯರ ವರಮಾನದ ಏರಿಕೆ, ಇದು ವೇತನಕ್ಕೆ ಸಂಬಂಧಿಸಿದಂತೆ ಲಿಂಗ ತಾರತಮ್ಯ ಕಡಿಮೆ ಆಗುತ್ತಿರುವುದನ್ನು ಸೂಚಿಸುತ್ತಿದೆ.

ಇನ್ನೊಂದು ಸ್ವಾಗತಾರ್ಹ ಬೆಳವಣಿಗೆಯೆಂದರೆ, ಇತ್ತೀಚಿನ ದಿನಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯುವಕರು ತಮ್ಮ ಜಾತಿಗೆ ಸಾಂಪ್ರದಾಯಿಕವಾಗಿ ಅಂಟಿಕೊಂಡಿದ್ದ ಚರ್ಮದ ಉದ್ಯೋಗ, ತ್ಯಾಜ್ಯ ನಿರ್ವಹಣೆ, ಗಣಿಗಾರಿಕೆ ಇತ್ಯಾದಿ ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳುವುದು ಕಡಿಮೆಯಾಗುತ್ತಿದೆ. ಮಹಿಳೆಯರೂ 'ಆಧುನಿಕ' ಉದ್ಯೋಗ ವಲಯಗಳಲ್ಲಿ ಗಣನೀಯ ಸಂಖ್ಯೆಯಲ್ಲಿ ತೊಡಗಿಕೊಳ್ಳುತ್ತಿದ್ದಾರೆ. ಇದು ಜಾತಿಯಾಧಾರಿತ ಹಾಗೂ ಲಿಂಗಾಧಾರಿತ ವೃತ್ತಿ ವಿಭಜನೆ ಅಥವಾ ಪ್ರತ್ಯೇಕತೆ ಸಡಿಲಗೊಳ್ಳುತ್ತಿರುವುದನ್ನು ಸೂಚಿಸುತ್ತದೆ.

ಅಭಿವೃದ್ಧಿಯಲ್ಲಿನ ಪ್ರಾದೇಶಿಕ ಅಸಮಾನತೆಯಿಂದಾಗಿ ಯುವಜನರು ಹೆಚ್ಚಾಗಿರುವ ಕಡೆ ಉದ್ಯೋಗದ ಅವಕಾಶಗಳು ಕಡಿಮೆಯಿವೆ. ಅವಕಾಶಗಳು ಇರುವ ಕಡೆ ಯುವಜನರ ಸಂಖ್ಯೆ ಕಡಿಮೆಯಿದೆ. ಹಾಗಾಗಿ, ಯುವಜನರು ಕೆಲಸ ಹುಡುಕಿಕೊಂಡು ಉದ್ಯೋಗ ಇರುವ ಕಡೆಗೆ, ಅಂದರೆ ಆರ್ಥಿಕವಾಗಿ ಮುಂದುವರಿದ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದಾರೆ. ಆರ್ಥಿಕವಾಗಿ ಮುಂದುವರಿದ ರಾಜ್ಯಗಳು ತಮ್ಮ ಕೆಲಸದ ಅಗತ್ಯಗಳಿಗಾಗಿ ಈ ವಲಸಿಗ ಯುವಜನರನ್ನೇ ಹೆಚ್ಚು ಅವಲಂಬಿಸುತ್ತಿವೆ. ವಲಸೆ ಎನ್ನುವುದು ರಾಜ್ಯಗಳ ನಡುವೆ ಉದ್ಯೋಗದಲ್ಲಿನ ಏರುಪೇರನ್ನು ತಹಬಂದಿಗೆ ತರುವ ಸಹಜ ಪ್ರಕ್ರಿಯೆಯಾಗಿದೆ.

'ಯುವಶಕ್ತಿ'ಯ ಸುವರ್ಣಾವಕಾಶ ಕೈಜಾರುವ ಮೊದಲು ಪರಿಸ್ಥಿತಿಯ ಲಾಭ ಪಡೆದುಕೊಳ್ಳಬೇಕು. ನಮ್ಮಲ್ಲಿರುವ ಯುವಶಕ್ತಿಯ ಲಾಭ ಪಡೆಯುವುದು ಸಾಧ್ಯವಾಗಬೇಕಾದರೆ, ಕಲಿಕೆಯಿಂದ ಗಳಿಕೆಯವರೆಗಿನ ಯುವಜನರ ಪಯಣ ಸುಗಮವಾಗಿರಬೇಕು. ಶಿಕ್ಷಣದಿಂದ ಸಾಮರ್ಥ್ಯ ಹೆಚ್ಚುತ್ತದೆ. ಆದರೆ, ಆ ಸಾಮರ್ಥ್ಯ ಬಳಕೆಯಾಗಬೇಕಾದರೆ ಆರ್ಥಿಕತೆಗೆ ಗುಣಮಟ್ಟದ ಕೆಲಸಗಳನ್ನು ಸೃಷ್ಟಿಸುವುದಕ್ಕೆ ಸಾಧ್ಯವಾಗಬೇಕು. ಆಗ ಮಾತ್ರ ಹೇರಳವಾಗಿರುವ ಯುವಶಕ್ತಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು. ಇದು ಸಾಧ್ಯವಾಗಬೇಕಾದರೆ ಜನಸಂಖ್ಯೆಯ ಒತ್ತಡ, ರಾಜ್ಯಗಳ ನಡುವಿನ ಅಂತರ, ಸಾಮಾಜಿಕ ಮತ್ತು ಲಿಂಗಾಧಾರಿತ ತಾರತಮ್ಯಗಳು, ಅಸಂಘಟಿತ ಕೆಲಸಗಳ ಸಮಸ್ಯೆ, ಇವೆಲ್ಲವನ್ನು ಸರ್ಕಾರ ಅರ್ಥ ಮಾಡಿಕೊಂಡು ಒಟ್ಟಾಗಿ ನಿಭಾಯಿಸುವುದಕ್ಕೆ ಬೇಕಾದ ಸಮಗ್ರಹಾದಿಯೊಂದನ್ನು ಜರೂರಾಗಿ ರೂಪಿಸಿಕೊಳ್ಳಬೇಕು.



ವಾಚಕರ ವಾಣಿ

ನಂಬಿಕೆಯ ಹೆಸರಿನಡಿ ಮೌಢ್ಯದ ಬಿತ್ತನೆ

'ದಾರಿ ಯಾವುದಯ್ಯ ಶಬರಿಮಲೆಗೆ?' ಲೇಖನ (ಲೇ. ಚಂದ್ರಶೇಖರ್ ಐಜೂರ್, ಪ್ರ.ವಾ., ಏ. 17) ಸಕಾಲಿಕವಾಗಿದೆ. ಕೇಂದ್ರ ಸರ್ಕಾರವು 'ಭವ್ಯ ಭಾರತದ ನಿರ್ಮಾಣ'ದಲ್ಲಿ ಹೆಚ್ಚಿನ ಮಹಿಳೆಯರು ಪಾಲ್ಗೊಳ್ಳುವುದನ್ನು ಖಾತರಿಪಡಿಸುವ ಸಂವಿಧಾನ ತಿದ್ದುಪಡಿ ಮಸೂದೆಯ ಜಾರಿಗಾಗಿ ವಿಶೇಷ ಅಧಿವೇಶನ ಕರೆದಿತ್ತು. ಈ ಮಸೂದೆಗೆ ಸೋಲಾಗಿದೆ. ಮತ್ತೊಂದೆಡೆ ಅಯ್ಯಪ್ಪಸ್ವಾಮಿ ದೇವಾಲಯ ಪ್ರವೇಶಿಸುವ ಮಹಿಳೆಯರ ಹಕ್ಕಿನ ಪರವಾಗಿ ಸುಪ್ರೀಂ ಕೋರ್ಟಿನ ಪಂಚ ಸದಸ್ಯರ ಪೀಠ ನೀಡಿರುವ ತೀರ್ಪನ್ನು ಸರ್ಕಾರ ಕಡೆಗಣಿಸುತ್ತಿದೆ. ಈ ಧೋರಣೆಯು ಮಹಿಳೆಯರ ಹಕ್ಕಿನ ಬಗ್ಗೆ ಕೇಂದ್ರಕ್ಕಿರುವ ದ್ವಂದ್ವ ನೀತಿಯನ್ನು ಸಾರಿ ಹೇಳುವಂತಿದೆ. ವೈಜ್ಞಾನಿಕ ಮನೋಭಾವ, ವೈಚಾರಿಕ ಪ್ರಜ್ಞೆ ಮೂಲಕ ಮನುಜಕುಲವನ್ನು ಮುನ್ನಡೆಸಬೇಕಾದ ಈ ಕಾಲಘಟ್ಟದಲ್ಲಿ 'ನಂಬಿಕೆ' ಹೆಸರಿನಲ್ಲಿ ಜನಮಾನಸದಲ್ಲಿ ಮೌಢ್ಯ ಬಿತ್ತುವುದರ ಹಿಂದೆ ಅಡಗಿರುವ ರಹಸ್ಯವಾದರೂ ಏನು?

ಪ್ರೊ. ಕೆ.ಎಸ್. ಈಶ್ವರಪ್ಪ, ದಾವಣಗೆರೆ

ಮನೆಗಳಿಗೆ ನಲ್ಲಿ ಬಂತು; ನೀರು ಬರುವುದೆ?

'ಜಲ ಜೀವನ್ ಮಿಷನ್' ಯೋಜನೆಯ ಮೂಲಕ 2024ರ ವೇಳೆಗೆ ದೇಶದ ಪ್ರತಿ ಮನೆಗೆ ಕೊಳವೆಗಳ ಮುಖಾಂತರ ನೀರು ಪೂರೈಸುವ ಗುರಿ ಹೊಂದಲಾಗಿತ್ತು. ಕೇಂದ್ರ ಸರ್ಕಾರದ ಈ ಯೋಜನೆ ಪೂರ್ಣಗೊಂಡಿಲ್ಲ. ಹಾಗಾಗಿಯೇ, 2028 ರವರೆಗೂ ವಿಸ್ತರಿಸಲಾಗಿದೆ. ಹಳ್ಳಿಗಳ ಪ್ರತಿ ಮನೆಗೂ ಕೊಳವೆ ಜೋಡಣೆಯಾಗಿ ವರ್ಷಗಳೇ ಕಳೆದಿವೆ. ಆದರೂ, ನೀರು ಬರುತ್ತಿಲ್ಲ. ಯೋಜನೆಯ ಅನುಷ್ಠಾನದಲ್ಲಿ ರಾಜ್ಯ ಸರ್ಕಾರದ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿದರೆ ರಾಜ್ಯಕ್ಕೆ ನಿಗದಿಯಾದ ಅನುದಾನ ಲಭಿಸಲಿದೆ. ಇಲ್ಲದಿದ್ದರೆ ಗಂಗೆಗೆ ಗ್ರಹಣ ಹಿಡಿಯುವುದು ನಿಶ್ಚಿತ.

ಸತೀಶ ಉಪ್ಪಾರ, ಅಥಣಿ

ಅಂಕ ಗಳಿಕೆ ಮತ್ತು ವಾಸ್ತವಿಕ ಜಗತ್ತು

ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಅತಿಹೆಚ್ಚು ಅಂಕಗಳಿಸುವುದೇ ಯಶಸ್ಸಿನ ಮಾನದಂಡವಾಗಿದೆ. ಅದರಲ್ಲೂ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದರೆ ಗೌರವ ಹೆಚ್ಚೆಂಬ ಭಾವನೆ ವಿದ್ಯಾರ್ಥಿಗಳಲ್ಲಿದೆ. ಆದರೆ, ಅಂಕಗಳು ನಿಜವಾದ ಜ್ಞಾನವನ್ನು ಪ್ರತಿಬಿಂಬಿಸುತ್ತವೆಯೇ? ವಿದ್ಯಾರ್ಥಿಗಳು ನಿರ್ದಿಷ್ಟ ಪ್ರಶ್ನೆಗಳನ್ನು ಮರು ಅಭ್ಯಾಸ ಮಾಡುವುದರಿಂದ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳಿಸುತ್ತಾರೆ. ಆದರೆ, ಈ ವಿಧಾನವು ಅವರಲ್ಲಿ ಆಳವಾದ ಅರಿವು ಮತ್ತು ವಿಶ್ಲೇಷಣಾತ್ಮಕ ಚಿಂತನೆ ಬೆಳೆಸುವುದಿಲ್ಲ. ಜೀವನದ ಸವಾಲು ಎದುರಿಸುವಾಗ ಗೊಂದಲಕ್ಕೆ ಸಿಲುಕುತ್ತಾರೆ. ಶಿಕ್ಷಣವು ಅಂಕಗಳಿಗಷ್ಟೇ ಸೀಮಿತ ಆಗಿರಬಾರದು; ವಿಚಾರಶಕ್ತಿ, ಕುತೂಹಲ ಮತ್ತು ಅರಿವನ್ನು ವಿಸ್ತರಿಸಬೇಕು. ಜೀವನದ ಸವಾಲುಗಳನ್ನು ಎದುರಿಸಲು ಸಾಧನವಾಗಬೇಕಿದೆ.

ರಂಗನಾಥ ವಿ., ಹಿರಿಯೂರು

ತತ್ತರ

ಅತ್ತ ನಡೆದಿದೆ
ಸಿಲಿಂಡರ್ ಗ್ಯಾಸ್‌ಗೆ
ಹೋರಾಟ;
ಇತ್ತ ಏರಿದೆ
ವಿದ್ಯುತ್ ದರ;
ನೆತ್ತಿ ಸುಡುತಿದೆ
ಬಿಸಿಲಿನ ಗರ;
ಸಾಮಾನ್ಯರ
ಬದುಕು ತತ್ತರ!

ಕುಂದೂರು ಮಂಜಪ್ಪ
ಹೊಳೆಸಿರಿಗೆರೆ

ಬೇಸಿಗೆ ಶಿಬಿರದ ಸಮಯ ಬದಲಾಯಿಸಿ

ರಾಜ್ಯದ ಹಲವು ಶಾಲೆಗಳಲ್ಲಿ ಬೇಸಿಗೆ ಶಿಬಿರ ಆಯೋಜಿಸಿರುವುದು ಸರಿಯಷ್ಟೆ. ಆದರೆ, ಸದ್ಯ ವಿಪರೀತ ತಾಪಮಾನದ ಕಾರಣ ಮಕ್ಕಳು ಬಳಲಿಕೆಗೆ ಒಳಗಾಗುವ ಸಾಧ್ಯತೆ ಹೆಚ್ಚಿದೆ. ಹಾಗಾಗಿ, ಶಿಬಿರದ ಸಮಯವು ಬೆಳಗ್ಗೆ 6ರಿಂದ 9ಗಂಟೆಯೊಳಗೆ ಇರುವಂತೆ ನೋಡಿಕೊಳ್ಳುವುದು ಒಳ್ಳೆಯದು. ಜೊತೆಗೆ ಕೋವಿಡ್ ಸಮಯದಲ್ಲಿ ಚಂದನ ವಾಹಿನಿಯ ಮೂಲಕ ಜ್ಞಾನಪ್ರಸಾರಕ್ಕೆ ಒತ್ತು ಕೊಟ್ಟಂತೆ ಈಗಲೂ ಕಾರ್ಯಕ್ರಮಗಳನ್ನು ರೂಪಿಸಿ ಪ್ರಸಾರ ಮಾಡಿದರೆ ವೈವಿಧ್ಯ ಕಾಪಾಡಿಕೊಳ್ಳಬಹುದು. ಶಿಕ್ಷಣ ಇಲಾಖೆಯು ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಿ.

ಪುಟ್ಟದಾಸು, ಮಂಡ್ಯ

ವಿಲ್ ಪವರ್ ಮುಖ್ಯ; ಬಿಲ್ ಪವರ್ ಅಲ್ಲ

ಲೋಕಸಭಾ ಕ್ಷೇತ್ರಗಳ ಸಂಖ್ಯೆ ಹೆಚ್ಚಿಸುವ ಮತ್ತು 2029ರ ಚುನಾವಣೆಯಿಂದ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡುವ ಸಂವಿಧಾನ ತಿದ್ದುಪಡಿ ಮಸೂದೆಗೆ ಸೋಲಾಗಿದೆ. ಆದರೇನು, ಈ ಸೋಲು ಅಂತಿಮವೇನಲ್ಲ. ಮಹಿಳೆಯರನ್ನು ಚುನಾವಣಾ ಕಣಕ್ಕೆ ಇಳಿಸಲು ಮಸೂದೆಯ ಅಗತ್ಯವಿದೆಯೆ? ಎಲ್ಲಾ ರಾಜಕೀಯ ಪಕ್ಷಗಳು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರನ್ನು ಚುನಾವಣಾ ಕಣಕ್ಕೆ ಇಳಿಸಲು ಯಾವ ತೊಡಕೂ ಇಲ್ಲ. ಅದಕ್ಕೆ ರಾಜಕೀಯ ಪಕ್ಷಗಳ ಇಚ್ಛಾಶಕ್ತಿ (ವಿಲ್ ಪವರ್) ಬೇಕು; ಬಿಲ್ ಪವರ್ (ಮಸೂದೆ) ಅಲ್ಲ.

ಲಕ್ಷ್ಮಣ್ ಗೋರ್ಲಕಟ್ಟೆ, ಮೈಸೂರು

ಕೋರ್ಟ್ ತೀರ್ಪು: ಅಧಿಕಾರಿಗಳಿಗೆ ಪಾಠ

ಧಾರವಾಡದ ಯೋಗೀಶ್‌ಗೌಡ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ತೀರ್ಪು, ಬೆಳವಣಿಗೆಗಳು ರಾಜಕೀಯ ಪ್ರಭಾವ, ಪೊಲೀಸ್ ಇಲಾಖೆಯ ಮೇಲಿನ ಒತ್ತಡ ಮತ್ತು ಕೇಂದ್ರೀಯ ತನಿಖಾ ಸಂಸ್ಥೆಗಳ ಮಹತ್ವವನ್ನು ಎತ್ತಿ ಹಿಡಿದಿದೆ. ಶಾಸಕ ಅಥವಾ ಸಚಿವ ಏನು ಮಾಡಿದರೂ ನುಣುಚಿಕೊಳ್ಳಬಹುದು ಎಂಬ ಭ್ರಮೆಯಲ್ಲಿದ್ದವರಿಗೆ ಎಚ್ಚರಿಕೆಯಂತಿರುವ ಈ ಪ್ರಕರಣವು ತನಿಖಾ ಸಂಸ್ಥೆಗಳ ಸ್ವಾಯತ್ತತೆಯ ಅಗತ್ಯವನ್ನೂ ಒತ್ತಿ ಹೇಳಿದೆ. ರಾಜಕೀಯ ವ್ಯಕ್ತಿಗಳ ಒತ್ತಡಕ್ಕೆ ಮಣಿದು ಕೆಲಸ ಮಾಡುವ ಅಧಿಕಾರಿಗಳಿಗೆ ಇದೊಂದು ದೊಡ್ಡ ಪಾಠ.

ಶಿ.ಗು. ಹಿರೇಮಠ, ಕೂಡಲಸಂಗಮ

ಘನತೆಯಿಂದ ನೀಡಬಹುದಿತ್ತು!



ಮಹಿಳೆಯರಿಗೆ ಶೇ 33ರ ಮೀಸಲಾತಿಯನ್ನು ಎಲ್ಲರನ್ನೂ ಒಳಗೊಂಡು ಘನತೆಯಿಂದಲೇ ನೀಡಬಹುದಿತ್ತು. ಆದರೆ, ಸರ್ಕಾರವು ಚುನಾವಣಾ ಸಂದರ್ಭದ ಮತಗಳಿಕೆಗಾಗಿ ಮಹಿಳೆಯರನ್ನು ಒಂದು ಅಸ್ತ್ರವಾಗಿ ಬಳಸಿ ಮಹಿಳೆಯರ ಗೌರವವನ್ನೇ ಹಾಳು ಮಾಡಿತು.

ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷ, ಕನ್ನಡ ಪುಸ್ತಕ ಪ್ರಾಧಿಕಾರ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಮ್ಮುಖದಲ್ಲೇ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಅವರು ರಾಜ್ಯ ಸರ್ಕಾರದ ವಿಳಂಬನೀತಿ ಬಗ್ಗೆ ಖಂಡಿಸಿದ್ದಾರೆ. ಆಡಳಿತದ ದಕ್ಷತೆ ಯಾವ ಪಾತಾಳಕ್ಕೆ ಕುಸಿದಿದೆ ಎಂಬುದಕ್ಕೆ ಇದಕ್ಕಿಂತ ಸಾಕ್ಷಿ ಬೇಕೆ?

ಆರ್. ಅಶೋಕ, ವಿಧಾನಸಭಾ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶುಕ್ರವಾರ, 20-4-2001

• ಕೊಣ್ಣೂರು ಪ್ರಕರಣದಲ್ಲಿ ಪೊಲೀಸರ ವೈಫಲ್ಯ

ಬೆಂಗಳೂರು, ಏ. 19– ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಕೊಣ್ಣೂರು ಗ್ರಾಮದಲ್ಲಿ 1995ರಲ್ಲಿ ಸಂಭವಿಸಿದ ಗೋಲಿಬಾರ್ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲರಾಗಿದ್ದಾರೆ ಎಂದು ಈ ಘಟನೆಯ ನ್ಯಾಯಾಂಗ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ಎನ್. ಕೃಷ್ಣನ್ ಆಯೋಗ ಅಭಿಪ್ರಾಯಪಟ್ಟಿದೆ.

ಆಯೋಗದ ವರದಿಯನ್ನು ಒಪ್ಪಿಕೊಂಡಿರುವ ಸಚಿವ ಸಂಪುಟವು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ನಿರ್ಧರಿಸಿದೆ ಎಂದು ವಾರ್ತಾ ಸಚಿವ ಪ್ರೊ. ಬಿ.ಕೆ. ಚಂದ್ರಶೇಖರ್ ಅವರು ತಿಳಿಸಿದರು.

1995ರ ಏ. 23ರಂದು ರಾತ್ರಿ ಕೊಣ್ಣೂರು ಗ್ರಾಮದಲ್ಲಿ ಮಾಜಿ ಶಾಸಕ ಕರನಿಂಗ, ಜಾರಕಿಹೊಳಿ ಬೆಂಬಲಿತರ ನಡುವೆ ಭಾರಿ ಮಾರಾಮಾರಿ ನಡೆದು 12 ಜನರ ಭೀಕರ ಕೊಲೆ ನಡೆದಿತ್ತು.

75 ವರ್ಷಗಳ ಹಿಂದೆ


ಶುಕ್ರವಾರ, 20-4-1951

• ಹಾಸನ ಜಿಲ್ಲೆಯಲ್ಲಿ ಪಾನ ನಿರೋಧಕ್ಕೆ ನಿರ್ಧಾರ

ಬೆಂಗಳೂರು, ಏ. 19– ಪಾನ ನಿರೋಧ ಜಾರಿಗೆ ತರಲು ಸರ್ಕಾರ ಕೈಗೊಂಡಿರುವ ಪಂಚವಾರ್ಷಿಕ ಯೋಜನೆಯಂತೆ 1951ರ ಜುಲೈ 1ರಿಂದ ಹಾಸನ ಜಿಲ್ಲೆಯ ಸಕಲೇಶಪುರ, ಬೇಲೂರು ತಾಲ್ಲೂಕುಗಳಲ್ಲಿ ಪಾನ ನಿರೋಧ ಜಾರಿಗೆ ತರಲು ಸರ್ಕಾರ ನಿರ್ಧರಿಸಿದೆ.

ಈ ಎರಡು ತಾಲ್ಲೂಕುಗಳಲ್ಲಿ ಪಾನ ನಿರೋಧ ಜಾರಿಗೆ ತರುವುದರಿಂದಲೇ ಸರ್ಕಾರಕ್ಕೆ ಸುಮಾರು ₹5 ಲಕ್ಷ ಆದಾಯ ಕಡಿಮೆ ಆಗುವುದು.

ಚುರುಮುರಿ



ಆಳುವವರು-ಅಳುವವರು

• ಸುಮಂಗಲಾ

'ಅಬ್ಬಬ್ಬ... ಇಡೀ ಭೂಮಂಡಲದಲ್ಲಿ ಮನುಷ್ಯನೇ ಅತ್ಯಂತ ನೀಚ ಪ್ರಾಣಿ! ಕಾಡೊಳಗಿರೋ ಪ್ರಾಣಿಗಳಿಗೆ ಕ್ರೂರ ಪ್ರಾಣಿ ಅಂತ ಬಿರುದಾವಳಿ ಕೊಡತೀರಲ್ಲ... ಈಗ ನೀವು ಮಾಡದೇನು?' ಎನ್ನುತ್ತ ಬೆಕ್ಕಣ್ಣ ಮೂತಿ ಮುರಿಯಿತು.

'ಅಂಗೈ ಹುಣ್ಣಿಗೆ ಕನ್ನಡಿ ಯಾಕಲೇ? ಈಗ ಹೊಸದಾಗಿ ನೀ ಹೇಳದೇನು?' ಎಂದೆ.

'ಈ ಟ್ರಂಪಣ್ಣ-ನೆತನ್ಯಾಹು ಯುದ್ಧೋನ್ಮಾದ ಮುಗಿಯಂಗೇ ಕಾಣಂಗಿಲ್ಲ. ಅತ್ತಾಗೆ ಇರಾನೂ ತಲೆಕೆಟ್ಟಂಗೆ ಆಡತೈತಿ! ಹೊರ್ಮುಜ್ ಜಲಸಂಧಿ ತೆಗೆದೀವಿ ಅಂದರು. ಸ್ವಲ್ಪ ಹೊತ್ತಿಗೇ ಜಲಸಂಧಿ ಮುಚ್ಚಿ, ನಮ್ ಹಡಗುಗಳ ಮೇಲೆ ಗುಂಡು ಹಾರಸ್ಯಾರೆ...' ಎಂದು ಬೆಕ್ಕಣ್ಣ ಗುರುಗುಟ್ಟಿತು.

'ನೋಡಲೇ... ಈ ಯುದ್ಧದ ಮುಂಚೂಣಿಯಲ್ಲಿ ಇರೋರು, ವಿನಾಶದ ನಿರ್ಧಾರ ಮಾಡೋರು ಯಾರು? ಎಲ್ಲಾರೂ ಗಂಡಸರು... ಹಿಂಗಾಗಿ ಮನುಷ್ಯಪ್ರಾಣಿಗಳಲ್ಲಿ ಗಂಡುಪ್ರಾಣಿಯೇ ಕ್ರೂರ ಅಂತ ಹೇಳಿಕೆ ಬದಲಿಸಿಕೋ' ಎಂದೆ.

'ಅದೂ ಖರೇ. ಯುದ್ಧ ನಿರ್ಧಾರ ಮಾಡಿದ ಪುರುಷ ಪುಂಗವರಿಗೆ ಗನ್ ಕೊಟ್ಟು, ನೀವೇ ಎದುರಾಬದುರಾ ನಿಂತು ಈಗ ಯುದ್ಧ ಮಾಡ್ರಪ್ಪ ಅನ್ನಬಕು.'

'ಅದಕ್ಕೇ ಮಹಿಳೆಯರು ಹೆಚ್ಚೆಚ್ಚು ರಾಜಕೀಯಕ್ಕೆ ಬರಬಕು' ಎಂದೆ.

'ನಮ್ ಮೋದಿಮಾಮರು ಮಹಿಳಾ ಮಸೂದೆ ಜಾರಿಗೆ ತರತೀನಿ ಅಂದ್ರೆ ಎಲ್ಲಾ ವಿಪಕ್ಷಗಳು ಸೇರಿ ಮಸೂದೆಯನ್ನು ಸೋಲಿಸಿದ್ರು. ಮತ್ತ ನೀವು ಎಲ್ಲಿ ಆಳತೀರಿ? ಅಡುಗೆ ಮನ್ಯಾಗೆ ಅಳತೀರಿ ಅಷ್ಟೆ!' ಬೆಕ್ಕಣ್ಣ ನಕ್ಕಿತು.

'ಮೋದಿಮಾಮಾರು ಎಂಪಿಗಳ ಸಂಖ್ಯೆಯನ್ನು 850ಕ್ಕೆ ಏರಿಸಿ, ಅದ್ರಾಗೆ ಶೇ 33ರಷ್ಟು ಅಂದ್ರಲ್ಲ... ಸಂಖ್ಯೆ ಏರಿಸಾದು ಬ್ಯಾಡ. ಈಗಿರೋ 543ರಾಗೆ ಹೆಣ್‌ಮಕ್ಕಳಿಗೆ ಪಾಲು ಕೊಡಂದ್ರು ವಿಪಕ್ಷಗಳು. ತಪ್ಪೇನು?' ನಾನು ವಾದಿಸಿದೆ.

'ನನ್ನ ನಾರೀಶಕ್ತಿ ಮಸೂದೆಯನ್ನು ವಿಪಕ್ಷಗಳು ಸೋಲಿಸ್ಯಾರಂತ ಮೋದಿಮಾಮಾ ನಿನ್ನೆ ಭಾವನಾತ್ಮಕ ಭಾಷಣ ಕುಟ್ಟಿದಾರೆ. ನಾರೀಶಕ್ತಿ ಮಸೂದೆ ಬಿದ್ದೋದರೆ ಏನಾತು... ನಾರೀಮತಗಳು ಮೋದಿ ಮಾಮಾನ ಬುಟ್ಟಿಗೇ ಬೀಳತಾವು' ಎಂದು ಬೆಕ್ಕಣ್ಣ ಕಣಿ ಹೇಳಿತು.

ಸಂಗತ

ವಿಶ್ವಮಾನವ ತತ್ತ್ವ: ಬಸವ ಪ್ರತಿಮೆಯ ಕನ್ನಡಿ


ಥೇಮ್ಸ್ ನದಿ ದಂಡೆಯ ಮೇಲಿನ ಬಸವಣ್ಣನ ಪ್ರತಿಮೆ ಕಾಲಾತೀತವಾದ ಸತ್ಯಗಳ ರೂಪಕದಂತಿದೆ; ಉಳಿಸಿಕೊಳ್ಳಬೇಕಾದ ಮೌಲ್ಯವ್ಯವಸ್ಥೆಯ ಸಂಕೇತದಂತಿದೆ.

• ಎಚ್.ಟಿ. ಪೋತೆ

ಲಂಡನ್ ಪ್ರವಾಸದ ದಿನಗಳವು. ಬಸವಣ್ಣನ ಪ್ರತಿಮೆಯನ್ನು ಹುಡುಕಿಕೊಂಡು ಥೇಮ್ಸ್ ನದಿಯ ದಡದಲ್ಲಿ ನಡೆಯುತ್ತಿದ್ದೆ. ಹುಡುಕುತ್ತಿರುವುದು ಬರೀ ಒಂದು ಪ್ರತಿಮೆಯನ್ನಲ್ಲ; ಪ್ರತಿಮೆಯ ನೆಪದಲ್ಲಿ ಒಂದು ಚಿಂತನೆಯ ಆಶ್ರಯವನ್ನು ಅರಸುತ್ತಿರುವಂತೆ ಅನ್ನಿಸಿತು. ಅರ್ಧ ಮೈಲಿ ನಡೆದರೂ ಬಸವಣ್ಣನ ಪ್ರತಿಮೆ ಕಾಣದಿದ್ದಾಗ, ಮನಸ್ಸಿನಲ್ಲಿ ಒಂದು ಬಗೆಯ ತಳಮಳ.

ಬಸವಣ್ಣನ ಪ್ರತಿಮೆ ಕಣ್ಣಿಗೆ ಬಿದ್ದ ಕ್ಷಣ ಮನಸ್ಸು ನಿರಾಳವಾಯಿತು. 'ಅಲ್ಲಿದೆ ಬಸವಣ್ಣನ ಪ್ರತಿಮೆ' ಎಂದು ಖುಷಿಯಿಂದ, ತಾಯಿಯನ್ನು ಕಂಡು ಓಡುವ ಕರುವಿನಂತೆ ನಾವು ಆ ಪ್ರತಿಮೆಯತ್ತ ಧಾವಿಸಿದ್ದೆವು. ಆ ಕ್ಷಣದಲ್ಲಿ ಬಸವಣ್ಣನ ಪ್ರತಿಮೆ ಬರೀ ಕಲ್ಲಿನ ಮೂರ್ತಿಯಾಗಿರಲಿಲ್ಲ. ಅದು ನಮ್ಮೊಳಗಿನ ಒತ್ತಡ, ನೋವು ಮತ್ತು ಅಶಾಂತಿಗೆ ಒಂದು ಶಾಂತಿದಾಯಕ ಸಾನ್ನಿಧ್ಯವಾಗಿತ್ತು.

ಪ್ರತಿಮೆಯ ನಾಲ್ಕೂ ಬದಿಯಲ್ಲಿ ಅಳವಡಿಸಿದ ವಚನಗಳನ್ನು ಓದುವಾಗ, ಹನ್ನೆರಡನೆಯ ಶತಮಾನದ ಶರಣಸಂಕುಲ ನಮ್ಮ ಮುಂದೆ ಜೀವಂತಗೊಂಡಂತೆ ಅನ್ನಿಸಿತು. ಪ್ರತಿಯೊಂದು ವಚನವೂ ಬರೀ ಪದಗಳ ಸಮೂಹವಾಗಿರದೆ, ಅವು ಕಾಲಾತೀತ ಸತ್ಯಗಳ ಪ್ರತಿಧ್ವನಿ ಆಗಿವೆ. ನಮ್ಮೊಳಗಿನ ಮೌನ ಪ್ರಶ್ನೆಗಳಿಗೆ ವಚನಗಳು ಉತ್ತರ ನೀಡಿದಂತೆ ಅನಿಸಿತು.



ವ್ಯಕ್ತಿಗಳನ್ನು ಹಿಂಸೆಯಿಂದ ಮೌನಗೊಳಿಸಬಹುದು, ಆದರೆ ಚಿಂತನೆಗಳು ಕಾಲವನ್ನು ಮೀರಿ ಸಾಗುತ್ತವೆ ಎನ್ನುವುದಕ್ಕೆ ಬಸವಣ್ಣನ ವಚನಗಳು ಜೀವಂತ ಸಾಕ್ಷಿಯಾಗಿವೆ. ಹನ್ನೆರಡನೇ ಶತಮಾನದಲ್ಲಿ ಹುಟ್ಟಿದ ವಿಚಾರಗಳು ಲಂಡನ್‌ನಂತಹ ದೂರದ ನೆಲದಲ್ಲೂ ನಮ್ಮನ್ನು ಸ್ಪರ್ಶಿಸುತ್ತಿರುವುದು, ಅವುಗಳ ವಿಶ್ವಮಾನವೀಯತೆಯ ಶಕ್ತಿಯನ್ನು ತೋರಿಸುತ್ತದೆ. ದೂರದ ದೇಶದಲ್ಲಿ, ಅಪರಿಚಿತ ಪರಿಸರದಲ್ಲಿ, ಬಸವಣ್ಣನ ಪ್ರತಿಮೆ ನಮ್ಮನ್ನು ನಮ್ಮದೇ ಬೇರುಗಳೊಂದಿಗೆ ಸಂಪರ್ಕಿಸಿತು. ಆ ಕ್ಷಣದಲ್ಲಿ ನಾವು ಎಲ್ಲಿದ್ದರೂ ನಮ್ಮ ಚಿಂತನೆಗಳು ನಮ್ಮನ್ನು ಗುರ್ತಿಸುತ್ತವೆ ಎಂಬ ಅರಿವು ಬಲಗೊಂಡಿತು.

ಬಸವಣ್ಣನ ಪ್ರತಿಮೆಯ ದರ್ಶನ ಹಾಗೂ ಸ್ಪರ್ಶ ಒಂದು ವಿಶಿಷ್ಟ ಅನುಭವ. ಅದು ನಮ್ಮ ಅಂತರಂಗದ ಕ್ಷೋಭೆಗೆ ಸಮಾಧಾನಪಡಿಸುವ, ಧೈರ್ಯ ನೀಡುವ ಮತ್ತು ವಿಚಾರದ ದಾರಿಯಲ್ಲಿ ನಡೆಯಲು ಪ್ರೇರೇಪಿಸುವ ಶಕ್ತಿಯಾಗಿದೆ. ಹಿಂಸೆಯ ನಡುವೆಯೂ ಮಾನವೀಯತೆ ಬದುಕಿದೆ ಹಾಗೂ ಅಸಮಾನತೆಯ ನಡುವೆಯೂ ಸಮಾನತೆಗಾಗಿ ಹೋರಾಟ ಮುಂದುವರಿಯುತ್ತಿದೆ ಎಂಬ ವಿಶ್ವಾಸವನ್ನು ಆ ಕ್ಷಣ ಮತ್ತೆ ದೃಢಪಡಿಸಿತು.

ಬಸವಣ್ಣ ಜಗತ್ತಿನ ತಾಯಿ. ಆತನದು ಹೆಂಗರುಳಿನ, ಕರುಣೆಯಿಂದ ತುಂಬಿದ ವ್ಯಕ್ತಿತ್ವ. ಶೋಷಿತರ, ಅಬಲೆಯರ, ಕಾಯಕಜೀವಿಗಳ ಶಕ್ತಿಯಾಗಿದ್ದ ಮಹಾಶರಣನನ್ನು ನೆನೆದು ನಾವು ಪ್ರತಿಮೆಯ ಸುತ್ತ ಕುಳಿತು ಸಂಭ್ರಮಿಸುತ್ತಿದ್ದ ದೃಶ್ಯವು ಅಲ್ಲಿ ಹಾದುಹೋಗುತ್ತಿದ್ದ ವಿದೇಶಿಯರ ಗಮನ ಸೆಳೆಯಿತು. ಅವರು ಆಶ್ಚರ್ಯದಿಂದ ಪ್ರತಿಮೆಯತ್ತ ಕೈಮಾಡಿ 'ಯಾರಿವರು?' ಎಂದು ಇಂಗ್ಲಿಷ್‌ನಲ್ಲಿ ಕೇಳಿದಾಗ, ನಾವು ಹೆಮ್ಮೆಯಿಂದ 'ಇವರು ಬಸವಣ್ಣ, ಹನ್ನೆರಡನೇ ಶತಮಾನದವರು. ಭಾರತದ ಬಹುದೊಡ್ಡ ಸಮಾಜ ಸುಧಾರಕ' ಎಂದು ಉತ್ತರಿಸಿದ್ದೆವು. ಅವರಲ್ಲೊಬ್ಬರು, 'ಇವರು ಮಹಿಳೆಯರ ಸಬಲೀಕರಣಕ್ಕೆ ಕೆಲಸ ಮಾಡಿದ್ದಾರೆಯೆ?' ಎಂದು ಕೇಳಿದಾಗ, ಹೌದೆಂದು ತಲೆದೂಗಿದ್ದೆವು. ಆ ಕ್ಷಣದಲ್ಲಿ ಅವರ ಮುಖದಲ್ಲಿ ಮೂಡಿದ ಸಂತೋಷ ಮತ್ತು ಅಚ್ಚರಿಯು ಬಸವಣ್ಣನ ಚಿಂತನೆಗಳು ಭಾಷೆ, ದೇಶ, ಸಂಸ್ಕೃತಿ ಎಂಬ ಗಡಿಗಳನ್ನು ಮೀರಿ ಎಲ್ಲರ ಮನಸ್ಸಿಗೂ ತಲಪುವ ಸಾಮರ್ಥ್ಯ ಹೊಂದಿವೆ ಎಂಬುದನ್ನು ದೃಢಪಡಿಸಿತು.

ಭಾರತದಲ್ಲಿ ಇರುವಂತೆ ಲಂಡನ್‌ನಲ್ಲಿ ಪ್ರತಿಮೆಗಳಿಗೆ ಪೊಲೀಸ್ ಕಾವಲು ಇಲ್ಲ. ಆ ಸರಳತೆ ಮತ್ತು ವಿಶ್ವಾಸದ ವಾತಾವರಣವು ಒಂದು ಪ್ರಜಾಸತ್ತಾತ್ಮಕ ಸಂಸ್ಕೃತಿಯ ಸೂಚಕವೆಂದು ಅನಿಸಿತು. ನಾವು ಹುಲ್ಲಿನ ಹಾಸಿನ ಮೇಲೆ ಕುಳಿತು ಊರಿಂದ ತಂದಿದ್ದ ರೊಟ್ಟಿ, ಚಟ್ನಿ, ತಿಂಡಿಗಳನ್ನು ಸೇವಿಸುತ್ತಿದ್ದಾಗ, ಆ ಕ್ಷಣವು ಒಂದು ಸಾಂಸ್ಕೃತಿಕ ನೆನಪಿನ, ಆತ್ಮೀಯತೆಯ ಸಂಭ್ರಮವಾಗಿ ಪರಿಣಮಿಸಿತು.

ಆ ಸಂತಸದ ನಡುವೆ, ಹಳೆಯ ಒಂದು ವೈಯಕ್ತಿಕ ಅವಮಾನದ ಪ್ರಸಂಗ ನೆನಪಾಯಿತು. ಶರಣರ ವಾರಸುದಾರರಂತೆ ನಡೆದುಕೊಳ್ಳುತ್ತಿದ್ದ ಸಹೋದ್ಯೋಗಿಯೊಬ್ಬರು, ಜಾತಿ ಕಾರಣದಿಂದಾಗಿ ನಾನು ಕುಳಿತ ಕುರ್ಚಿಯ ಮೇಲೆ ಕುಳಿತುಕೊಳ್ಳಲು ನಿರಾಕರಿಸಿದ್ದ ಹಳೆಯ ಘಟನೆ ನೆನಪಾಗಿ ಮನಸ್ಸನ್ನು ಕಾಡಿತು. ಬಸವಣ್ಣನ ವಿಚಾರಗಳನ್ನು ಬೋಧಿಸುವವರು, ಅವರ ತತ್ತ್ವಗಳನ್ನು ಬದುಕಿನಲ್ಲಿ ಅನುಸರಿಸದಿದ್ದರೆ ಅದಕ್ಕೆ ಅರ್ಥವೇನು?

ನದಿ ಎಲ್ಲವನ್ನೂ ತನ್ನೊಳಗೆ ಸೇರಿಸಿಕೊಂಡು ಭೇದವಿಲ್ಲದೆ ಹರಿಯುತ್ತದೆ. ಆದರೆ, ಮನುಷ್ಯ ತರತಮಗಳ ಜೊತೆಗೇ ಪ್ರಯಾಣಿಸುತ್ತಿದ್ದಾನೆ. ಥೇಮ್ಸ್ ದಡದಲ್ಲಿ ಶಾಂತಚಿತ್ತನಾಗಿ ನಿಂತಿರುವ ಬಸವಣ್ಣನ ಪ್ರತಿಮೆಯನ್ನು ನೋಡಿದಾಗ, ಅಲ್ಲಿ ಕೊಂಡಿಮಂಚಣ್ಣರಿಲ್ಲ ಎಂಬ ಭಾವನೆ ಮೂಡಿತು. ಅಂದರೆ, ಅಲ್ಲಿ ಅಸ್ಪೃಶ್ಯತೆಯ ಕಠೋರತೆಯ ಗುರುತು ಕಾಣಲಿಲ್ಲ.

ನಾವು ಅಲ್ಲಿಂದ ಹೊರಟು ಪಾರ್ಲಿಮೆಂಟ್ ಭವನದತ್ತ ನಡೆದುಕೊಂಡು ಹೋಗುತ್ತಿದ್ದಾಗ, ಗಾಂಧಿ ಮತ್ತು ನೆಲ್ಸನ್ ಮಂಡೇಲಾ ಪ್ರತಿಮೆಗಳು ಕಣ್ಣಿಗೆ ಬಿದ್ದವು. ಆ ಕ್ಷಣದಲ್ಲಿ ಒಂದು ಆಳವಾದ ಅರಿವು ಮೂಡಿತು. ಬಸವಣ್ಣ, ಗಾಂಧಿ, ಮಂಡೇಲಾ ಇವರು ವಿಭಿನ್ನ ಕಾಲ ಮತ್ತು ಸ್ಥಳಗಳಲ್ಲಿ ಬದುಕಿದರೂ, ಅವರ ಹೋರಾಟ ಒಂದೇ: ಮಾನವ ಸಮಾನತೆ, ನ್ಯಾಯ ಮತ್ತು ಸ್ವಾತಂತ್ರ್ಯ.

ಆ ದಿನದ ಅನುಭವವು ಪ್ರವಾಸದ ನೆನಪಾಗಿಯಷ್ಟೇ ಉಳಿಯದೆ, ಅದೊಂದು ಆತ್ಮಪರಿಶೀಲನೆ ಯಾತ್ರೆಯ ರೂಪದಲ್ಲಿ ನನ್ನ ನೆನಪುಗಳಲ್ಲಿ ಚಿರಸ್ಥಾಯಿಯಾಗಿ ಉಳಿದಿದೆ. ಬಸವಣ್ಣ ನಮ್ಮ ಅನುದಿನದ ಪ್ರಯಾಣಕ್ಕೆ ಜೊತೆಯಾಗುವ ಅನುಕ್ಷಣದ ಸಹಪಯಣಿಗ ಎನ್ನುವ ನಂಬಿಕೆ ಮತ್ತಷ್ಟು ಬಲವಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಸಂಘರ್ಷ ಹುಟ್ಟು ಹಾಕಿದ ಅರಣ್ಯ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಾಡಿಕೊಂಡಿರುವ ಅರಣ್ಯ ಭೂಮಿ ಒತ್ತುವರಿಯನ್ನು ತೆರವುಗೊಳಿಸುವ ಕಾರ್ಯಾಚರಣೆಯನ್ನು ಅರಣ್ಯ ಇಲಾಖೆ ತೀವ್ರಗೊಳಿಸಿರುವುದು ರೈತರು–ಅರಣ್ಯ ಅಧಿಕಾರಿಗಳ ನಡುವೆ ಸಂಘರ್ಷಕ್ಕೆ ಕಾರಣವಾಗಿದೆ. ಇನ್ನೂ ಕೆಲವೆಡೆ ಇದೇ ವಿಚಾರ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ನಡುವೆಯೂ ಸಂಘರ್ಷ ಹುಟ್ಟುಹಾಕಿದೆ.

ಸುಪ್ರೀಂ ಕೋರ್ಟ್‌ನ ತೀರ್ಪನ್ನು ಮುಂದಿಟ್ಟುಕೊಂಡು ಅರಣ್ಯ ಇಲಾಖೆ ಅಧಿಕಾರಿಗಳು ರೈತರಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ಕೆಲವು ಜನಪ್ರತಿನಿಧಿಗಳು ಆರೋಪಿಸುತ್ತಿದ್ದಾರೆ. ಆದರೆ, ಅಧಿಕಾರಿಗಳು ಇದನ್ನು ತಳ್ಳಿಹಾಕಿದ್ದಾರೆ. ರಾಜ್ಯ ಸರ್ಕಾರವು 2015ರ ಸೆ.21ರಂದು ಹೊರಡಿಸಿರುವ ಆದೇಶದಂತೆ ಪಟ್ಟಾ ಜಮೀನು ಸೇರಿ 3 ಎಕರೆಗಿಂತ ಕಡಿಮೆ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿದ ಪ್ರಕರಣ ಕೈಬಿಟ್ಟು ಐದು ಎಕರೆಗಿಂತ ಹೆಚ್ಚು ಪ್ರದೇಶವನ್ನು ಒತ್ತುವರಿ ಮಾಡಿಕೊಂಡ ಪ್ರಕರಣಗಳಲ್ಲಿ ಒತ್ತುವರಿ ತೆರವುಗೊಳಿಸಲಾಗುತ್ತಿದೆ ಎಂದು ಬಹುತೇಕ ಎಲ್ಲ ಅರಣ್ಯ ವೃತ್ತಗಳ ಅಧಿಕಾರಿಗಳು ಹೇಳುತ್ತಿದ್ದಾರೆ.

ಆದರೆ, ಶಿವಮೊಗ್ಗ, ದಕ್ಷಿಣ ಕನ್ನಡ, ತುಮಕೂರು ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ 3 ಎಕರೆಗೂ ಕಡಿಮೆ ಪ್ರದೇಶದ ಒತ್ತುವರಿಯನ್ನೂ ತೆರವುಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ಆರೋಪಿಸುತ್ತಾರೆ ರೈತರು. ಪ್ರಭಾವಿಗಳು ಮಾಡಿರುವ ಒತ್ತುವರಿಯನ್ನು ತೆರವುಗೊಳಿಸಲು ಹಿಂದೇಟು ಹಾಕುವ ಇಲಾಖೆ, ಸಣ್ಣ ರೈತರ ಸ್ವಾಧೀನದಲ್ಲಿರುವ ಜಮೀನುಗಳನ್ನು ನಿರ್ದಾಕ್ಷಿಣ್ಯವಾಗಿ ಕಿತ್ತುಕೊಳ್ಳುತ್ತಿದೆ ಎಂದು ಆಕ್ರೋಶ ಹೊರಹಾಕಿದ್ದಾರೆ.

ಮಂಗಳೂರು ವೃತ್ತದಲ್ಲಿ 3 ಎಕರೆಗಿಂತ ಕಡಿಮೆ ಒತ್ತುವರಿ ಆಗಿರುವ ಪ್ರಕರಣಗಳು 3,800ಕ್ಕೂ ಹೆಚ್ಚು ಇದ್ದು, ಸುಮಾರು 5,393 ಎಕರೆ ಅರಣ್ಯ ಒತ್ತುವರಿಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 3 ಎಕರೆಗಿಂತಲೂ ಕಡಿಮೆ ಒತ್ತುವರಿಯನ್ನೂ ಅರಣ್ಯ ಅಧಿಕಾರಿಗಳು ತೆರವುಗೊಳಿಸಿದ್ದಾರೆ. ಬೆಳ್ತಂಗಡಿ ತಾಲ್ಲೂಕಿನ ಶಿಬಾಜೆ ಗ್ರಾಮದ ಅರಂಪಾದೆಯಲ್ಲಿ ಒ.ಪಿ. ಜಾರ್ಜ್ ಅವರು 1.39 ಎಕರೆಯಲ್ಲಿ ಬೆಳೆದಿದ್ದ ರಬ್ಬರ್ ಗಿಡಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳು 2025ರ ಅಕ್ಟೋಬರ್‌ನಲ್ಲಿ ತೆರವುಗೊಳಿಸಿದ್ದರು. ಅಕ್ರಮ-ಸಕ್ರಮ ಯೋಜನೆಯಡಿ 2015ರಲ್ಲಿ 1.95 ಎಕರೆ ಜಮೀನು ಅವರಿಗೆ ಮಂಜೂರಾಗಿತ್ತು. ಅಲ್ಲಿ ಮನೆ ನಿರ್ಮಿಸಿದ್ದ ಜಾರ್ಜ್ ಕುಟುಂಬ ರಬ್ಬರ್ ಕೃಷಿ ಮಾಡಿಕೊಂಡಿತ್ತು.



ದಕ್ಷಿಣ ಕನ್ನಡದ ಬೆಳ್ತಂಗಡಿ ವನ್ಯಜೀವಿ ವಲಯದಲ್ಲಿ ಒತ್ತುವರಿ ತೆರವುಗೊಳಿಸಿದ ನಂತರ ಅರಣ್ಯ ಇಲಾಖೆ ಫಲಕ ನೆಟ್ಟಿದೆ ಸಂಗ್ರಹ ಚಿತ್ರ

ರಾಜ್ಯದಲ್ಲಿ 2.25 ಲಕ್ಷ ಎಕರೆ ಅರಣ್ಯ ಒತ್ತುವರಿ

ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಬಜೆಟ್ ಅಧಿವೇಶನದಲ್ಲಿ ವಿಧಾನ ಪರಿಷತ್ ಸದಸ್ಯ ಎನ್.ನಾಗರಾಜು (ಎಂಟಿಬಿ) ಅವರು ಕೇಳಿದ್ದ ಚುಕ್ಕೆ ಗುರುತಿನ ಪ್ರಶ್ನೆಗೆ ನೀಡಿದ್ದ ಉತ್ತರದ ಪ್ರಕಾರ, ರಾಜ್ಯದಲ್ಲಿರುವ 1.51 ಕೋಟಿ ಎಕರೆಯಷ್ಟು ಅರಣ್ಯದಲ್ಲಿ 2.25 ಲಕ್ಷ ಎಕರೆಯಷ್ಟು ಒತ್ತುವರಿಯಾಗಿದೆ.

2014ರಿಂದ ಈವರೆಗೆ 35,887 ಎಕರೆಯಷ್ಟು ಒತ್ತುವರಿಯನ್ನಷ್ಟೇ ತೆರವು ಮಾಡಲಾಗಿದೆ. ರಾಜ್ಯದಲ್ಲಿ ಒಟ್ಟು 13 ಅರಣ್ಯ ವೃತ್ತಗಳ ಪೈಕಿ ಶಿವಮೊಗ್ಗ ವೃತ್ತದಲ್ಲೇ ಅತಿಹೆಚ್ಚು (81,110 ಎಕರೆ) ಒತ್ತುವರಿ ಆಗಿದೆ.

ಯಾವ ವೃತ್ತದಲ್ಲಿ ಎಷ್ಟು? (ಎಕರೆಗಳಲ್ಲಿ)

ವೃತ್ತ	ಎಕರೆ
ಶಿವಮೊಗ್ಗ	81,110
ಉತ್ತರ ಕನ್ನಡ	28,008
ಚಿಕ್ಕಮಗಳೂರು	27,055
ಬೆಂಗಳೂರು	16,446
ಬಳ್ಳಾರಿ	13,891
ಹಾಸನ	12,925
ಕೊಡಗು	9,021
ಕಲಬುರಗಿ	8,938
ಧಾರವಾಡ	8,668
ಮಂಗಳೂರು	5,962
ಬೆಳಗಾವಿ	4,471
ಮೈಸೂರು	4,450
ಚಾಮರಾಜನಗರ	4,314

ರೈತರಲ್ಲಿ ಆತಂಕ

2015ರ ಸೆಪ್ಟೆಂಬರ್‌ನಲ್ಲಿ ರಾಜ್ಯ ಸರ್ಕಾರ ಹೊರಡಿಸಿರುವ ಆದೇಶವನ್ನು ಪ್ರಶ್ನಿಸಿ ಪರಿಸರ ಕಾರ್ಯಕರ್ತರೊಬ್ಬರು ಹೈಕೋರ್ಟ್‌ನಲ್ಲಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ಹೈಕೋರ್ಟ್ ಈ ವರ್ಷದ ಮಾರ್ಚ್ 26ರಂದು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳಿಗೆ ನೋಟಿಸ್ ಜಾರಿ ಮಾಡಿದೆ. ಇದು ಕಡಿಮೆ ಭೂಮಿಯಲ್ಲಿ ಕೃಷಿ ಮಾಡುತ್ತಿರುವ ರೈತರು ವಿಶೇಷವಾಗಿ ಅರಣ್ಯವಾಸಿಗಳಲ್ಲಿ ಆತಂಕ ಮೂಡಿಸಿದೆ. ಈ ಪ್ರಕರಣದಲ್ಲಿ ಅರಣ್ಯವಾಸಿಗಳ ಪರ ವಾದ ಮಂಡಿಸುವುದಾಗಿ ಶಿರಸಿಯ ಅರಣ್ಯಭೂಮಿ ಹಕ್ಕು ಹೋರಾಟಗಾರರ ವೇದಿಕೆ ಹೇಳಿದೆ.

ಅಧಿಕಾರಿಗಳಿಂದ ತೊಂದರೆ



ಹಾಡಿ, ಹಟ್ಟಿ ಸೇರಿ ವಿವಿಧ ಪ್ರಕಾರದಲ್ಲಿ ಅರಣ್ಯ ಜಾಗದಲ್ಲಿ ವಾಸವಿರುವ ಜನರಿಗೆ ಪಟ್ಟಾ ನೀಡುವಂತೆ ಮನಮೋಹನಸಿಂಗ್ ಅವರು ಪ್ರಧಾನಿಯಾಗಿದ್ದಾಗ ಆದೇಶವಾಗಿತ್ತು. ಅದನ್ನೆಲ್ಲ ಧಿಕ್ಕರಿಸಿ ಅರಣ್ಯ ಇಲಾಖೆಯ ಅಧಿಕಾರಿಗಳು, ಸಾರ್ವಭೌಮ ಅಧಿಕಾರ ಚಲಾಯಿಸಿ ಬಡವರಿಗೆ ತೊಂದರೆ ನೀಡುತ್ತಿದ್ದಾರೆ

ರುದ್ರಪ್ಪ ಲಮಾಣಿ, ಶಾಸಕ ಮತ್ತು ವಿಧಾನಸಭೆ ಉಪಸಭಾಧ್ಯಕ್ಷ

ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಕುಕ್ಕೆ ಸುಬ್ರಹ್ಮಣ್ಯ ಸಮೀಪದ ಕಡಬ ತಾಲ್ಲೂಕಿನ ಏನೆಕಲ್ಲು ಗ್ರಾಮದ ಕುಮಾರ್ ಎಂಬವರು ಒತ್ತುವರಿ ಮಾಡಿಕೊಂಡಿದ್ದ 1.44 ಎಕರೆ ಮೀಸಲು ಅರಣ್ಯ ಭೂಮಿಯನ್ನು ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ತೆರವುಗೊಳಿಸಿದ್ದರು.


ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕು ಚೇಳೂರು ಹೋಬಳಿ ಗಂಗಯ್ಯನಪಾಳ್ಯ ಹಾಗೂ ಸುತ್ತಮುತ್ತಲಿನ ಪ್ರದೇಶದ 300 ಎಕರೆ ಜಾಗದಲ್ಲಿ ರೈತರು ಹಲವಾರು ವರ್ಷಗಳಿಂದ ಉಳುಮೆ ಮಾಡಿಕೊಂಡಿದ್ದರು. ಸಾಗುವಳಿ ಪತ್ರಕ್ಕಾಗಿ ಬಗರ್ ಹುಕುಂ ಅರ್ಜಿ ಸಲ್ಲಿಸಿದ್ದು, ಅರ್ಜಿ ವಿಲೇವಾರಿಗಾಗಿ ಎದುರು ನೋಡುತ್ತಿದ್ದಾರೆ. ಇದರ ಮಧ್ಯೆ ಅರಣ್ಯ ಇಲಾಖೆ ಅಧಿಕಾರಿಗಳು ಇದು 'ಡೀಮ್ಡ್ ಅರಣ್ಯ ಪ್ರದೇಶ' ಎಂದು ಜಾಗ ಖಾಲಿ ಮಾಡುವಂತೆ ರೈತರಿಗೆ ತಿಳಿಸಿದ್ದರು. ರೈತರು ಪ್ರತಿಭಟನೆ ನಡೆಸಿದ್ದರು.

ತೀವ್ರ ವಿರೋಧ: ಉತ್ತರ ಕನ್ನಡ ಜಿಲ್ಲೆಯಲ್ಲಿ ಅಂದಾಜು 1,450 ಹೆಕ್ಟೇರ್ ಅರಣ್ಯ ಭೂಮಿ ಒತ್ತುವರಿ ತೆರವಿಗೆ ಅರಣ್ಯ ಇಲಾಖೆ ಅಧಿಕಾರಿಗಳು ಪ್ರಯತ್ನ ನಡೆಸುತ್ತಿದ್ದಾರೆ. ಆದರೆ, ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವಿರೋಧದ ತೀವ್ರತೆ ಹೆಚ್ಚಿರುವ ಕಾರಣಕ್ಕೆ ಒತ್ತುವರಿ ತೆರವು ಪ್ರಕ್ರಿಯೆಗೆ ಬಲ ಬಂದಿಲ್ಲ. 2006ರ ನಂತರ ಒತ್ತುವರಿ ಮಾಡಲಾದ ಜಮೀನುಗಳಲ್ಲಿ ಮಾತ್ರ ತೆರವು ಪ್ರಕ್ರಿಯೆ ನಡೆಯುತ್ತಿದೆ ಎಂಬುದಾಗಿ ಅರಣ್ಯ ಇಲಾಖೆ ಅಧಿಕಾರಿಗಳು ಸಮರ್ಥಿಸಿಕೊಳ್ಳುತ್ತಿದ್ದಾರೆ. ಆದರೆ, ಇದನ್ನು ಅಲ್ಲಗಳೆಯುತ್ತಿರುವ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯು, 'ಅರಣ್ಯ ಹಕ್ಕು ಕಾಯ್ದೆ ಅಡಿ ಮಂಜೂರಾತಿಗೆ ಅರ್ಜಿ ಸಲ್ಲಿಸಿದ್ದರೂ ಅಂತಹ ಜಮೀನುಗಳಲ್ಲಿಯೂ ತೆರವು ನಡೆಸಲು ಸಿಬ್ಬಂದಿ ಪ್ರಯತ್ನಿಸುತ್ತಿದ್ದಾರೆ' ಎಂದು ಆರೋಪಿಸಿದೆ.

ಅಕ್ರಮ ತೆರವು ಅನಿವಾರ್ಯ: ಹಾವೇರಿಯಲ್ಲಿ ಇತ್ತೀಚೆಗೆ ನಡೆದಿದ್ದ ಪ್ರಗತಿ ಪರಿಶೀಲನೆ ಸಭೆಯಲ್ಲಿ ಶಾಸಕ ರುದ್ರಪ್ಪ ಲಮಾಣಿ ಅವರು ಅರಣ್ಯ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಕಣ್ಣೀರು ಹಾಕಿದ್ದು ಸುದ್ದಿಯಾಗಿತ್ತು. ಕಂದಾಯ ಜಮೀನು ಎಂಬುದಾಗಿ ಘೋಷಣೆಯಾಗಿದ್ದ ಜಾಗ ತಮ್ಮದೆಂದು ಹೇಳಿ ಅರಣ್ಯ ಇಲಾಖೆ ಅಧಿಕಾರಿಗಳು ಜನರನ್ನು ಒಕ್ಕಲೆಬ್ಬಿಸುತ್ತಿದ್ದಾರೆ ಎಂದು ಅವರು ದೂರಿದ್ದರು. ಈ ಘಟನೆಯ ನಂತರ ಅಧಿಕಾರಿಗಳು ಒತ್ತುವರಿ ಪ್ರಕರಣಗಳ ಮರು ವಿಚಾರಣೆ ಆರಂಭಿಸಿದ್ದಾರೆ.

'ಜಿಲ್ಲೆಯಲ್ಲಿ 3,500 ಎಕರೆ ಅರಣ್ಯ ಪ್ರದೇಶದ ಜಾಗ ಒತ್ತುವರಿಯಾಗಿದೆ. 1963ರ ಕರ್ನಾಟಕ ಅರಣ್ಯ ಕಾಯ್ದೆಯ ಸೆಕ್ಷನ್ 64 (ಎ) ಅಡಿ ವಿಚಾರಣೆ ನಡೆಯುತ್ತಿದೆ. 3 ಎಕರೆಗಿಂತ ಕಡಿಮೆ ಒತ್ತುವರಿ ಇರುವ ಪಟ್ಟಾ ಹಾಗೂ ಅರಣ್ಯ ಜಾಗದ ಒತ್ತುವರಿ ತೆರವು ಮಾಡದಂತೆ ಸರ್ಕಾರದ ಆದೇಶ ಇರುವುದರಿಂದ ಎಲ್ಲವನ್ನೂ ತೆರವು ಮಾಡಲು ಸಾಧ್ಯವಾಗಿಲ್ಲ. ಆದರೆ, ವಿಚಾರಣೆ ಪ್ರಗತಿಯಲ್ಲಿದೆ' ಎಂದು ಹೇಳುತ್ತಾರೆ ಹಾವೇರಿ ವಿಭಾಗದ ಡಿಸಿಎಫ್ ಪ್ರಕಾಶ್‌ಕರ್ ಅಕ್ಷಯ್ ಅಶೋಕ ಅವರು.

ವರ್ಷಗಳ ಹಿಂದೆ ಅರಣ್ಯ ಎಂದು ಘೋಷಣೆಯಾದ ಜಮೀನನ್ನು ಕಂದಾಯ ಜಮೀನು ಎಂದು ಅಕ್ರಮವಾಗಿ ಮಂಜೂರು ಮಾಡಲಾಗಿದ್ದರೆ, ಅದನ್ನು ತೆರವುಗೊಳಿಸಲೇ ಬೇಕಾಗುತ್ತದೆ ಎಂಬುದು ಅವರ ಹೇಳಿಕೆ.



ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಖಂಡಿಕೇರಿಯಲ್ಲಿ ರೈತರು ಬೆಳೆದಿದ್ದ ಅರಣ್ಯ ಜಮೀನಿನಲ್ಲೇ ಸಸಿ ನೆಡಲು ಅರಣ್ಯ ಇಲಾಖೆ ಸಿದ್ಧತೆ ನಡೆಸಿದೆ

ನ್ಯಾಯಾಲಯದ ತೀರ್ಪಿನ ತಪ್ಪು ಉಲ್ಲೇಖ

'ಅರಣ್ಯ ಹಕ್ಕು ಕಾಯ್ದೆಯಡಿ ರೈತ ಅರ್ಜಿ ಕೊಟ್ಟ ಮೇಲೆ ಅದು ವಿಚಾರಣೆ ನಡೆದು ವಿಲೇವಾರಿ ಆಗದೇ ಆತನನ್ನು ಒಕ್ಕಲೆಬ್ಬಿಸಬಾರದು ಎಂಬ ನಿಯಮ ಇದೆ. ಆದರೆ ಅದು ಶಿವಮೊಗ್ಗ ಜಿಲ್ಲೆಯಲ್ಲಿ ಪಾಲನೆಯಾಗುತ್ತಿಲ್ಲ. ಜಿಲ್ಲೆಯಲ್ಲಿ ಅರಣ್ಯ ಹಕ್ಕು ಕಾಯ್ದೆಯಡಿ 80,000 ಅರ್ಜಿ ಬಾಕಿ ಇವೆ. ಆದರೆ ಯಾವುದೋ ಒಂದು ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಅರಣ್ಯಾಧಿಕಾರಿಗಳು ಸಾಮೂಹಿಕವಾಗಿ ಅನ್ವಯಿಸುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸುತ್ತಾರೆ ಮಲೆನಾಡು ರೈತ ಹೋರಾಟ ಸಮಿತಿ ಸಂಚಾಲಕ ತೀ.ನಾ.ಶ್ರೀನಿವಾಸ.

ಬೀದಿಪಾಲು

ಹಾಸನ ಜಿಲ್ಲೆಯ 2,11,731 ಎಕರೆ ಅರಣ್ಯ ಪ್ರದೇಶದಲ್ಲಿ 32,751 ಎಕರೆಯನ್ನು ವಿವಿಧ ಯೋಜನೆಗಳಡಿ ರೈತರು ಹಾಗೂ ಇತರರಿಗೆ ಮಂಜೂರಾತಿ ಮಾಡಲಾಗಿದೆ. ಸ್ವಾಧೀನ ಇರುವವರಲ್ಲಿ ಹಲವು ಮಂದಿಗೆ ಕಂದಾಯ ಇಲಾಖೆಯಿಂದ ಖಾತೆಯನ್ನೂ ಮಾಡಿಕೊಡಲಾಗಿದೆ. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಕ್ರಮ ಕೈಗೊಂಡರೆ, ಜಿಲ್ಲೆಯಲ್ಲಿ ಸುಮಾರು 15 ಸಾವಿರದಿಂದ 20 ಸಾವಿರ ಕುಟುಂಬಗಳು ಬೀದಿ ಪಾಲಾಗಲಿವೆ ಎಂದು ಹೇಳುತ್ತಾರೆ ಅಲ್ಲಿನ ಫಲಾನುಭವಿಗಳು.

ನೆಲೆ ಕಳೆದುಕೊಳ್ಳುವ ಭಯ

1990ರಲ್ಲಿ ನೆರೆಹಾವಳಿ ಸಂಭವಿಸಿ ತುಂಗಭದ್ರಾ ನದಿ ದಡದಲ್ಲಿದ್ದ ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ವಟ್ಲಹಳ್ಳಿಯ ಅನೇಕ ಕುಟುಂಬಗಳು ಅರಣ್ಯ ಭೂಮಿಗೆ ಸ್ಥಳಾಂತರಗೊಂಡು ಮನೆ ನಿರ್ಮಿಸಿಕೊಂಡವು. ಬಳಿಕ ಇನ್ನೂ ಕೆಲವು ಮನೆಗಳು ಸೇರಿಕೊಂಡು ಒತ್ತುವರಿ ಜಾಗ 50 ಎಕರೆಯಷ್ಟಾಗಿದೆ. ಇದೀಗ ಅರಣ್ಯ ಇಲಾಖೆಯವರು ಜನರು ಕಟ್ಟಿಕೊಂಡಿರುವ ಮನೆ ಜಾಗ ಬಿಟ್ಟು ಉಳಿದ ಜಾಗ ತಮ್ಮದೆಂದು ಗಡಿ ಗುರುತು ಮಾಡತೊಡಗಿದ್ದಾರೆ. ಇಲ್ಲಿನ ಜನರಿಗೆ ತಮ್ಮ ನೆಲೆ ಕಳೆದುಕೊಳ್ಳುವ ಭೀತಿ ಎದುರಾಗಿದೆ.

ಆರ್‌ಸಿಸಿ ಹಾಕಿದ್ದಕ್ಕೆ ಪ್ರಕರಣ

ದಶಕದ ಹಿಂದಿನ ಘಟನೆ. ಅದು ಶಿವಮೊಗ್ಗ ಜಿಲ್ಲೆಯ ಶೆಟ್ಟಿಹಳ್ಳಿ–ಚಿತ್ರಶೆಟ್ಟಿಹಳ್ಳಿಯಲ್ಲಿ ಭಾರಿ ಮಳೆಯಿಂದ ಹಂಚಿನ ಮನೆಗಳಿಗೆ ಧಕ್ಕೆಯಾಗಿತ್ತು. ಆರ್‌ಸಿಸಿ ಹಾಕಿದ ಮೂರು ಕುಟುಂಬಗಳ ವಿರುದ್ಧ ಅರಣ್ಯಾಧಿಕಾರಿಗಳು ಪ್ರಕರಣ ದಾಖಲಿಸಿದ್ದರು.

ಸಾಗುವಳಿ ಭೂಮಿಗೆ ಕಂದಾಯ ಇಲಾಖೆ ಮಂಜೂರಾತಿ ನೀಡಿದ್ದು, ಹಕ್ಕು ಪತ್ರ, ಪಹಣಿ ಇದ್ದರೂ ಅರಣ್ಯ ಇಲಾಖೆ ಅಧಿಕಾರಿಗಳು ಭೂ ಕಬಳಿಕೆ ಪ್ರಕರಣ ದಾಖಲಿಸಿದ್ದರು. ಲಿಂಗನಮಕ್ಕಿ ಜಲಾಶಯಕ್ಕಾಗಿ ಮನೆ, ಜಮೀನು ಕಳೆದುಕೊಂಡ ಅವರಿಗೆ ಸರ್ಕಾರವೇ ಕೊಟ್ಟ ನೆಲೆ ಶೆಟ್ಟಿಹಳ್ಳಿ. ನಂತರ ಆ ಜಾಗ ಅಭಯಾರಣ್ಯದ ವ್ಯಾಪ್ತಿಗೆ ಸೇರಿತ್ತು. ಆರ್‌ಸಿಸಿ ಹಾಕಿದ ತಪ್ಪಿಗೆ ಹೆಬ್ಬೂರು ಕುಮಾರ್ ಕುಟುಂಬ ಬೆಂಗಳೂರಿನಲ್ಲಿರುವ ಭೂ ಕಬಳಿಕೆ ವಿಚಾರಣಾ ನ್ಯಾಯಾಲಯಕ್ಕೆ ವರ್ಷಾನುಗಟ್ಟಲೆ ಅಲೆದಾಡುವಂತಾಗಿತ್ತು.

ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯವು ರಾಜ್ಯದಲ್ಲಿ ಸರ್ಕಾರಿ, ಅರಣ್ಯ ಅಥವಾ ಸಾರ್ವಜನಿಕ ಸಂಸ್ಥೆಗಳ ಭೂಮಿಯನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡ ಪ್ರಕರಣಗಳನ್ನು ತ್ವರಿತವಾಗಿ ವಿಚಾರಣೆ ನಡೆಸಲು ವಿ. ಬಾಲಸುಬ್ರಹ್ಮಣ್ಯ ಆಯೋಗ ಶಿಫಾರಸಿನಂತೆ ಸ್ಥಾಪಿಸಲಾದ ವಿಶೇಷ ನ್ಯಾಯಾಲಯ. ಇದು 'ಕರ್ನಾಟಕ ಭೂ ಕಬಳಿಕೆ ನಿಷೇಧ ಕಾಯ್ದೆ-2011'ರಡಿ ಕಾರ್ಯನಿರ್ವಹಿಸುತ್ತಿದೆ.

ಒಬ್ಬ ಅಧ್ಯಕ್ಷರು, ಇಬ್ಬರು ನ್ಯಾಯಾಂಗ ಸದಸ್ಯರು ಮತ್ತು ಇಬ್ಬರು ಕಂದಾಯ ಸದಸ್ಯರನ್ನು ಒಳಗೊಂಡ ಈ ನ್ಯಾಯಾಲಯ ಬೆಂಗಳೂರಿನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿದ್ದು, ರಾಜ್ಯದ ಯಾವುದೇ ಭಾಗದಲ್ಲಿ ಭೂಕಬಳಿಕೆ ಪ್ರಕರಣ ದಾಖಲಾದರೂ ಅಂಥವರು ಬೆಂಗಳೂರಿನ ಈ ನ್ಯಾಯಾಲಯದಲ್ಲೇ ವಿಚಾರಣೆ ಎದುರಿಸಬೇಕಿದೆ. ಅಕ್ರಮ ಭೂ ಕಬಳಿಕೆ ತಡೆ, ಒತ್ತುವರಿ ತೆರವು ಮತ್ತು ಮಾಲೀಕತ್ವದ ವಿವಾದಗಳ ಶೀಘ್ರ ಇತ್ಯರ್ಥಕ್ಕೆ ನ್ಯಾಯಾಲಯ ಕ್ರಮವಹಿಸುತ್ತಿದೆ. ಭೂ ಕಬಳಿಕೆ ಪ್ರಕರಣಗಳಲ್ಲಿ ಸಮನ್ಸ್ ನೀಡುವುದು, ವಿಚಾರಣೆ ನಡೆಸುವುದು ಮತ್ತು ಮಧ್ಯಂತರ ತಡೆ ನೀಡುವ ಅಧಿಕಾರವನ್ನು ಹೊಂದಿದೆ. ಇದುವರೆಗೂ ರಾಜ್ಯದ ವಿವಿಧೆಡೆ 20,841 ಪ್ರಕರಣಗಳು ದಾಖಲಾಗಿವೆ. ಶೇ 45ರಷ್ಟು ಪ್ರಕರಣಗಳು ಇತ್ಯರ್ಥವಾಗಿವೆ. ಇನ್ನೂ ಶೇ 55ರಷ್ಟು ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ.

ಅರಣ್ಯ ಭೂಮಿ: ಎರಡು 'ಸುಪ್ರೀಂ' ತೀರ್ಪುಗಳು

ಅರಣ್ಯ ಸಂರಕ್ಷಣೆಗೆ ಸಂಬಂಧಿಸಿದಂತೆ ಟಿ.ಎಸ್.ಗೋದಾವರ್ಮನ್ ತಿರುಮಲಪಾಡ್ ಮತ್ತು ಭಾರತ ಸರ್ಕಾರದ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ಸರಣಿ ತೀರ್ಪುಗಳು, ನಿರ್ದೇಶನಗಳು ಮಹತ್ವಪೂರ್ಣವಾದುದಾಗಿವೆ. ಗೋದಾವರ್ಮನ್ ಅವರು ಅರಣ್ಯ ಇಲಾಖೆಯ ನಿವೃತ್ತ ಉದ್ಯೋಗಿಯಾಗಿದ್ದರು. ತಮಿಳುನಾಡಿನ ನೀಲಗಿರಿ ಪ್ರದೇಶದಲ್ಲಿ ಅರಣ್ಯನಾಶ ತಡೆಯಲು ತಮಿಳುನಾಡು ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಅವರು (1995) ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಸಲ್ಲಿಸಿದ್ದರು.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯವು ತನ್ನ ತೀರ್ಪಿನಲ್ಲಿ, ಸಂರಕ್ಷಿತ ಅರಣ್ಯವನ್ನು ಅಧಿಸೂಚನೆಯಿಂದ ಹೊರತರುವುದು, ಅರಣ್ಯವನ್ನು ಅರಣ್ಯೇತರ ಉದ್ದೇಶಗಳಿಗೆ ಬಳಸುವುದರ ಸಂಬಂಧ ಸರ್ಕಾರಕ್ಕೆ ಕಠಿಣ ನಿರ್ದೇಶನಗಳನ್ನು ನೀಡಿತ್ತು. ಅದಕ್ಕಿಂತಲೂ ಮುಖ್ಯವಾಗಿ, ಅರಣ್ಯ ಸಂರಕ್ಷಣಾ ಕಾಯ್ದೆ–1980ರ ಪ್ರಕಾರ, 'ಅರಣ್ಯ' ಎನ್ನುವುದರ ಅರ್ಥವನ್ನು ವಿಸ್ತರಿಸಿ, ವ್ಯಾಖ್ಯಾನಿಸಿತ್ತು.

'ಅರಣ್ಯ' ಎಂದರೆ ಕೇವಲ ಸರ್ಕಾರದ ಅಧಿಸೂಚಿತ ಪ್ರದೇಶವಷ್ಟೇ ಅಲ್ಲ; ಅರಣ್ಯ ಎಂಬ ಪದಕ್ಕೆ ಪದಕೋಶಗಳಲ್ಲಿ ಸಿಗುವ ಅರ್ಥಕ್ಕೆ ಸರಿಹೊಂದುವಂಥ ಯಾವುದೇ ಭೂಪ್ರದೇಶವನ್ನು (ಭೂಬಳಕೆಯ ಸ್ವರೂಪ ಮತ್ತು ಅದರ ಮಾಲೀಕತ್ವದಂಥ ಅಂಶಗಳನ್ನು ಲೆಕ್ಕಕ್ಕಿಡದೇ) ಅರಣ್ಯ ಎಂದು ಪರಿಗಣಿಸಬೇಕು ಮತ್ತು ಅದನ್ನು ರಕ್ಷಿಸಬೇಕು ಎಂದು 1996ರಲ್ಲಿ ನೀಡಿದ ತೀರ್ಪಿನಲ್ಲಿ ಹೇಳಿತ್ತು.

ಮುಂದಿನ ಹಂತದಲ್ಲಿ ಸುಪ್ರೀಂ ಕೋರ್ಟ್, ಅರಣ್ಯ ಸಂರಕ್ಷಣೆಯ ಉದ್ದೇಶಕ್ಕಾಗಿ ಕೇಂದ್ರ ಉನ್ನತಾಧಿಕಾರ ಸಮಿತಿಯನ್ನು (ಸಿಇಸಿ) ರಚಿಸಿತು. ಆ ಸಮಿತಿಯ ಶಿಫಾರಸುಗಳಿಗೆ ಅನುಗುಣವಾಗಿ ಕೋರ್ಟ್ ಕಾಲದಿಂದ ಕಾಲಕ್ಕೆ ಹಲವು ರೀತಿಯ ನಿರ್ದೇಶನ, ಆದೇಶಗಳನ್ನು ನೀಡುತ್ತಾ ಬರುತ್ತಿದೆ.

ಅರಣ್ಯ ಸಂರಕ್ಷಣೆಗೆ ಸಂಬಂಧಿಸಿದ ಮತ್ತೊಂದು ಪ್ರಕರಣವನ್ನೂ ಪದೇ ಪದೇ ಉಲ್ಲೇಖಿಸಲಾಗುತ್ತಿದೆ. ಅದು ಕರ್ನಾಟಕ ಸರ್ಕಾರ ಮತ್ತು ಐ.ಎಸ್. ನಿರ್ವಾಣೇಗೌಡ ಮತ್ತು ಇತರರ ನಡುವಿನ ಪ್ರಕರಣ. ತಹಶೀಲ್ದಾರರು ನೀಡಿದ ಸಾಗುವಳಿ ಚೀಟಿ ಆಧಾರದಲ್ಲಿ ಜಮೀನಿನ ಮಾಲೀಕತ್ವವನ್ನು ಪರಿಗಣಿಸಬೇಕೇ ಬೇಡವೇ ಎನ್ನುವುದು ನ್ಯಾಯಾಲಯದ ಮುಂದಿತ್ತು. ಪ್ರಕರಣದ ಸಂಬಂಧ 2007ರಲ್ಲಿ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, ಸದರಿ ಭೂಮಿಯು ಅರಣ್ಯ ಪ್ರದೇಶಕ್ಕೆ ಸೇರಿದ್ದು, ಅದನ್ನು ಮಂಜೂರು ಮಾಡಲು ಕಂದಾಯ ಇಲಾಖೆಗೆ ಯಾವುದೇ ಹಕ್ಕು ಇಲ್ಲ ಎಂದಿತ್ತು. ಭೂಮಿಯು ಸಂರಕ್ಷಿತ ಅರಣ್ಯ ಪ್ರದೇಶದ ವ್ಯಾಪ್ತಿಗೆ ಒಳಪಟ್ಟಿದ್ದರೆ, ಅದನ್ನು ಮಂಜೂರು ಮಾಡಲು ಕಂದಾಯ ಇಲಾಖೆಗೆ ಹಕ್ಕು ಇರುವುದಿಲ್ಲ, ಅಂಥ ಭೂಪ್ರದೇಶದ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಕಂದಾಯ ಇಲಾಖೆಯ ಸಾಗುವಳಿ ಚೀಟಿಯಂಥ ದಾಖಲೆಗಳನ್ನು ಮಾನ್ಯ ಮಾಡಲಾಗುವುದಿಲ್ಲ ಎಂದೂ ಕೋರ್ಟ್ ಹೇಳಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ರೈಲು ಹಳಿಯ ಬದಿಯಲ್ಲಿ ನಿಂತಿದ್ದ ಮಗುವೊಂದು, ವೇಗವಾಗಿ ಬರುತ್ತಿದ್ದ ರೈಲಿಗೆ ಇನ್ನೇನು ಸಿಲುಕುತ್ತದೆ ಎನ್ನುವಷ್ಟರಲ್ಲಿ ಹಸುವೊಂದು ಬಂದು ಮಗುವನ್ನು ರಕ್ಷಿಸುವ ವಿಡಿಯೊ ತುಣುಕೊಂದು @ಪಾರಿಇಶ್ಕ್ ಎಂಬ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಲಾಗಿದೆ. 'ಮನುಷ್ಯರು ಏನೂ ಮಾಡದೇ ಸುಮ್ಮನಿದ್ದಾಗ, ಒಂದು ಪ್ರಾಣಿಯು ಮಾನವೀಯತೆ ಅಂದರೆ ಏನು ಎಂಬುದನ್ನು ತೋರಿಸಿದೆ' ಎಂದು ಪೋಸ್ಟ್‌ನಲ್ಲಿ ಹೇಳಲಾಗಿದೆ. ಆದರೆ ಇದು ಸುಳ್ಳು.



ವಿಡಿಯೊ ತುಣುಕಿನ ಕೀ ಫ್ರೇಮ್ ಒಂದನ್ನು ಗೂಗಲ್ ಲೆನ್ಸ್ ಬಳಸಿ ರಿವರ್ಸ್ ಸರ್ಚ್ ವಿಧಾನದಲ್ಲಿ ಹುಡುಕಾಟ ನಡೆಸಿದಾಗ, ಇದೇ ಪ್ರತಿಪಾದನೆಯೊಂದಿಗೆ ಹಲವರು ಪೋಸ್ಟ್ ಅನ್ನು ಹಂಚಿಕೊಂಡಿರುವುದು ಕಂಡುಬಂತು. ಇನ್ನಷ್ಟು ಹುಡುಕಿದಾಗ ಮೋಜಿಲೊ_ವಾಂಡ್ರೋ ಎಂಬ ಇನ್‌ಸ್ಟಾಗ್ರಾಂ ಪುಟದ ಲಿಂಕ್ ಸಿಕ್ಕಿತು. ಇದೇ ವಿಡಿಯೊವನ್ನು ಆ ಖಾತೆಯಲ್ಲಿ ಏಪ್ರಿಲ್ 15ರಂದು ಪೋಸ್ಟ್ ಮಾಡಲಾಗಿತ್ತು. ಆ ಖಾತೆಯನ್ನು ಪರಿಶೀಲಿಸಿದಾಗ ಅದರಲ್ಲಿ ಎಐ ಮೂಲಕ ಸೃಷ್ಟಿಸಿದ ವಿಡಿಯೊಗಳನ್ನೇ ಹಂಚುತ್ತಿರುವುದು ತಿಳಿದು ಬಂತು. ಅನುಮಾನ ಬಂದು ವಿಡಿಯೊವನ್ನು ಹೈವ್ ಮಾಡರೇಷನ್ ಎಂಬ ಎಐ ಪತ್ತೆ ಟೂಲ್‌ನಲ್ಲಿ ಹಾಕಿ ಪರಿಶೀಲಿಸಿದಾಗ, ಅದು ಡೀಪ್‌ಫೇಕ್ ವಿಡಿಯೊ ಎಂಬುದು ದೃಢಪಟ್ಟಿತು. ಎಐ ವಿಡಿಯೊವನ್ನು ನಿಜವಾದ ವಿಡಿಯೊ ಎಂಬಂತೆ ಬಿಂಬಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ದೇವರಿರಬೇಕು ಎಲ್ಲರೆದೆಯೊಳಗೆ

ನುಡಿ ಬೆಳಗು — ದಾದಾಪೀರ್ ನವಿಲೇಹಾಳ್



ದೇವರನ್ನು ಸರ್ವಜ್ಞ, ಸರ್ವಶಕ್ತ, ಸರ್ವಾಂತರ್ಯಾಮಿ ಎಂದೆಲ್ಲಾ ಕರೆಯಲಾಗುತ್ತದೆ. ದೈವವಿಶ್ವಾಸಿಗಳು ಪ್ರತಿ ವಿಷಯ ವಸ್ತುಗಳಲ್ಲಿ ದೇವರ ಅಂಶವನ್ನು ಕಾಣಬಲ್ಲರು. ಹರಿವ ನೀರು, ಅಚಲವಾದ ಗುಡ್ಡ, ಹಕ್ಕಿಗಳ ಕಲರವ, ಉರಿವ ಬೆಂಕಿ, ಬೀಸುವ ಗಾಳಿ, ಅರಳುವ ಮೊಗ್ಗು - ಹೀಗೆ ಅಣುರೇಣುತೃಣಕಾಷ್ಠಗಳಲ್ಲಿ ದೇವರ ಇರುವನ್ನು ಕಂಡು ಆನಂದಿಸುತ್ತಾರೆ. ಪಂಚಭೂತಗಳಿಂದಾದ ಎಲ್ಲವನ್ನೂ ಮುಟ್ಟಬಹುದು, ಅಳೆಯಬಹುದು ಮತ್ತು ಎಷ್ಟೇ ಸಂಕೀರ್ಣವಾದರೂ ಬಿಡಿಸಿ ಅರ್ಥೈಸಿಕೊಳ್ಳಬಹುದು. ಆದರೆ, ಪಂಚಭೂತಗಳನ್ನೇ ಸೃಷ್ಟಿಸಿದವರನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ ಎಂಬುದು ಒಂದು ನಂಬಿಕೆ.

ಗೆಲಿಲಿಯೋ ಟೆಲಿಸ್ಕೋಪ್ ಮೂಲಕ ಗ್ರಹಗಳ ಚಲನೆ ಮತ್ತು ಕಕ್ಷೆಯನ್ನು ನೋಡುತ್ತಾ ಲಕ್ಷಾಂತರ ಮೈಲಿಗಳ ಆಚೆ ದೇವರು ಎಲ್ಲಿಯೂ ಕಾಣಲಿಲ್ಲ, ಬದಲಾಗಿ ಭೂಮಿ ಸೂರ್ಯನನ್ನು ಸುತ್ತುವ ಸತ್ಯ ಗೋಚರಿಸಿತು ಎನ್ನುತ್ತಾನೆ. ಸೂರ್ಯ ಭೂಮಿಗೆ ಹತ್ತಿರವಿರುವ ನಕ್ಷತ್ರ. ಅಂತಹ ಲಕ್ಷ ಲಕ್ಷ ನಕ್ಷತ್ರಗಳು ಆಕಾಶದಲ್ಲಿವೆ. ಅವೆಲ್ಲ ಕೋಟ್ಯಂತರ ವರ್ಷಗಳಿಂದ ಉರಿಯುತ್ತಿವೆ. ಆದರೂ ಅವುಗಳ ಪ್ರಖರತೆಯಲ್ಲಿ ಕಿಂಚಿತ್ತೂ ಕಡಿಮೆಯಾಗಿಲ್ಲ. ಹಾಗೆ ಉರಿಯಲು ಏನಾದರೂ ಮೂಲ ಇಂಧನ ಬೇಕೇಬೇಕು. ಉರಿಯುತ್ತಾ ಉರಿಯುತ್ತಾ ಇಂಧನದ ಮೂಲದ್ರವ್ಯ ಕರಗಿ ಕೊನೆಗೊಮ್ಮೆ ಆ ಬೆಳಕು ಆರಬೇಕು. ಇದು ನಿಸರ್ಗದ ನಿಯಮ. ನಕ್ಷತ್ರಗಳ ವಿಷಯದಲ್ಲಿ ಹೀಗಾಗಿಲ್ಲ. ಹಾಗಾದರೆ ಕೋಟಿ ವರ್ಷಗಳ ನಂತರವೂ ಸವೆಯದೆ ಉಳಿಯಲು ಇಂಧನದ ಮೂಲವೊಂದು ಇರಲೇಬೇಕಲ್ಲ? ಆ ಮೂಲಶಕ್ತಿ ಎಲ್ಲಿಂದ ಬಂದಿದೆ? ಗೊತ್ತಿಲ್ಲ. ಆ ಮೂಲಚೈತನ್ಯವನ್ನು ಬೇಕಾದರೆ ದೇವರು ಎಂದು ಕರೆಯಬಹುದು ಎನ್ನುತ್ತಾನೆ ಐನ್‌ಸ್ಟೈನ್.


ಅಂದರೆ ದೇವರು ಎನ್ನುವುದು ದಾರ್ಶನಿಕರ ವಿವರಣೆಗೂ ವೈಜ್ಞಾನಿಕ ವಿಶ್ಲೇಷಣೆಗೂ ಸುಲಭಕ್ಕೆ ಸಿಗದ ನಿಗೂಢ ವಿಸ್ಮಯವಾಗಿ ಉಳಿದಿದೆ. ಹೀಗೆ ನಿಗೂಢವಾಗಿರುವುದರಿಂದಲೇ ದೇವರ ವಿಷಯದಲ್ಲಿ ಮನುಷ್ಯನಿಗೆ ಎಲ್ಲಿಲ್ಲದ ಸ್ವಾತಂತ್ರ್ಯ, ಸ್ವೇಚ್ಛೆ. ತನಗೆ ಹೇಗೆ ಬೇಕೋ ಹಾಗೆ ದೇವರನ್ನು ಕಲ್ಪಿಸಿಕೊಳ್ಳುವುದು, ನಿಂದಿಸುವುದು, ನಿರಾಕರಿಸುವುದು ಸಾಧ್ಯವಾಗಿದೆ. ಭಯದಲ್ಲಿ, ಸ್ವಾರ್ಥದಲ್ಲಿ ದೇವರನ್ನು ನಂಬುವವರಿಗಿಂತ ಬಯ್ಯುವವರೇ ದೇವರಿಗೆ ಹತ್ತಿರಾಗುತ್ತಾರೆ ಎಂದು ಆರೋಪಿಸುವುದೂ ಇದೆ. ದೇವರ ಪ್ರಾರ್ಥನೆ ಪೂಜೆ ನಮಾಜುಗಳೆಲ್ಲವೂ ಅನುತ್ಪಾದಕವಾದವು ಎಂದು ಹಂಗಿಸುವ ನಾಸ್ತಿಕರ ಜೀವನವಿಧಾನದ ಶುಷ್ಕತೆಯನ್ನು ದೇವರ ಇರುವನ್ನು ಸಂಭ್ರಮಿಸುವವರ ಸಂತೋಷದೊಂದಿಗೆ ಹೋಲಿಸಿ ನೋಡಿದರೆ ಸುಖವಾಗಿರುವುದರ ಅರ್ಥ ತಿಳಿಯುತ್ತದೆ.

ಹಾಗಾದರೆ ದೇವರ ಸ್ವರೂಪ ಹೇಗಿರಬಹುದು?

ಹಸುವೊಂದರ ಕೆಚ್ಚಲಿಗೆ ಗಾಯ ಮಾಡಿದರೆ ರಕ್ತ ಜಿನುಗುತ್ತದೆ. ಅದೇ ಕೆಚ್ಚಲನ್ನು ಹಿಂಡಿದರೆ ಹಾಲು ಬರುತ್ತದೆ. ಕೆಂಪಾದ ರಕ್ತ ಬೆಳ್ಳನೆಯ ಹಾಲಾಗುವ ಪರಿ ಅದ್ಭುತ. ನಿಜ ಭಕ್ತನಾದವನಿಗೆ ಮಾದಾರ ಚನ್ನಯ್ಯನ ಮನೆಯ ಅಂಬಲಿ ಕುಡಿಯುವ ಶಿವನು ಪ್ರತ್ಯಕ್ಷನಾಗುತ್ತಾನೆ. ಹಾಗೆಯೇ ಬಸವಣ್ಣನವರಿಗೆ ಶಿವಶರಣರಿಂದ ತುಂಬಿದ ಭೂಮಿ ಕೈಲಾಸವಾಗುತ್ತದೆ. ದೇವರನ್ನು ಸ್ಥಾವರ ಮಾಡಿಕೊಂಡು ನಾನಾ ಬಗೆಯ ಪೂಜೆಪುರಸ್ಕಾರ ನೈವೇದ್ಯ ಅರ್ಪಿಸಿದರೂ ಗ್ರಹಿಕೆಗೆ ಸಿಗದ ದೇವರನ್ನು ಎದೆಯೊಳಗೆ ಹಾಲಿನಂತೆ ನಿತ್ಯವೂ ಕಾಪಿಟ್ಟುಕೊಳ್ಳುವ ಕಲೆ ಭಕ್ತನಾದವನಿಗಿರಬೇಕು. ಬಸವಣ್ಣನವರು ಎನಗಿಂತ ಕಿರಿಯರಿಲ್ಲ ಎನ್ನುತ್ತಲೇ ಶಿವಭಕ್ತರಿಗಿಂತ ಹಿರಿಯರಿಲ್ಲ ಎಂದು ಹಿರಿಮೆ ಸಾರುವ ರೀತಿ ನಿಜಭಕ್ತರನ್ನು ಇತರರಿಗಿಂತ ಎತ್ತರದ ಸ್ಥಾನದಲ್ಲಿ ನಿಲ್ಲಿಸುತ್ತದೆ. ವಜ್ರವೈಢೂರ್ಯಗಳು ಅದ್ದೂರಿ ಆಡಂಬರಗಳು ಇದ್ದ ಕಡೆ ಭಕ್ತಿ ಇರುವುದು ಸಾಧ್ಯವಿಲ್ಲ. ಇನ್ನು ಕುಡಿದು ಕುಣಿದು ಕೇಕೆ ಹೊಡೆಯುವ ಸ್ಥಳದಲ್ಲಿ ದೇವರು ಸುಳಿಯುವುದೇ ಇಲ್ಲ. ಇಲ್ಲದ ದೇವರನ್ನು ಎಲ್ಲೆಲ್ಲೋ ಹುಡುಕುವ ಬದಲು ನಮ್ಮೊಳಗಿನ ಪ್ರಜ್ಞೆಯಲ್ಲಿ ಜೀವದಯೆಯನ್ನು ಇಳಿಸಿಕೊಳ್ಳಬೇಕು. ಮೊಗ್ಗು ಹೂವಾಗಿ, ಹೂವು ಕಾಯಾಗಿ, ಕಾಯಿ ಹಣ್ಣಾಗುವ ಗತಿಶೀಲತೆಯಲ್ಲಿ ನಾವು ಒಂದಾಗಬೇಕು. ❖

ಪದಬಂಧ 6379

ವಿದ್ಯಾ ವಿನಯ್



ಎಡದಿಂದ ಬಲಕ್ಕೆ
1.ಲೋಭನಿಗೆ ಆಸೆಯನ್ನು ಹುಟ್ಟಿಸುವುದು (4)
2.ಸಂಪ್ರದಾಯದೊಳಗೇ ರಂಪ ಕಾಣುತ್ತಿದೆಯಲ್ಲ! (4)
4.ಬೆಳದಿಂಗಳನ್ನು ಸೇವಿಸಿ ಜೀವಿಸುತ್ತದೆ ಎಂದು ನಂಬಲಾದ ಹಕ್ಕಿ (4)
7.ಮಂದಿಯ ಮನಸ್ಸು (4)
8.ಪಯಣದ ಕಾಲದಲ್ಲಿ ಹೂಡಿದ ಬಾಜಿ (2)
9.ಭವನದ ಹತ್ತಿರ ಬಲ್ಲವನೊಡನಿರುವ ಪತಿ (3)
10.ದಿಟ್ಟೆಯ ಬಾಹು! (2)
11.ಭರದಿಂದ ನೀಡಿರುವ ಆಶ್ವಾಸನೆ (4)
13.ಶಿರದ ರಕ್ಷಣೆಗಾಗಿ ಧರಿಸುವ ಟೊಪ್ಪಿಗೆ (4)
15.ಉಗುಳುವ ಪಾತ್ರೆ (4)
16.ಅವನ ಕೆಟ್ಟ ಗುಣ! (4)

ಮೇಲಿಂದ ಕೆಳಕ್ಕೆ
1.ಪಂಚರು ತೋರಿಸಿದ ಜಗತ್ತು (3)
3.ಶ್ರೇಷ್ಠ ಎಂದು ಹೀಗೆ ಹೇಳಿ! (3)
5.ಹಂತ ಹಂತವಾಗಿ ಎಂದು ಹೀಗೆನ್ನಿ (3)
6.ಖಡ್ಗದಿಂದ ಮಾಡುವ ಸಾಧನೆ (5)
7.ಈತ ಬಲು ಆಲಸಿ! (5)
10.ಹಳ್ಳಿಯವನವ ಗ್ರಹಚಾರವೇ ಉಲ್ಟಾ ಆಗಿಬಿಟ್ಟಿದೆ! (3)
12.ಕಾಪಾಡುವವನು ಇಲ್ಲಿದ್ದಾನೆ (3)
14.ಹಳೆಯ ಕಥೆಯಿದು (3)

6378ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ನಾಡಾಡಿ 3.ಭವಿಷ್ಯ
5.ಕ್ಷೇಮ 6.ಅಧಮ
7.ಮಹಾರಾಜ 8.ಸತ್ಯವಾನ
10.ತವಂಬಜಾಂ 11.ಚಾಡಿಕೋರ
13.ತಸ್ಕರ 14.ಭಾರ
15.ಅಗಸೆ 17.ಸ್ವಭಾವ

ಮೇಲಿಂದ ಕೆಳಕ್ಕೆ:
1.ಲಾಭ 2.ನಾಮ 4.ವಿರಹಾ
5.ಕ್ಷೇಮಸಮಾಚಾರ
6.ಅಜಗಜಾಂತರ 7.ಮಥಿತ
9.ನಶ್ವರ 12.ಕೋಡಗ
14.ಭಾವ 16.ಸೆಲೆ

ಸುಡೊಕು 6762

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

7				1	6		8	
		6			9	5		7
4			7				9	
	7			2	1			8
	6	4	9		8		7	
8		1				9		4
	8			9				
1		2		8		7		3
	4		1		7		2	

6761 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

20 ಏಪ್ರಿಲ್ 2026 ಸೋಮವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ತೃತೀಯ ಗಂ. 7-28 ನಂತರ ಚತುರ್ಥಿ 28-15 ನಕ್ಷತ್ರ: ರೋಹಿಣಿ ಗಂ. 26-09 ಯೋಗ: ಸೌಭಾಗ್ಯ ಗಂ. 16-11 ಕರಣ: ಗರ ಗಂ 7-28 ಮೇಷ ಮಾಸದ 07 ನೇ ದಿನ. ಮಳೆ ನಕ್ಷತ್ರ : ಅಶ್ವಿನಿ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 - 09-00 ಸೂರ್ಯೋದಯ : 06-18 ಸೂರ್ಯಾಸ್ತ : 06-41, ಮುಸ್ಲಿಂ ದಿನಾಂಕ : 1 ಜುಲ್ಕಾದಾ, ಅದೃಷ್ಟ ಸಂಖ್ಯೆ : 9, 1

ಮೇಷ: ಜಗತ್ತಿನ ಚಲನೆಯ ವೇಗಕ್ಕೆ ನಿಮ್ಮ ಚಲನವಲನಗಳು ಕಡಿಮೆಯಾಗಿರುವ ಅನುಭವ ಕಾಡಲಿದೆ. ಗೆಳೆಯರೊಂದಿಗೆ ಸಂತೋಷಕೂಟದಲ್ಲಿ ಪಾಲ್ಗೊಳ್ಳುವಿರಿ.

ವೃಷಭ: ಸಹೋದರರಲ್ಲಿ ಉಂಟಾದ ಸಮಸ್ಯೆ ವಿವಾದಕ್ಕೆ ಆಸ್ಪದವಾಗದಂತೆ ಬಗೆಹರಿಸಿಕೊಳ್ಳಿ. ವ್ಯವಹಾರಗಳನ್ನು ವಿಸ್ತರಿಸಿಕೊಳ್ಳುವಲ್ಲಿ ಸ್ನೇಹಿತರು ನೆರವಾಗಲಿದ್ದಾರೆ. ಹಣ ಸಂಜೆಯ ವೇಳೆಗೆ ಕೈ ಸೇರಲಿದೆ.

ಮಿಥುನ: ಅಕ್ಕಪಕ್ಕದವರ ಟೀಕೆಯನ್ನೂ ಶಾಂತ ಮನಸ್ಸಿನಿಂದ ಸ್ವೀಕರಿಸಿ. ನಿರೀಕ್ಷಿಸಿದ ಕಾರ್ಯಗಳು ನೆರವೇರಿ ಮನಸ್ಸಿಗೆ ನೆಮ್ಮದಿ ಉಂಟಾಗಲಿದೆ. ಜಮೀನಿನಲ್ಲಿ ವಿಷಜಂತುಗಳಿಂದ ಭಯಗೊಳ್ಳುವಿರಿ

ಕರ್ಕಾಟಕ: ಅನಿವಾರ್ಯದ ಸಮಯಕ್ಕೆ ಅಕ್ಕಪಕ್ಕದವರ ಸಹಾಯ ಸಿಕ್ಕುವುದರ ಪರಿಣಾಮ ಸುತ್ತಮುತ್ತಲಿನ ಜನರೊಂದಿಗೆ ಬೆರೆಯುವುದರ ಪ್ರಯೋಜನ ಅನುಭವಕ್ಕೆ ಬರಲಿದೆ. ಸಾಂಕ್ರಾಮಿಕ ರೋಗ ಕಾಡಲಿದೆ.

ಸಿಂಹ: ಇಂದು ಕೆಲಸಗಾರರಲ್ಲಿ ಬಹಳ ಶಾಂತ ರೀತಿಯಿಂದ ವರ್ತಿಸುವುದು ಅನಿವಾರ್ಯ. ಪೊಲೀಸ್ ವರಿಷ್ಠ ಅಧಿಕಾರಿಗಳಿಗೆ ಜವಾಬ್ದಾರಿ ಕಡಿಮೆಯಾಗುವುದು.

ಕನ್ಯಾ: ಸಾಂಸಾರಿಕವಾಗಿ ಮತ್ತು ಆರ್ಥಿಕವಾಗಿ ಇಷ್ಟಾರ್ಥ ಸಿದ್ಧಿಸುವುದು. ಸ್ವತಂತ್ರ ವೃತ್ತಿಯವರಿಗೆ ನಿರಂತರ ಆದಾಯ ತೋರಿಬಂದರೂ ಖರ್ಚು-ವೆಚ್ಚಗಳಲ್ಲಿ ಜಾಗ್ರತೆ ಇರಲಿ.

ತುಲಾ: ಕ್ರಿಯಾತ್ಮಕ ಯೋಚನೆಗಳೊಂದಿಗೆ ಸಂಪೂರ್ಣವಾಗಿ ಚಟುವಟಿಕೆಯಿಂದ ಇರುವಿರಿ. ಕಾನೂನು ನಿಯಮಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವುದು ಸರಿಯಲ್ಲ. ಸಹೋದ್ಯೋಗಿಗಳ ಸಹಕಾರ ಉತ್ತಮವಾಗಿರುವುದು.

ವೃಶ್ಚಿಕ: ನೈತಿಕ ಮೌಲ್ಯಗಳನ್ನು ಆಧರಿಸುವುದರಿಂದ ಸುಗಮವಾಗುವುದು. ಸಾಮಾಜಿಕವಾದ ಕೆಲಸಗಳಿಂದ ಕೌಟುಂಬಿಕವಾಗಿ ಸಮಯದ ಅಭಾವ ಉಂಟಾಗುವುದು. ಅಧಿಕಾರಿಗಳಿಗೆ ವರ್ಗಾವಣೆ ಸಂಭವವಿರುವುದು.


ಧನು: ಉದ್ಯೋಗದಲ್ಲಿ ಸ್ಥಿರತೆ ಮತ್ತು ಧನಾನುಕೂಲತೆ ಪ್ರಾಪ್ತಿ. ಸುಗಂಧ ಹಾಗೂ ಆಲಂಕಾರಿಕ ದ್ರವ್ಯಗಳ ಮಾರಾಟ ಲಾಭದಾಯಕ. ಉದ್ಯೋಗದ ವಿಸ್ತರಣೆ ವಿಷಯವಾಗಿ ಉತ್ತಮ ಆಲೋಚನೆಗಳು ಗರಿಗೆದರಲಿವೆ.

ಮಕರ: ಉದ್ಯೋಗದಲ್ಲಿ ಜವಾಬ್ದಾರಿಯುತ ಕಾರ್ಯವೈಖರಿಯಿಂದ ಗೌರವ ಪ್ರಾಪ್ತಿ. ಒದಗಿಬರಲಿರುವ ಅವಕಾಶಗಳನ್ನು ಕೈತಪ್ಪಿ ಹೋಗದಂತೆ ನೋಡಿಕೊಳ್ಳಿ. ಸಾಲದ ಹಣ ಹಿಂತಿರುಗಿಸುವ ಬಗ್ಗೆ ಗಮನವಿರಲಿ.

ಕುಂಭ: ಕಚೇರಿಯಲ್ಲಿ ಅರಿವಿಲ್ಲದ ವಿಚಾರಗಳಲ್ಲಿ ತಪ್ಪು ಮಾಡುವುದರ ಬದಲು ಸಹೋದ್ಯೋಗಿಗಳ ಸಹಕಾರ ಪಡೆಯಿರಿ. ನ್ಯಾಯವಾದಿಗಳಿಗೆ ವೃತ್ತಿಯಿಂದ ಆದಾಯ ಗಳಿಕೆ ಇರಲಿದೆ. ಕಟ್ಟಡ ನಿರ್ಮಾಣಗಾರರಿಗೆ ಕೆಲಸ ಇರುವುದು.

ಮೀನ: ಒಳ್ಳೆಯ ಯೋಚನಾಶಕ್ತಿ, ಒಳ್ಳೆಯ ಸಂಸ್ಕೃತಿಯನ್ನು ಪಡೆದಿರುವುದು ಉಪಯೋಗಕ್ಕೆ ಬರಲಿದೆ. ಅಲೆದಾಟದಿಂದ ದೇಹಾಯಾಸವಾದರೂ ಕಾರ್ಯಗಳು ಸಾಗಲಿವೆ. ದಾಂಪತ್ಯದಲ್ಲಿ ಸಮಸ್ಯೆ ಉಂಟಾಗದಂತೆ ಜಾಗ್ರತೆ ವಹಿಸಿ.

ಗುಂಡಣ್ಣ



ಶೀರ್ಷಿಕೆ ಗೀತೆ ಬಿಡುಗಡೆ



ಸಾಮಾಜಿಕ ಕಥಾಹಂದರ ಹೊಂದಿರುವ 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಿತ್ರದ ಶೀರ್ಷಿಕೆ ಗೀತೆ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಗೀತೆ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು. ಚಿತ್ರೀಕರಣ ಮುಗಿಸಿ ಬಿಡುಗಡೆ ಹಂತದಲ್ಲಿರುವ ಚಿತ್ರಕ್ಕೆ ಸಾತ್ವಿಕ್ ಪವನ್ ಕುಮಾರ್ ನಿರ್ದೇಶನವಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚಿತ್ರತಂಡ


ರಾಗಿಣಿ

'ಸಿನಿಮಾ ಎಂಬುದು ಬಹಳ ಪ್ರಭಾವಶಾಲಿ ಮಾಧ್ಯಮ. ಸಿನಿಮಾಗಳ ಮೂಲಕ ವಾಸ್ತವ ವಿಷಯಗಳನ್ನು ಬಹಳ ಬೇಗ ಜನರಿಗೆ ತಲುಪಿಸಬಹುದು. 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಸಿನಿಮಾ ವಾಸ್ತವ ಸ್ಥಿತಿಯನ್ನು ಹೇಳಲು ಹೊರಟಿರುವುದು ಶ್ಲಾಘನೀಯ. ಜನ ಸಾಮಾನ್ಯರು, ಬಡವರು ಹಸಿವಿನಿಂದ ಬಳಲಬಾರದು ಎಂಬ ಉದ್ದೇಶದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸರ್ಕಾರಿ ನ್ಯಾಯಬೆಲೆ ಅಂಗಡಿಗಳ ಮೂಲಕ ಪಡಿತರಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡುತ್ತಿವೆ. ಆದರೆ, ಈ ವ್ಯವಸ್ಥೆಯಲ್ಲಿರುವ ಕೆಲವು ಲೋಪಗಳಿಂದ ಇದರ ಉದ್ದೇಶ ಪರಿಣಾಮಕಾರಿಯಾಗಿ ಈಡೇರುತ್ತಿಲ್ಲ. ಈ ಬಗ್ಗೆ ಚಿತ್ರ ಜನ ಜಾಗೃತಿ ಮೂಡಿಸಿ, ಯಶಸ್ವಿಯಾಗಲಿ' ಎಂದರು ಸಿದ್ದರಾಮಯ್ಯ.

ಕುಮಾರ್ ಬಂಗಾರಪ್ಪ, ರಾಗಿಣಿ ದ್ವಿವೇದಿ, ದೊಡ್ಡಣ್ಣ ಮುಂತಾದವರು ಚಿತ್ರದ ಪ್ರಮುಖ ಪಾತ್ರದಲ್ಲಿದ್ದಾರೆ. 'ಶೀರ್ಷಿಕೆಯೇ ಹೇಳುವಂತೆ, ಇದು ಪಡಿತರ ವ್ಯವಸ್ಥೆಯ ಸುತ್ತ ನಡೆಯುವಂಥ ಕಥಾಹಂದರದ ಚಿತ್ರ. ಪಕ್ಕಾ ಗ್ರಾಮೀಣ ಸೊಗಡಿನ ಕಥೆಯನ್ನು ಹೊಂದಿದೆ. ಪೂರ್ತಿ ಚಿತ್ರೀಕರಣವನ್ನು ಮಂಡ್ಯ ಜಿಲ್ಲೆಯಲ್ಲೇ ನಡೆಸಿದ್ದೇವೆ. ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಪೂರ್ಣಗೊಂಡಿದ್ದು ಶೀಘ್ರದಲ್ಲಿಯೇ ಚಿತ್ರ ತೆರೆಗೆ ಬರಲಿದೆ' ಎಂದರು ನಿರ್ದೇಶಕ.

'ಜಯಶಂಕರ ಟಾಕೀಸ್' ಬ್ಯಾನರಿನಲ್ಲಿ ತೇಜು ಮೂರ್ತಿ ಮತ್ತು ಪದ್ಮಾವತಿ ಚಂದ್ರಶೇಖರ್ ಜಂಟಿಯಾಗಿ ನಿರ್ಮಾಣ ಮಾಡಿದ್ದಾರೆ. ಹಾಡುಗಳಿಗೆ ಅನಂತ್ ಆರ್ಯನ್ ಸಂಗೀತವಿದೆ. ಬಿ. ರಾಮಮೂರ್ತಿ ಕಥೆ, ಚಿತ್ರಕಥೆಯಿರುವ ಚಿತ್ರಕ್ಕೆ ನಿರ್ದೇಶಕರದ್ದೇ ಛಾಯ ಚಿತ್ರಗ್ರಹಣವಿದೆ.

ಹೊಂಬಾಳೆ ಫಿಲ್ಮ್ಸ್‌ನಿಂದ ಮಹಾವತಾರ ಪರಶುರಾಮ



ಹೊಂಬಾಳೆ ಫಿಲ್ಮ್ಸ್ 'ಮಹಾವತಾರ ಪರಶುರಾಮ' ಚಿತ್ರವನ್ನು ಘೋಷಿಸಿದೆ. 'ರಾಜಕುಮಾರ', 'ಕೆಜಿಎಫ್', 'ಕಾಂತಾರ', 'ಸಲಾರ್'ನಂಥ ಕಮರ್ಷಿಯಲ್ ಸಿನಿಮಾಗಳನ್ನು ನೀಡಿದ್ದ ಸಂಸ್ಥೆ ಈಗ ಅನಿಮೇಟೆಡ್ ಚಿತ್ರಗಳತ್ತ ಹೆಚ್ಚು ಒಲವು ತೋರುತ್ತಿದೆ.

ಸಂಸ್ಥೆ ಕಳೆದ ವರ್ಷ 'ಮಹಾವತಾರ ನರಸಿಂಹ' ಚಿತ್ರ ಬಿಡುಗಡೆ ಮಾಡಿತ್ತು. ಬಾಕ್ಸಾಫೀಸ್‌ನಲ್ಲಿ ಉತ್ತಮ ಪ್ರದರ್ಶನ ಕಂಡ ಚಿತ್ರ ಸುಮಾರು ₹300 ಕೋಟಿ ಗಳಿಕೆ ಕಂಡಿತ್ತು. ಅದರ ಬೆನ್ನಲ್ಲೇ ಈ ಸರಣಿಯನ್ನು ವಿಸ್ತರಿಸಲು ನಿರ್ಮಾಣ ಸಂಸ್ಥೆ ಮುಂದಾಗಿದೆ.

ಅಶ್ವಿನ್ ಕುಮಾರ್ ಅವರ ನಿರ್ದೇಶನದಲ್ಲಿ ಈ ಚಿತ್ರ ಮೂಡಿಬರಲಿದೆ. 'ಮಹಾವತಾರ ನರಸಿಂಹ' ಚಿತ್ರಕ್ಕೂ ಇವರದ್ದೇ ನಿರ್ದೇಶನವಿತ್ತು. ಕ್ಲೀಂ ಪ್ರೊಡಕ್ಷನ್ಸ್ ಸಹಯೋಗದೊಂದಿಗೆ ಈ ಪೌರಾಣಿಕ ಕಥೆ ತೆರೆಗೆ ಬರಲಿದೆ.

'ಸಂಸ್ಥೆ ರೂಪಿಸಿರುವ 'ಮಹಾವತಾರ ಸಿನಿಮ್ಯಾಟಿಕ್ ಯೂನಿವರ್ಸ್'ನ ಒಂದು ಪ್ರಮುಖ ಭಾಗವಿದು. ಅತ್ಯಾಧುನಿಕ ಅನಿಮೇಷನ್ ತಂತ್ರಜ್ಞಾನದ ಮೂಲಕ ನಮ್ಮ ಸಾಂಸ್ಕೃತಿಕ ಪರಂಪರೆಯ ದೃಶ್ಯ ವೈಭವವನ್ನು ತೆರೆಯ ಮೇಲೆ ತರುತ್ತೇವೆ' ಎಂದು ಹೊಂಬಾಳೆ ಫಿಲ್ಮ್ಸ್ ಪ್ರಕಟಣೆ ತಿಳಿಸಿದೆ.

'ಕಿಲಾಡಿ ಮೇಘ' ಶೀಘ್ರ ತೆರೆಗೆ

ಕಿಲಾಡಿ ಮಾಡುವ ಹುಡುಗಿಯ ಬದುಕಿನ ಕಥೆಯನ್ನು ಹೊಂದಿರುವ 'ಕಿಲಾಡಿ ಮೇಘ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಬಿ.ಟಿ. ಮಂಜುನಾಥ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಚಿತ್ರ ಶೀಘ್ರದಲ್ಲಿ ತೆರೆಗೆ ಬರಲಿದೆ.

'ಮನುಷ್ಯ ಹಣದ ಹಿಂದೆ ಹೋದಾಗ ಏನೆಲ್ಲ ಆಗುತ್ತದೆ ಎಂಬುದನ್ನು ಹಾರರ್ ಶೈಲಿಯಲ್ಲಿ ಹೇಳಿದ್ದೇನೆ. 'ಡ್ರಾಮಾ ಜೂನಿಯರ್ಸ್' ಖ್ಯಾತಿಯ ಮಹಾಲಕ್ಷ್ಮಿ ಈ ಚಿತ್ರದ ನಾಯಕಿ. ಆಕೆ ಮೇಘಳ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಟ ಶಂಕರ್ ಅಶ್ವಥ್ ದೈವಾರಾಧಕನ ಪಾತ್ರ ನಿರ್ವಹಿಸಿದ್ದಾರೆ. ಹದಿಮೂರು ವರ್ಷದ ಹುಡುಗಿಯ ಸುತ್ತ ನಡೆಯುವ ಕಥೆಯಿದು.



ಮೊದಲು ಈ ಚಿತ್ರವನ್ನು ರಾಜೇಶ್ ರಾಜ ಅವರು ಆರಂಭಿಸಿದ್ದರು. ಕಾರಣಾಂತರಗಳಿಂದ ಅವರಿಗೆ ಚಿತ್ರವನ್ನು ಪೂರ್ತಿ ಮಾಡಲು ಸಾಧ್ಯವಾಗಲಿಲ್ಲ. ನಂತರ ನಾನು ಚಿತ್ರವನ್ನು ಕೈಗೆತ್ತಿಕೊಂಡು ಬಿಡುಗಡೆ ಹಂತಕ್ಕೆ ತಂದಿದ್ದೇನೆ' ಎಂದರು ನಿರ್ದೇಶಕ.

ಸುಲೋಚನಾ ಪ್ರೊಡಕ್ಷನ್ಸ್ ಮೂಲಕ ಸುಲೋಚನಾ ಸುಕುಮಾರ್ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. 'ನಾನು ನಿಜವಾಗಿಯೂ ಅನುಭವಿಸಿ ಮಾಡಿದಂಥ ಪಾತ್ರವಿದು. ಯಾವುದೋ ಒಂದು ಜೀವ ತುಡಿತಕ್ಕೆ ಒಳಗಾಗಿರುತ್ತದೆ. ಅದನ್ನು ರಕ್ಷಣೆ ಮಾಡಲು ನಾನು ಬರುತ್ತೇನೆ' ಎಂದರು ಶಂಕರ್ ಅಶ್ವಥ್.

ಚಿತ್ರಕ್ಕೆ ಕೆ.ಎಂ.ಇಂದ್ರ ಸಂಗೀತವಿದೆ.

ಚಿತ್ರದ ಪೋಸ್ಟರ್



ದೇವರಕೊಂಡ ಹೊಸ ಚಿತ್ರ

ತೆಲುಗು ನಟ ವಿಜಯ್ ದೇವರಕೊಂಡ ಹೊಸ ಚಿತ್ರ ಘೋಷಿಸಿದ್ದಾರೆ. ಇನ್ನೂ ಹೆಸರಿಡದ ಚಿತ್ರಕ್ಕೆ ಶೌರ್ಯ ಆ್ಯಕ್ಷನ್ ಕಟ್ ಹೇಳಲಿದ್ದಾರೆ. ಇವರು ಈ ಹಿಂದೆ ನಾನಿ ಅಭಿನಯದ 'ಹಾಯ್ ನಾನ್ನ' ಚಿತ್ರ ನಿರ್ದೇಶಿಸಿದ್ದರು.

ಚಿತ್ರದ ಫಸ್ಟ್‌ಲುಕ್ ಪೋಸ್ಟರ್ ಅನ್ನು ವಿಜಯ್ ದೇವರಕೊಂಡ ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ಹಂಚಿಕೊಂಡಿದ್ದಾರೆ. 'VDxShouryuv' ಎಂದು ಚಿತ್ರಕ್ಕೆ ತಾತ್ಕಾಲಿಕವಾಗಿ ಶೀರ್ಷಿಕೆ ಇಡಲಾಗಿದೆ. ಅಂತರರಾಷ್ಟ್ರೀಯ ತಂತ್ರಜ್ಞರಿಂದ ಈ ಚಿತ್ರ ಗಮನ ಸೆಳೆದಿದೆ. 'ಹೌಸ್ ಆಫ್ ದಿ ಡ್ರ್ಯಾಗನ್' ಮತ್ತು 'ಫಾಲ್‌ಔಟ್'ನಂತಹ ಹಾಲಿವುಡ್ ಚಿತ್ರಗಳಿಗೆ ಛಾಯಾಚಿತ್ರಗ್ರಾಹಕರಾಗಿದ್ದ ಅಲೆಜಾಂಡ್ರೊ ಮಾರ್ಟಿನೆಜ್ ಈ ತಂಡದಲ್ಲಿದ್ದಾರೆ. 'ಗಾಡ್ಸ್ ಆಫ್ ಈಜಿಪ್ಟ್', 'ಬ್ಯಾಟ್‌ಮ್ಯಾನ್ ಫಾರೆವರ್' ಚಿತ್ರಗಳ ವಿಎಫ್‌ಎಕ್ಸ್ ಮೇಲ್ವಿಚಾರಕ ಎರಿಕ್ ಡಸ್ಟರ್ ಸೇರಿದಂತೆ ಜಾಗತಿಕ ತಂತ್ರಜ್ಞರು ಈ ಚಿತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. 'ಅನಿಮಲ್' ಮತ್ತು 'ಓಂ ಶಾಂತಿ ಓಂ'ನಂತಹ ಚಿತ್ರಗಳಿಗೆ ಕೆಲಸ ಮಾಡಿರುವ ಸುರೇಶ್ ಸೆಲ್ವರಾಜನ್ ಈ ಚಿತ್ರದ ನಿರ್ಮಾಣ ವಿನ್ಯಾಸಕರಾಗಿದ್ದಾರೆ.

ವೀರಾ ಸಂಸ್ಥೆ ಬಂಡವಾಳ ಹೂಡುತ್ತಿದೆ. ಪೋಸ್ಟರ್‌ನಲ್ಲಿ ವಿಜಯ್ ದೇವರಕೊಂಡ ಅವರು ನಾಲ್ಕು ಶ್ವಾನಗಳನ್ನು ಹಿಡಿದು ಬರುತ್ತಿದ್ದಾರೆ. ಅವರ ಹಿಂದೆ ಏಳು ಜನರು ವಿವಿಧ ರೀತಿಯ ಆಯುಧಗಳನ್ನು ಹಿಡಿದಿದ್ದಾರೆ. 'ಈಗ ನೀವು ನೋಡುತ್ತಿರುವ ಸಿಟ್ಟು ಒಂದು ಕಾಲದಲ್ಲಿ ಪ್ರೀತಿ ಆಗಿತ್ತು' ಎಂಬ ಸಾಲು ಗಮನ ಸೆಳೆದಿದೆ.

ಅನೇಕ ಸೂಪರ್ ಹಿಟ್ ಹಾಡುಗಳನ್ನು ನೀಡಿರುವ ಹೇಷಮ್ ಅಬ್ದುಲ್ ವಹಾಬ್ ಈ ಚಿತ್ರಕ್ಕೆ ಸಂಗೀತ ನೀಡುತ್ತಿದ್ದಾರೆ. ಮೃಣಾಲ್ ಠಾಕೂರ್ ಈ ಚಿತ್ರದ ನಾಯಕಿ ಎಂಬ ವಂದತಿಯೂ ಇದೆ. ಆದರೆ ಈ ಬಗ್ಗೆ ಚಿತ್ರತಂಡ ಖಚಿತ ಮಾಹಿತಿ ನೀಡಿಲ್ಲ.

ಕಥೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಬಹಿರಂಗಪಡಿಸದಿದ್ದರೂ ಪೋಸ್ಟರ್‌ನಿಂದ ಸಿನಿಮಾ ಗಂಭೀರ ಮತ್ತು ಆ್ಯಕ್ಷನ್ ಆಧಾರಿತ ಎಂಬುದು ಗೊತ್ತಾಗುತ್ತಿದೆ. ಸದ್ಯ ವಿಜಯ್ ದೇವರಕೊಂಡ ಬಳಿ ಕೆಲ ಸಿನಿಮಾಗಳಿವೆ. ಪತ್ನಿ ರಶ್ಮಿಕಾ ಜತೆ 'ರಣಬಾಲಿ' ಚಿತ್ರದಲ್ಲಿ ನಟಿಸುತ್ತಿದ್ದಾರೆ. ಈ ಚಿತ್ರದ ಚಿತ್ರೀಕರಣ ಪ್ರಗತಿಯಲ್ಲಿದೆ. ಇದಲ್ಲದೇ 'ರೌಡಿ ಜನಾರ್ಧನ' ಚಿತ್ರದಲ್ಲಿಯೂ ದೇವರಕೊಂಡ ತಮ್ಮ ಪತ್ನಿಯ ಜತೆ ಕಾಣಿಸಿಕೊಳ್ಳುತ್ತಿದ್ದಾರೆ. ಈ ಸಿನಿಮಾಗಳು ಮುಗಿದ ಬಳಿಕ ಶೌರ್ಯ ಜತೆಗಿನ ಸಿನಿಮಾ ಸೆಟ್ಟೇರುವ ನಿರೀಕ್ಷೆಯಿದೆ.

'ಬಂಗಾಳದ ಸಂಸ್ಕೃತಿಗೆ ಟಿಎಂಸಿ ಕಂಟಕ'

ನುಸುಳುಕೋರರಿಗೆ ಅವಕಾಶ, ಬುಡಕಟ್ಟು ಅಭಿವೃದ್ಧಿ ನಿರ್ಲಕ್ಷ್ಯ: ಪ್ರಧಾನಿ ಆರೋಪ

ಪುರುಲಿಯಾ (ಪಿಟಿಐ): 'ನುಸುಳುಕೋರರಿಗೆ ನೆಲೆ ಕಲ್ಪಿಸುವ ಮೂಲಕ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಶ್ಚಿಮ ಬಂಗಾಳದ ಭಾಷೆ ಮತ್ತು ಸಂಸ್ಕೃತಿಯನ್ನು ಬದಲಾಯಿಸುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದರು.

ಇಲ್ಲಿಗೆ ಸಮೀಪದ ಜಂಗಲ್‌ಮಹಲ್‌ನಲ್ಲಿ ನಡೆದ ಚುನಾವಣಾ ಪ್ರಚಾರ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು 'ಮಹಾ ಜಂಗಲ್‌ರಾಜ್'ನ ಅಧ್ಯಕ್ಷತೆ ವಹಿಸಿದ್ದು, ಅವರ ಸರ್ಕಾರವು ಬುಡಕಟ್ಟು ವಿರೋಧಿಯಾಗಿದೆ' ಎಂದರು.

'ಟಿಎಂಸಿಯ ಅಧಿಕಾರಶಾಹಿ ಗುಂಪು ಬುಡಕಟ್ಟು ಜನರ ಜಮೀನು ಕಸಿದುಕೊಂಡಿದೆ. ಭ್ರಷ್ಟಾಚಾರ ಮತ್ತು ದುರಾಡಳಿತದ ಮೂಲಕ ಅವರು ವಾಸಿಸುವ ಪ್ರದೇಶದ ಅಭಿವೃದ್ಧಿಯನ್ನು ನಿರ್ಲಕ್ಷಿಸಿದೆ. ಒಳನುಸುಳುವಿಕೆ ಹೆಚ್ಚಿರುವುದರಿಂದ ಬಂಗಾಳದ ಸಂತಾಲಿ ಭಾಷೆ ಮತ್ತು ಬುಡಕಟ್ಟು ಅಸ್ಮಿತೆಗೆ ಕುತ್ತು ಎದುರಾಗಿದೆ' ಎಂದರು.

'ಟಿಎಂಸಿಯ ನಿರ್ದಯಿ ಸರ್ಕಾರವು ಜನರನ್ನು ಸುಲಿಗೆ ಮಾಡುವುದರಲ್ಲಿ ನಿರತವಾಗಿದೆಯೇ ಹೊರತು ಅಭಿವೃದ್ಧಿಗೆ ಗಮನ ಹರಿಸಿಲ್ಲ. ಬಜೆಟ್‌ನಲ್ಲಿ ಮದರಸಾಗಳ ಅಭಿವೃದ್ಧಿಗಷ್ಟೇ ದಾಖಲೆ ಪ್ರಮಾಣದಲ್ಲಿ ಅನುದಾನ ಮೀಸಲಿಡಲಾಗಿದೆ. ಪುರುಲಿಯಾ, ಬಂಕುರಾ ಮತ್ತು ಜಾರ್‌ಗ್ರಾಮ್ ಪ್ರದೇಶಗಳ ಬುಡಕಟ್ಟು ಜನರಿಗೆ ಭಯ ಮತ್ತು ಸುಲಿಗೆಯಿಂದ ಸ್ವಾತಂತ್ರ್ಯ ಬೇಕಿದ್ದು, ಅವರು ಬಿಜೆಪಿಯತ್ತ ಹೊರಳುತ್ತಿದ್ದಾರೆ. ಬಂಗಾಳದಲ್ಲಿ 'ಬದಲಾವಣೆ ಬೇಕಿದೆ' ಎಂಬ ಕೂಗು ಹೆಚ್ಚುತ್ತಿದೆ' ಎಂದು ಪ್ರಧಾನಿ ಹೇಳಿದರು.

ಮಹಿಳಾ ಮೀಸಲು ಕಾನೂನಿಗೆ ತಿದ್ದುಪಡಿ ಮಾಡುವ ಸಂವಿಧಾನ (131ನೇ ತಿದ್ದುಪಡಿ) ಮಸೂದೆ–2026 ಅಂಗೀಕಾರಗೊಳ್ಳುವುದನ್ನು ತಡೆಯುವ ಮೂಲಕ ಟಿಎಂಸಿ ಮಹಿಳೆಯರಿಗೆ ದ್ರೋಹ ಮಾಡಿದೆ. ವಿಧಾನಸಭಾ ಚುನಾವಣೆಯಲ್ಲಿ ಮಹಿಳೆಯರು ಅವರಿಗೆ ತಕ್ಕ ಪಾಠ ಕಲಿಸುತ್ತಾರೆ ಎಂದು ಪ್ರಧಾನಿ ಬಂಕುರಾ ಜಿಲ್ಲೆಯ ವಿಷ್ಣುಪುರದಲ್ಲಿ ನಡೆದ ರ‍್ಯಾಲಿಯಲ್ಲಿ ಮೋದಿ ವಾಗ್ದಾಳಿ ನಡೆಸಿದರು.



ಪಶ್ಚಿಮ ಬಂಗಾಳದ ಪುರುಲಿಯಾದಲ್ಲಿ ಭಾನುವಾರ ನಡೆದ ಬಿಜೆಪಿಯ ವಿಜಯ ಸಂಕಲ್ಪ ಸಮಾವೇಶದಲ್ಲಿ ಪಕ್ಷದ ನಾಯಕರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಉಡುಗೊರೆಯನ್ನು ನೀಡಿದರು ಪಿಟಿಐ ಚಿತ್ರ

ಗುರಾಣಿಯಾಗಿ ಮಹಿಳೆಯರ ಬಳಕೆ: ಮಮತಾ ಬ್ಯಾನರ್ಜಿ

ಕೋಲ್ಕತ್ತಾ (ಪಿಟಿಐ): 'ದೇಶವನ್ನು ದಾರಿ ತಪ್ಪಿಸಲು ಪ್ರಧಾನಿ ಅವರು ಮಹಿಳಾ ಮೀಸಲು ಮಸೂದೆಯನ್ನು ಆಯ್ಕೆ ಮಾಡಿಕೊಂಡಿದ್ದು ತೀವ್ರ ದುರದೃಷ್ಟಕರ' ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಟೀಕಿಸಿದ್ದಾರೆ.

'ಮಹಿಳಾ ಮೀಸಲಾತಿ ಕಾನೂನು ಜಾರಿ ಹೆಸರಿನಲ್ಲಿ ಕ್ಷೇತ್ರ ಪುನರ್ ವಿಂಗಡಣೆ ವಿಚಾರವನ್ನು ಪ್ರಸ್ತಾಪಿಸುವ ಮೂಲಕ ಕೇಂದ್ರ ಸರ್ಕಾರ ಮಹಿಳೆಯರನ್ನು ಗುರಾಣಿಯಂತೆ ಬಳಸಿದೆ' ಎಂದು ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮಸೂದೆಗೆ ಸೋಲಾಗುತ್ತಿದ್ದಂತೆ ವಾಗ್ದಾಳಿ ನಡೆಸಿದ್ದ ಪ್ರಧಾನಿ, 'ಭ್ರೂಣಹತ್ಯೆಯ ಪಾಪ'ಕ್ಕಾಗಿ ದೇಶದ ಮಹಿಳೆಯರು ಕಾಂಗ್ರೆಸ್ ಮತ್ತು ಮಿತ್ರಪಕ್ಷಗಳನ್ನು ಕಠಿಣವಾಗಿ ಶಿಕ್ಷಿಸಲಿದ್ದಾರೆ' ಎಂದಿದ್ದರು.

ಇದಕ್ಕೆ ತಿರುಗೇಟು ನೀಡಿರುವ ಮಮತಾ, 'ಮಹಿಳಾ ಮೀಸಲಾತಿ ಮಸೂದೆ ಕುರಿತು ಪ್ರಧಾನಿಯೇ ಸುಳ್ಳು ಹೇಳಿ ದೇಶದ ಜನರ ದಿಕ್ಕು ತಪ್ಪಿಸುತ್ತಿದ್ದಾರೆ. ತೃಣಮೂಲ ಕಾಂಗ್ರೆಸ್ ಯಾವತ್ತೂ ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ಕಲ್ಪಿಸುತ್ತಾ ಬಂದಿದೆ. ಲೋಕಸಭೆಯಲ್ಲಿ ಟಿಎಂಸಿ ಸದಸ್ಯರಲ್ಲಿ ಮಹಿಳೆಯರು ಶೇ 37.9ರಷ್ಟಿದ್ದರೆ, ರಾಜ್ಯಸಭೆಯಲ್ಲಿ ಶೇ 46ರಷ್ಟಿದ್ದಾರೆ. ಬಿಜೆಪಿಯು ತನ್ನ ಸ್ಥಾಪಿತ ರಾಜಕೀಯ ಕಾರ್ಯಸೂಚಿಗೆ ಗುರಾಣಿಯಾಗಿ ಮಹಿಳೆಯರನ್ನು ಬಳಸಿಕೊಳ್ಳಲಾಗುತ್ತಿದೆ' ಎಂದು ಆರೋಪಿಸಿದ್ದಾರೆ.

ನ್ಯಾಯ ಖಚಿತ ಪಡಿಸುತ್ತೇವೆ– ಶಾ

ಈರೋಡ್/ತಮಿಳುನಾಡು (ಪಿಟಿಐ): 'ಮಹಿಳಾ ಮೀಸಲಾತಿ ಮಸೂದೆ ವಿರುದ್ಧ ಮತ ಚಲಾಯಿಸುವ ಮೂಲಕ ಕಾಂಗ್ರೆಸ್ ಮತ್ತು ಡಿಎಂಕೆ ಮಹಿಳೆಯರನ್ನು ವಂಚಿಸಿವೆ. ಆದರೆ, ಬಿಜೆಪಿ ಮಹಿಳೆಯರಿಗೆ ನ್ಯಾಯವನ್ನು ಖಚಿತಪಡಿಸುತ್ತದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಈರೋಡ್ ಜಿಲ್ಲೆಯ ಮೊದಕುರುಚಿ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಪರವಾಗಿ ಅವರು ಮತಯಾಚನೆ ಮಾಡಿದರು.

'ತಮಿಳುನಾಡಿನಲ್ಲಿ ಎಐಎಡಿಎಂಕೆ ಮುಖಂಡ ಇ.ಕೆ ಪಳನಿಸ್ವಾಮಿ ನೇತೃತ್ವದಲ್ಲಿ ಎನ್‌ಡಿಎ ಸರ್ಕಾರ ರಚಿಸಲಿದೆ' ಎಂದು ಮೊದಕುರುಚಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕಾರ್ತಿಕಾ ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಡಿಎಂಕೆಯ ವಂಶಪಾರಂಪರ್ಯ ರಾಜಕಾರಣವನ್ನು ಟೀಕಿಸಿದ ಅಮಿತ್ ಶಾ, 'ಮುಖ್ಯಮಂತ್ರಿ ಸ್ಟಾಲಿನ್ ಅವರು ತಮ್ಮ ಪುತ್ರ ಉದಯನಿಧಿಯನ್ನು ಮುಖ್ಯಮಂತ್ರಿ ಕುರ್ಚಿಯಲ್ಲಿ ಕೂರಿಸಲು ಪ್ರಯತ್ನಿಸುತ್ತಿದ್ದಾರೆ. ಕುಟುಂಬ ರಾಜಕಾರಣ ಪ್ರಜಾಪ್ರಭುತ್ವಕ್ಕೆ ಒಳ್ಳೆಯದಲ್ಲ' ಎಂದರು.

ಇ.ಡಿ ಒತ್ತಡಕ್ಕೆ ಮಣಿದ ರಾಜಕೀಯ ಸಲಹಾ ಸಂಸ್ಥೆ

ಕೆಲಸ ನಿಲ್ಲಿಸಿದ ಐ– ಪ್ಯಾಕ್

ಪ್ರಜಾವಾಣಿ ವಾರ್ತೆ

ನವದೆಹಲಿ: ಜಾರಿ ನಿರ್ದೇಶನಾಲಯದ (ಇ.ಡಿ) ಒತ್ತಡದಿಂದಾಗಿ ರಾಜಕೀಯ ಸಲಹಾ ಸಂಸ್ಥೆ ಐ– ಪ್ಯಾಕ್, ಪಶ್ಚಿಮ ಬಂಗಾಳದಲ್ಲಿ ತನ್ನ ಕೆಲಸ ಸ್ಥಗಿತಗೊಳಿಸಿದೆ ಎಂಬುದು ಗೊತ್ತಾಗಿದೆ.

ವಿಧಾನಸಭಾ ಚುನಾವಣೆಯ ಮತದಾನಕ್ಕೆ (ಏ. 23, 29) ಬೆರಳೆಣಿಕೆ ದಿನ ಬಾಕಿ ಉಳಿದಿರುವಾಗ ಐ– ಪ್ಯಾಕ್ ತನ್ನ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದು, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ದೊಡ್ಡ ಪೆಟ್ಟು ಬಿದ್ದಂತಾಗಿದೆ.

ಪಶ್ಚಿಮ ಬಂಗಾಳದಲ್ಲಿ ಕೆಲಸ ಮಾಡುತ್ತಿರುವ ತನ್ನ ಸಿಬ್ಬಂದಿಗೆ 20 ದಿನ ಕಡ್ಡಾಯ ರಜೆಯನ್ನು ಪಡೆಯುವಂತೆ ಐ– ಪ್ಯಾಕ್‌ನ ಮಾನವ ಸಂಪನ್ಮೂಲ ವಿಭಾಗ ತಿಳಿಸಿದ್ದು, ಮೇ 11ರ ನಂತರ ಪರಿಸ್ಥಿತಿಯನ್ನು ಪರಿಶೀಲಿಸುವುದಾಗಿ ಹೇಳಿದೆ ಎಂಬುದು ಮೂಲಗಳಿಂದ 'ಪ್ರಜಾವಾಣಿ'ಗೆ ಖಚಿತಪಟ್ಟಿದೆ.

ಬಂಗಾಳದ ಚುನಾವಣಾ ಅಖಾಡವು ಜಿದ್ದಾಜಿದ್ದಿಯಿಂದ ಕೂಡಿದೆ. ಅಧಿಕಾರದ ಚುಕ್ಕಾಣಿ ಹಿಡಿಯಲಿಕ್ಕಾಗಿ ಬಿಜೆಪಿ ಹಾಗೂ ಟಿಎಂಸಿ ನಡುವೆ ನೇರ ಹಣಾಹಣಿ ನಡೆದಿದೆ. ಭಾರತೀಯ ರಾಜಕೀಯ ಕ್ರಿಯಾ ಸಮಿತಿಯು (ಐ– ಪಿಎಸಿ, ಐ–ಪ್ಯಾಕ್) ಹಲವು ವರ್ಷಗಳಿಂದಲೂ ಮಮತಾ ಬ್ಯಾನರ್ಜಿ ಅವರಿಗೆ ರಾಜಕೀಯ ಸಲಹೆಗಳನ್ನು ನೀಡುತ್ತಿದೆ.



ಐ–ಪ್ಯಾಕ್ ಮುಖ್ಯಸ್ಥ ಪ್ರತೀಕ್ ಜೈನ್ ಅವರ ನಿವಾಸದ ಮೇಲೆ 2026ರ ಜ.8ರಂದು ಇ.ಡಿ ದಾಳಿ ನಡೆಸಿದ ಸಂದರ್ಭ, ಮನೆಯಲ್ಲಿದ್ದ ಕಡತಗಳನ್ನು ತಂದಿದ್ದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ (ಪಿಟಿಐ ಸಂಗ್ರಹ ಚಿತ್ರ)

ವಿಧಾನಸಭಾ ಚುನಾವಣೆಗೂ ಮುನ್ನವೇ ಐ– ಪ್ಯಾಕ್‌ಗೆ ಸಂಬಂಧಿಸಿದ ಕೆಲ ಸ್ಥಳಗಳಲ್ಲಿ ಇ.ಡಿ ಶೋಧ ಕೈಗೊಂಡಿತ್ತು.

ಪಶ್ಚಿಮ ಬಂಗಾಳದಲ್ಲಿ ಕಲ್ಲಿದ್ದಲು ಕಳ್ಳಸಾಗಣೆ ಹಾಗೂ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ತಿಂಗಳ ಆರಂಭದಲ್ಲಿ ಕೇಂದ್ರ ತನಿಖಾ ಸಂಸ್ಥೆಯು ಬೆಂಗಳೂರು, ಹೈದರಾಬಾದ್ ಮತ್ತು ದೆಹಲಿಯಲ್ಲಿ ಶೋಧ ನಡೆಸಿತ್ತು.

ಐ– ಪ್ಯಾಕ್ ಸಹ ಸಂಸ್ಥಾಪಕ, ನಿರ್ದೇಶಕ ರಿಷಿ ರಾಜ್ ಸಿಂಗ್ ಅವರಿಗೆ ಸಂಬಂಧಿಸಿದ ಸ್ಥಳಗಳಲ್ಲೂ ಶೋಧ ನಡೆದಿತ್ತು. ಸೋಮವಾರ ವಿಚಾರಣೆಗೆ ಹಾಜರಾಗುವಂತೆ ಇ.ಡಿ ಸಮನ್ಸ್ ನೀಡಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಐ– ಪ್ಯಾಕ್ ನಿರ್ದೇಶಕ ಹಾಗೂ ಸಹ ಸಂಸ್ಥಾಪಕ ವಿನೇಶ್ ಚಂದೇಲ್ ಅವರನ್ನು ಈಚೆಗೆ ಬಂಧಿಸಲಾಗಿತ್ತು.

ಐ–ಪ್ಯಾಕ್ ಮುಖ್ಯಸ್ಥ ಪ್ರತೀಕ್ ಜೈನ್ ಅವರ ಕೋಲ್ಕತ್ತ ನಿವಾಸದಲ್ಲಿ ಕಳೆದ ಜನವರಿಯಲ್ಲಿ ಇ.ಡಿ ಶೋಧ ನಡೆಸಿತ್ತು. ಕಾರ್ಯಾಚರಣೆ ನಡೆಯುತ್ತಿದ್ದಾಗಲೇ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸ್ಥಳಕ್ಕೆ ತೆರಳಿ ಕೆಲವು ಕಡತಗಳು ಹಾಗೂ ಲ್ಯಾಪ್‌ಟಾಪ್ ಕೊಂಡೊಯ್ದಿದ್ದರು.

ಸಿಇಸಿ ಪದಚ್ಯುತಿಗೆ ಹೊಸ ನೋಟಿಸ್?

ನವದೆಹಲಿ (ಪಿಟಿಐ): ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ಪದಚ್ಯುತಿ ಪ್ರಕ್ರಿಯೆ ಆರಂಭಿಸುವಂತೆ ಕೋರಿ ಸಂಸತ್ತಿನಲ್ಲಿ ಹೊಸದಾಗಿ ನೋಟಿಸ್ ಸಲ್ಲಿಸಲು ವಿರೋಧ ಪಕ್ಷಗಳು ಚಿಂತಿಸಿವೆ.

ಈ ಹಿಂದಿನ ನೋಟಿಸ್ ತಿರಸ್ಕೃತಗೊಂಡಿದ್ದರಿಂದ, ವಿರೋಧ ಪಕ್ಷಗಳ ಹಲವು ಮುಖಂಡರು ಈ ಕುರಿತಂತೆ ಮಾತುಕತೆ ನಡೆಸಿದ್ದಾರೆ ಎಂದು ಮೂಲಗಳು ಶನಿವಾರ ತಿಳಿಸಿವೆ.

ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ಸಮಾಜವಾದಿ ಪಕ್ಷ ಹಾಗೂ ಡಿಎಂಕೆ ಸೇರಿದಂತೆ ವಿವಿಧ ಪಕ್ಷಗಳ ಕನಿಷ್ಠ ಐವರು ಸಂಸದರು ಸಿಇಸಿ ಪದಚ್ಯುತಿ ಪ್ರಕ್ರಿಯೆ ಆರಂಭಿಸಲು ಹೊಸದಾಗಿ ನೋಟಿಸ್ ನೀಡುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದಾರೆ ಎನ್ನಲಾಗಿದೆ.

ಪದಚ್ಯುತಿ ನೋಟಿಸ್ ಅನ್ನು ಲೋಕಸಭೆ ಅಥವಾ ರಾಜ್ಯಸಭೆಯ ಪೈಕಿ ಒಂದು ಸದನದಲ್ಲಿ ಸಲ್ಲಿಸಬೇಕೋ, ಇಲ್ಲವೇ ಈ ಹಿಂದಿನ ಬಾರಿಯಂತೆ ಎರಡೂ ಸದನಗಳಲ್ಲಿ ಸಲ್ಲಿಸಬೇಕೋ ಎಂಬುದನ್ನು ಇನ್ನೂ ನಿರ್ಧರಿಸಿಲ್ಲ ಎಂಬುದು ಗೊತ್ತಾಗಿದೆ.

ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವಾಗ ದೇಶವನ್ನುದ್ದೇಶಿಸಿ ಪ್ರಧಾನಿ ಮೋದಿ ಭಾಷಣ ಮಾಡಿದ್ದು ಸರಿಯೇ?

ಸರಿ | ತಪ್ಪು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

'ಮಹಿಳಾ ಮೀಸಲು: ಜಾರಿ ತಡೆಯಲಾಗದು'

ವಾಸುದೇವನಲ್ಲೂರು (ತಮಿಳುನಾಡು): ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಕಾಯ್ದೆ ತಿದ್ದುಪಡಿ ಮಸೂದೆಯ ಸೋಲಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ಮತ್ತು ಡಿಎಂಕೆ ವಿರುದ್ಧ ಹರಿಹಾಯ್ದ ರಕ್ಷಣಾ ಸಚಿವ ರಾಜನಾಥ್ ಸಿಂಗ್, 'ಸರ್ಕಾರ ಈ ಮಸೂದೆಯನ್ನು ಜಾರಿಗೆ ತಂದೇ ತರುತ್ತದೆ. ಜಗತ್ತಿನಲ್ಲಿ ಯಾವುದೇ ಶಕ್ತಿಯೂ ಮಸೂದೆ ಜಾರಿಯನ್ನು ತಡೆಯಲು ಸಾಧ್ಯವಿಲ್ಲ' ಎಂದು ಹೇಳಿದರು.

ತೆಂಕಾಸಿ ಜಿಲ್ಲೆಯಲ್ಲಿ ಬಿಜೆಪಿ ಅಭ್ಯರ್ಥಿ ಅನಂತನ್ ಅಯ್ಯಸ್ವಾಮಿ ಪರ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ಜನರು ಈ ಬಾರಿಯ ಚುನಾವಣೆಯಲ್ಲಿ ಡಿಎಂಕೆ ಪಕ್ಷಕ್ಕೆ ವಿದಾಯ ಹೇಳಬೇಕು' ಎಂದು ಒತ್ತಾಯಿಸಿದರು.

ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಆಡಳಿತಾರೂಢ ಡಿಎಂಕೆ ವಿರುದ್ಧ ವಾಗ್ದಾಳಿ ನಡೆಸಿದ ಸಿಂಗ್, 'ತಮಿಳುನಾಡಿನ ಕೆಲವು ಸಚಿವರು ಜಾರಿ ನಿರ್ದೇಶನಾಲಯ (ಇ.ಡಿ) ದಂತಹ ಕೇಂದ್ರ ತನಿಖಾ ಸಂಸ್ಥೆಗಳ ಕಣ್ಗಾವಲಿನಲ್ಲಿದ್ದಾರೆ. ತಮಿಳುನಾಡಿನಲ್ಲಿ ಭ್ರಷ್ಟಾಚಾರ ಎಷ್ಟು ಆಳವಾಗಿ ಬೇರೂರಿದೆ ಎನ್ನುವುದಕ್ಕೆ 'ಟಾಸ್‌ಮ್ಯಾಕ್ ಹಗರಣ' ಒಂದು ಉದಾಹರಣೆಯಾಗಿದೆ' ಎಂದು ಹೇಳಿದರು.

'ಪ್ರಧಾನಿಯಿಂದ ನೀತಿ ಸಂಹಿತೆ ಉಲ್ಲಂಘನೆ'

ನವದೆಹಲಿ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಅವರು ದೇಶವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಮಾದರಿ ನೀತಿ ಸಂಹಿತೆಯನ್ನು (ಎಂಸಿಸಿ) ಉಲ್ಲಂಘಿಸಿದ್ದಾರೆ' ಎಂದು ಸಿಪಿಐ ಸಂಸದ ಪಿ. ಸಂತೋಷ್ ಕುಮಾರ್ ಅವರು ಆರೋಪಿಸಿದ್ದಾರೆ.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರಿಗೆ ಈ ಕುರಿತಂತೆ ಭಾನುವಾರ ಪತ್ರ ಬರೆದಿದ್ದು, ಮಧ್ಯಪ್ರವೇಶಿಸುವಂತೆ ಆಗ್ರಹಿಸಿದ್ದಾರೆ. ಸೂಕ್ತ ಕಾನೂನು ಕ್ರಮಕ್ಕೂ ಒತ್ತಾಯಿಸಿದ್ದಾರೆ.

'ಐದು ರಾಜ್ಯಗಳಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಸಮಯದಲ್ಲಿ ಪ್ರಧಾನಿ ಮಾಡಿದ ಭಾಷಣವು ರಾಜಕೀಯ ಸ್ವರೂಪ ಮತ್ತು ಪಕ್ಷಪಾತದಿಂದ ಕೂಡಿತ್ತು. ಆಯ್ದ ಸಂಕಥನವನ್ನು ಒಳಗೊಂಡಿತ್ತು' ಎಂದು ಪತ್ರದಲ್ಲಿ ದೂರಿದ್ದಾರೆ.

ದೂರದರ್ಶನ ಹಾಗೂ ಸಂಸದ್ ಟಿ.ವಿ.ಯಂತಹ ಸಾರ್ವಜನಿಕ ಮಾಧ್ಯಮದಲ್ಲಿ ಪ್ರಧಾನಿಯವರ ಭಾಷಣ ಪ್ರಸಾರ ಮಾಡಿರುವುದು ಸಹ ಸರ್ಕಾರದ ಸಂಪನ್ಮೂಲದ ದುರುಪಯೋಗ ಎಂದಿದ್ದಾರೆ.

ರಾಜಕೀಯ ಭಾಷಣಕ್ಕಾಗಿ ಸಾರ್ವಜನಿಕ ಮಾಧ್ಯಮದ ಬಳಕೆಯು ಚುನಾವಣಾ ನಿಯಮಗಳ ಗಂಭೀರ ಉಲ್ಲಂಘನೆಯಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಮಾದರಿ ನೀತಿ ಸಂಹಿತೆ ಉಲ್ಲಂಘನೆ ದೂರಿಗೆ ಸೂಕ್ತ ಕ್ರಮಕೈಗೊಳ್ಳಲು ವಿಫಲವಾದರೆ, ಚುನಾವಣಾ ಆಯೋಗದ ನಿಷ್ಪಕ್ಷಪಾತತೆ ಬಗ್ಗೆ ಸಾರ್ವಜನಿಕರ ವಿಶ್ವಾಸ ಕುಗ್ಗಬಹುದು. ಜೊತೆಗೆ ಸಂಸ್ಥೆಯು ಇದರಲ್ಲಿ ಭಾಗಿಯಾಗಿದೆ ಎಂಬ ಸಂಶಯವು ಜನರ ಮನದಲ್ಲಿ ಮೂಡಲಿದೆ ಎಂದು ಅವರು ಎಚ್ಚರಿಸಿದ್ದಾರೆ.

ಪಶ್ಚಿಮ ಬಂಗಾಳದ ಒಟ್ಟು ಮತದಾರರ ಸಂಖ್ಯೆ 6.82 ಕೋಟಿಗೆ ಏರಿಕೆ

ಏಳು ಲಕ್ಷ ಮತದಾರರ ಸೇರ್ಪಡೆ

ಕೋಲ್ಕತ್ತ/ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಮತದಾರರ ಪಟ್ಟಿಗೆ ಸುಮಾರು 7 ಲಕ್ಷ ಮತದಾರರ ಹೆಸರನ್ನು ಚುನಾವಣಾ ಆಯೋಗವು ಸೇರಿಸಿದೆ. ಆದರೆ, ಈ ಪೈಕಿ ಎಷ್ಟು ಮಂದಿ ಹೊಸ ಮತದಾರರು, ಇವರ ಲಿಂಗ ಮತ್ತು ವಯಸ್ಸಿನ ಮಾಹಿತಿಗಳನ್ನು ಪ್ರಕಟಿಸಿಲ್ಲ.

'ಸುಮಾರು 3.22 ಲಕ್ಷ ಮತದಾರರು ರಾಜ್ಯದಲ್ಲಿ ನಡೆಯಲಿರುವ ಮೊದಲ ಹಂತದ ಮತದಾನದಲ್ಲಿ ಮತ ಚಲಾಯಿಸಲಿದ್ದಾರೆ. ಉಳಿದ ಸುಮಾರು 3.88 ಲಕ್ಷ ಮತದಾರರು ಎರಡನೇ ಹಂತದ ಮತದಾನದಲ್ಲಿ ಮತ ಚಲಾಯಿಸುವರು' ಎಂದು ಆಯೋಗದ ಅಧಿಕಾರಿಗಳು ಶನಿವಾರ ಮಾಹಿತಿ ನೀಡಿದರು.

ರಾಜ್ಯದ ಒಟ್ಟು ಮತದಾರರ ಸಂಖ್ಯೆಯು ಈಗ 6.82 ಕೋಟಿಯಷ್ಟಾಗಿದೆ. ಸುಪ್ರೀಂ ಕೋರ್ಟ್ ರಚಿಸಿರುವ ಮಂಡಳಿಯು ಇನ್ನಷ್ಟು ಪ್ರಕರಣಗಳನ್ನು ಇತ್ಯರ್ಥಪಡಿಸಿದರೆ, ಈ ಸಂಖ್ಯೆಯು ಮತ್ತಷ್ಟು ಏರಿಕೆಯಾಗಲಿದೆ.

ಮತದಾರರ ಪಟ್ಟಿಗೆ ಸೇರಿಸಲು ಆಯೋಗಕ್ಕೆ ಸಲ್ಲಿಕೆಯಾಗಿರುವ ಫಾರಂ 6ರ ಸಂಖ್ಯೆ ಮತ್ತು ಈ ಪೈಕಿ ತಿರಸ್ಕರಿಸಲಾದ ಅರ್ಜಿಗಳ ಸಂಖ್ಯೆಯ ಬಗ್ಗೆಯೂ ಆಯೋಗವು ಮಾಹಿತಿ ಬಿಡುಗಡೆ ಮಾಡಿಲ್ಲ.

'ನಿಯಮಗಳ ಅನುಸಾರ ಅಂಕಿ–ಅಂಶಗಳನ್ನು ಬಿಡುಗಡೆ ಮಾಡಲಾಗಿದೆ. ವಿಸ್ತೃತ ದತ್ತಾಂಶಗಳನ್ನು ಪ್ರತ್ಯೇಕವಾಗಿ ನಿರ್ವಹಿಸಲಾಗುತ್ತಿದೆ. ಅಗತ್ಯ ಬಿದ್ದರೆ ಈ ದತ್ತಾಂಶಗಳನ್ನು ಬಿಡುಗಡೆ ಮಾಡಲಾಗುವುದು' ಎಂದು ಆಯೋಗದ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

'ಎಸ್‌ಐಆರ್ ಪ್ರಕ್ರಿಯೆಯನ್ನು ಕೂಡಲೇ ನಿಲ್ಲಿಸಿ'

'ಎಸ್‌ಐಆರ್ ಪ್ರಕ್ರಿಯೆಯನ್ನು ತಕ್ಷಣವೇ ನಿಲ್ಲಿಸಿ. ಇದು ನಾಗರಿಕರ ಹಕ್ಕಿಗೆ ವಿರುದ್ಧವಾಗಿದೆ. ಎಸ್‌ಐಆರ್ ಬಳಿಕ ಸಿದ್ಧಪಡಿಸಲಾದ ಪಟ್ಟಿಯನ್ನು ಕೈಬಿಟ್ಟು ಹಳೆಯ ಮತದಾರರ ಪಟ್ಟಿಯ ಆಧಾರದಲ್ಲಿಯೇ ಚುನಾವಣೆಗಳನ್ನು ನಡೆಸಿ' ಎಂದು ಚಿಂತಕರು, ವಕೀಲರು, ವಿದ್ಯಾರ್ಥಿಗಳು ಮತ್ತು ಸಾಮಾಜಿಕ ಕಾರ್ಯಕರ್ತರ ಗುಂಪು ಒತ್ತಾಯಿಸಿದೆ.

'ಜನಹಸ್ತಕ್ಷೇಪ' ಎಂಬ ಮಾನವ ಹಕ್ಕುಗಳ ಸಂಘಟನೆ ನವದೆಹಲಿಯ ಪ್ರೆಸ್‌ಕ್ಲಬ್‌ನಲ್ಲಿ ಶನಿವಾರ ಆಯೋಜಿಸಿದ್ದ ವಿಚಾರಸಂಕಿರಣದಲ್ಲಿ ಸರ್ವಾನುಮತದಿಂದ ನಿರ್ಣಯವೊಂದನ್ನು ಅಂಗೀಕರಿಸಲಾಗಿದೆ.

'ಪಶ್ಚಿಮ ಬಂಗಾಳವೂ ಸೇರಿ ದೇಶದಾದ್ಯಂತ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಯನ್ನು ಕೂಡಲೇ ನಿಲ್ಲಿಸಿ. ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದವರು ಸಲ್ಲಿಸಿದ ಆಕ್ಷೇಪಣೆಗಳನ್ನು ಸೂಕ್ತವಾಗಿ ಇತ್ಯರ್ಥಪಡಿಸಿ. ಅವರಿಗೂ ಮತದಾನ ಮಾಡಲು ಅವಕಾಶ ನೀಡಿ. ಅಥವಾ 2025ರಲ್ಲಿ ಪ್ರಕಟಿಸಲಾದ ಪರಿಷ್ಕೃತ ಮತದಾರರ ಪಟ್ಟಿಯ ಆಧಾರದಲ್ಲಿಯೇ ಮತದಾನಕ್ಕೆ ಅವಕಾಶ ನೀಡಿ' ಎಂದು ನಿರ್ಣಯದಲ್ಲಿ ಆಗ್ರಹಿಸಲಾಗಿದೆ.

'ಹೀಗೆ ಮಾಡದೆ ಇದ್ದರೆ, ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಚುನಾವಣೆಗೆ ಅರ್ಥವೇ ಇರುವುದಿಲ್ಲ. ಯಾರು ನಾಗರಿಕರು ಎನ್ನುವುದನ್ನು ಗುರುತಿಸುವ ಜವಾಬ್ದಾರಿ ಕೇಂದ್ರ ಗೃಹ ಸಚಿವಾಲಯದ್ದು' ಎಂದು ಹೇಳಲಾಗಿದೆ.

ಡಿಸಿಪಿ ನಿವಾಸದ ಮೇಲೆ ದಾಳಿ

ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಕೋಲ್ಕತ್ತದ ಡಿಸಿಪಿ ಶಾಂತನು ಸಿನ್ಹಾ ಬಿಸ್ವಾಸ್ ಅವರಿಗೆ ಸೇರಿದ ಎರಡು ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ಭಾನುವಾರ ಶೋಧ ನಡೆಸಿದೆ. ಇವರ ಜೊತೆ ಉದ್ಯಮಿ ಜಾಯ್ ಕಾಮ್‌ದಾರ್ ಅವರಿಗೆ ಸೇರಿದ ಜಾಗಗಳಲ್ಲಿಯೂ ಶೋಧ ನಡೆಸಿದ್ದು, ಜಾಯ್ ಅವರನ್ನು ಸಂಜೆ ಬಂಧಿಸಲಾಗಿದೆ.

ಚುನಾವಣೆ ನಡೆಯುತ್ತಿರುವ ಈ ಹೊತ್ತಿನಲ್ಲಿ ಈ ದಾಳಿ ನಡೆದಿರುವುದು ರಾಜಕೀಯ ವಾಕ್ಸಮರಕ್ಕೆ ಕಾರಣವಾಗಿದೆ. ದಾಳಿಯ ವೇಳೆ ₹67.64 ಲಕ್ಷ ಮೌಲ್ಯದ ಚಿನ್ನಾಭರಣ ಮತ್ತು ಬೆಳ್ಳಿ ವಸ್ತುಗಳ ಜೊತೆಯಲ್ಲಿ ₹1.47 ಕೋಟಿ ನಗದು ದೊರೆತಿದೆ. ದಾಳಿ ವೇಳೆ ಡಿಸಿಪಿ ಶಾಂತನು ಅವರು ತಮ್ಮ ನಿವಾಸದಲ್ಲಿ ಇರಲಿಲ್ಲ.

ವಿ.ವಿ: ಮಹಿಳಾ ಅಧ್ಯಯನ ಪೀಠ

ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯ ಸಮಿತಿ ಶಿಫಾರಸು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಹಿಳೆಯರ ಹೆಸರಿನಲ್ಲಿ ಅಧ್ಯಯನ ಪೀಠಗಳನ್ನು ಎಲ್ಲ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲೂ ಸ್ಥಾಪಿಸಬೇಕು ಎಂದು ಪ್ರೊ.ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯ ಸಮಿತಿ ಶಿಫಾರಸು ಮಾಡಿದೆ.

ವಿಶ್ವವಿದ್ಯಾಲಯಗಳಲ್ಲಿ ಹಲವು ಅಧ್ಯಯನ ಪೀಠಗಳಿದ್ದರೂ ಸಾಧಕ ಮಹಿಳೆಯರ ಹೆಸರಿನ ಪೀಠಗಳ ಸಂಖ್ಯೆ ಅತ್ಯಂತ ಕಡಿಮೆ ಇವೆ. ಹಾಗಾಗಿ, ಗಣನೀಯ ಸಾಧನೆ ಮಾಡಿದ ಮಹಿಳೆಯರ ಹೆಸರಿನ ಪೀಠಗಳ ಅಗತ್ಯವಿದೆ. ಭವಿಷ್ಯದಲ್ಲಿ ಸ್ಥಾಪನೆಯಾಗುವ ಪೀಠಗಳಲ್ಲಿ ಸಾಧಕಿಯರಿಗೂ ಆದ್ಯತೆ ನೀಡಬೇಕು ಎಂದು ಸಮಿತಿ ತನ್ನ ಅಧ್ಯಯನ ವರದಿಯಲ್ಲಿ ಹೇಳಿದೆ.

ಅಧ್ಯಯನ ಪೀಠಗಳಿಗೆ ಇಟ್ಟಿರುವ ಇಡುಗಂಟುಗಳಲ್ಲಿ ಭಾರಿ ವ್ಯತ್ಯಾಸವಿದೆ. ₹5ಲಕ್ಷದಿಂದ ಆರಂಭವಾಗಿ ₹5 ಕೋಟಿಯವರೆಗೂ ಇದೆ. ಇಡುಗಂಟಿನಿಂದ ಬರುವ ಬಡ್ಡಿಯ ಹಣದಲ್ಲೇ ಅಧ್ಯಯನ ಪೀಠಗಳು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುತ್ತಿವೆ. ಈ ವ್ಯತ್ಯಾಸದ ಫಲವಾಗಿ ಕೆಲ ಅಧ್ಯಯನ ಪೀಠಗಳು ಉತ್ತಮವಾಗಿ ನಡೆದರೆ, ಇನ್ನೂ ಕೆಲವು ಸಂಪೂರ್ಣ ನಿಷ್ಕ್ರಿಯವಾಗಿವೆ. ಹಾಗಾಗಿ, ಏಕರೀತಿಯ ಇಡುಗಂಟು ನೀಡಬೇಕು. ಪ್ರತಿ ಪೀಠಕ್ಕೂ ಕನಿಷ್ಠ ₹1 ಕೋಟಿ ಬಿಡುಗಡೆ ಮಾಡಬೇಕು. ಸಮಾನ ಉದ್ದೇಶ ಹೊಂದಿರುವ ನಿಗಮ–ಮಂಡಳಿಗಳು, ಪ್ರಾಧಿಕಾರಗಳ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಬೇಕು. ಹೆಚ್ಚುವರಿ ಹಣದ ಅಗತ್ಯವಿರುವ ಪೀಠಗಳು ಕ್ರಿಯಾ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಬೇಕು ಎಂದು ಸಮಿತಿ ಹೇಳಿದೆ.

ಒಂದೇ ನಿಯಮ ಜಾರಿ: ಎಲ್ಲ ಅಧ್ಯಯನ ಪೀಠಗಳಿಗೂ ಏಕ ರೀತಿಯ ನಿಯಮ ರೂಪಿಸಬೇಕು. ನಿಯಮಗಳ ಆಧಾರದಲ್ಲೇ ಕಾರ್ಯಕ್ರಮಗಳ ಆಯೋಜನೆ. ವಿಚಾರಸಂಕಿರಣ, ಕಾರ್ಯಾಗಾರ, ಅಧ್ಯಯನ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. ಪ್ರತಿ ಪೀಠವೂ ಎರಡು ತಿಂಗಳಿಗೆ ಒಂದು ಕಾರ್ಯಕ್ರಮ, ಒಂದು ವರ್ಷದಲ್ಲಿ ಎರಡು ಪುಸ್ತಕ ಪ್ರಕಟಿಸಬೇಕು. ಆಯಾ ಪೀಠಗಳು ವಿಷಯಗಳ ಬಗ್ಗೆ ಆಸಕ್ತಿ, ಅರಿವು ಇರುವ ಪ್ರಮುಖರನ್ನು ಒಳಗೊಂಡ ಆಂತರಿಕ ಸಲಹಾ ಸಮಿತಿ ರಚಿಸಿಕೊಳ್ಳಬೇಕು. ಸಂದರ್ಶಕ ಅಧ್ಯಾಪಕರ ನೇಮಕ ಮಾಡಿಕೊಳ್ಳಬೇಕು. ಸಂಯೋಜಕರಿಗೆ ನಿಗದಿಪಡಿಸಿದ ಗೌರವ ಸಂಭಾವನೆ ನೀಡಬೇಕು. ಸಂಯೋಜಕರು, ಸಂದರ್ಶಕರ ಅವಧಿಯನ್ನು ಎರಡು ವರ್ಷಗಳಿಗೆ ಮಿತಿಗೊಳಿಸಬೇಕು ಎಂದು ಸಮಿತಿಯು ಶಿಫಾರಸು ಮಾಡಿದೆ.

ಪೀಠಗಳ ಆಶಯಕ್ಕೆ ಅನುಗುಣವಾಗಿ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಆರಂಭಿಸಬಹುದು. ವಿಷಯಗಳ ಕುರಿತು ಆಳ ಅಧ್ಯಯನ ಮಾಡಿ ಕೃತಿ ರಚನೆ ಮಾಡಲು ಫೆಲೋಶಿಪ್ ನೀಡಬಹುದು ಎಂದು ಸಮಿತಿ ಹೇಳಿದೆ.

ಅಂಕಿ ಅಂಶಗಳು

32 ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯ ವಿಶ್ವವಿದ್ಯಾಲಯಗಳು

117 ಅಧ್ಯಯನ ಪೀಠಗಳು

69 ನಿಷ್ಕ್ರಿಯವಾಗಿರುವ ಪೀಠಗಳು

ಅಧ್ಯಯನ ಪೀಠ: ಖಾಸಗಿಗಿಲ್ಲ ಅವಕಾಶ

ವ್ಯಕ್ತಿಗಳು ಅಥವಾ ಸಂಸ್ಥೆಗಳು ಹಣ ನೀಡಿ ಅವರಿಗೆ ಬೇಕಾದವರ ಹೆಸರಿನ ಅಧ್ಯಯನ ಪೀಠಗಳನ್ನು ಸ್ಥಾಪಿಸಲು ಅವಕಾಶ ನೀಡಬಾರದು ಎಂದು ಸಮಿತಿ ತನ್ನ ಅಧ್ಯಯನ ವರದಿಯಲ್ಲಿ ಹೇಳಿದೆ.

ವ್ಯಕ್ತಿ, ಸಂಸ್ಥೆಗಳಿಂದ ಧನ ಸಹಾಯ ಸ್ವೀಕರಿಸಬಹುದು. ಆದರೆ, ಪೀಠದ ಎಲ್ಲ ಕೆಲಸ ಹಾಗೂ ತೀರ್ಮಾನಗಳು ಸರ್ಕಾರದ ನಿಯಮಕ್ಕೆ ಅನುಗುಣವಾಗಿಯೇ ನಡೆಸಬೇಕು. ಸರ್ಕಾರವು ಸನ್ನಿವೇಶಗಳ ಒತ್ತಡಕ್ಕೆ ಒಳಗಾಗಿ ಪೀಠಗಳ ಘೋಷಣೆ ಮಾಡಬಾರದು. ಮಹತ್ವದ ವ್ಯಕ್ತಿಗಳ ಸಾರ್ವಕಾಲಿಕ ಸಾಧನೆ ಪರಿಗಣಿಸಿ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಸಮಿತಿ ಸೂಚಿಸಿದೆ.

ಸರ್ಕಾರವೇ ಅಧ್ಯಯನ ಪೀಠಗಳನ್ನು ಸ್ಥಾಪಿಸಬೇಕು. ಮಹಾನ್ ಸಾಧಕರ ಜತೆಗೆ ಆಯಾ ಪ್ರದೇಶದ ಸಮಸ್ಯೆಗಳು, ಅಗತ್ಯಗಳಿಗೆ ಅನುಗುಣವಾಗಿ ಪೀಠ ಸ್ಥಾಪಿಸಬಹುದು. ವಲಸೆ ಕಾರ್ಮಿಕರ ಜೀವನ ಕ್ರಮದ ಅಧ್ಯಯನ, ಅಲ್ಪಸಂಖ್ಯಾತರ ಶಿಕ್ಷಣದ ಸವಾಲುಗಳು, ಗ್ರಾಮೀಣ ವಿದ್ಯಾರ್ಥಿಗಳ ಶೈಕ್ಷಣಿಕ ಸವಾಲು ಸೇರಿದಂತೆ ಹಲವು ವಿಷಯಗಳ ಅಧ್ಯಯನಕ್ಕೆ ಪೀಠ ಸ್ಥಾಪಿಸಬಹುದು. ಒಂದೇ ಹೆಸರಿನ, ಒಂದೇ ಆಶಯದ ಅಧ್ಯಯನ ಪೀಠಗಳ ಸ್ಥಾಪನೆಗೆ ಕಡಿವಾಣ ಹಾಕಬೇಕು ಎಂದು ಶಿಫಾರಸು ಮಾಡಿದೆ.



ಸಾರ್ವಜನಿಕ ವಿ.ವಿಗಳ ಹಲವು ಅಧ್ಯಯನ ಪೀಠಗಳು ನಿಷ್ಕ್ರಿಯವಾಗಿವೆ. ಪೀಠಗಳನ್ನು ಬಲಪಡಿಸಲು, ಆಶಯ ಮರುಸ್ಥಾಪಿಸಲು ಅಗತ್ಯ ಮಾರ್ಗಸೂಚಿ ಒದಗಿಸಲಾಗಿದೆ
ಬರಗೂರು ರಾಮಚಂದ್ರಪ್ಪ, ಅಧ್ಯಕ್ಷರು, ಅಧ್ಯಯನ ಪೀಠಗಳ ಪರಿಶೀಲನಾ ಸಮಿತಿ

‘ಜೆಡಿಎಸ್‌ಗೆ ಜಮೀರ್: ಮತ್ತೆ ತಪ್ಪು ಮಾಡಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಕಾಂಗ್ರೆಸ್‌ನ ಯಾರೊಬ್ಬರೂ ನನ್ನ ಸಂಪರ್ಕದಲ್ಲಿ ಇಲ್ಲ. ಹಾಗಿದ್ದ ಮೇಲೆ ಅವರು ಪಕ್ಷ ಸೇರುವ ಮಾತೆಲ್ಲಿಂದ ಬರಬೇಕು? ಇದೆಲ್ಲವೂ ಗಾಳಿಸುದ್ದಿಯಷ್ಟೇ’ ಎಂದು ಕೇಂದ್ರ ಸಚಿವ ಎಚ್‌.ಡಿ ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಸಚಿವ ಜಮೀರ್ ಅಹಮದ್ ಅವರು ಜೆಡಿಎಸ್‌ಗೆ ಸೇರುವ ಸುದ್ದಿಗಳ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಪಕ್ಷಕ್ಕೆ ಯಾರನ್ನು ಸೇರಿಸಿಕೊಳ್ಳಬೇಕು ಎಂಬ ಬಗ್ಗೆ ನಾನು ತಾನೇ ನಿರ್ಧಾರ ಕೈಗೊಳ್ಳಬೇಕು. ನನ್ನ ಸಂಪರ್ಕಕ್ಕೆ ಯಾರೂ ಬಂದಿಲ್ಲ ಎಂದ ಮೇಲೆ ಪಕ್ಷಕ್ಕೆ ಸೇರಿಸಿಕೊಳ್ಳುವ ಮಾತೇಕೆ ಬರುತ್ತದೆ’ ಎಂದರು.

‘ದಾವಣಗೆರೆ ದಕ್ಷಿಣ, ಬಾಗಲಕೋಟೆ ಕ್ಷೇತ್ರಗಳ ಫಲಿತಾಂಶ ಏನಾಗುತ್ತದೋ ನೋಡೋಣ. ಫಲಿತಾಂಶ ಬರುವ ಮುನ್ನವೇ ಯಾಕೆ ಅನುಮಾನ? ಅಲ್ಪಸಂಖ್ಯಾತರನ್ನು ನಾವೇ ರಕ್ಷಣೆ ಮಾಡುವವರು ಎನ್ನುವ ಕಾಂಗ್ರೆಸ್ ಯಾಕೆ ಗೊಂದಲ ಮಾಡುತ್ತಿದೆ. ಒಂದು ಸಮುದಾಯದ ಮೇಲೆ ಯಾಕೆ ಗದಾಪ್ರಹಾರ ನಡೆಸುತ್ತಿದ್ದಾರೆ?’ ಎಂದು ಅವರು ಪ್ರಶ್ನಿಸಿದರು.

‘ನನಗೂ ನೀವು ಹೇಳಿದ ವ್ಯಕ್ತಿಗೂ ಸಂಪರ್ಕ ಇಲ್ಲ. ಜೆಡಿಎಸ್ ಜತೆಗೆ ಯಾರೂ ಸಂಪರ್ಕ ಸಾಧಿಸಿಲ್ಲ. ನಾವು ಮಾಡಿದ ತಪ್ಪುಗಳನ್ನೇ ಮತ್ತೆ ಮಾಡುವುದಿಲ್ಲ. ಇನ್ನೊಂದು ಪಕ್ಷದಲ್ಲಿ ನಡೆಯುತ್ತಿರುವ ರಾಜಕೀಯ ಬಿಕ್ಕಟ್ಟುಗಳನ್ನು ಬಳಸಿ ಲಾಭ ಮಾಡಿಕೊಳ್ಳುವ ಮನಸ್ಥಿತಿ ನಮ್ಮದಲ್ಲ’ ಎಂದು ಅವರು ಸ್ಪಷ್ಟಪಡಿಸಿದರು.

₹6 ಕೋಟಿ ಮೌಲ್ಯದ ಮಾದಕ ವಸ್ತು ವಶ

ಮುಂಬೈ (ಪಿಟಿಐ): ಮುಂಬೈ ಪೊಲೀಸರು ₹6 ಕೋಟಿ ಮೌಲ್ಯದ 5,000 ಎಂಡಿಎಂಎ ಮಾತ್ರೆಗಳನ್ನು (ಮಾದಕ ವಸ್ತು) ವಶಪಡಿಸಿಕೊಂಡಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಿಳೆಯೊಬ್ಬರನ್ನು ಬಂಧಿಸಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಠಾಣೆ ಜಿಲ್ಲೆಯ ಟಿಟ್ವಾಲದಲ್ಲಿ ಮಾದಕ ವಸ್ತು ನಿಗ್ರಹ ದಳವು (ಎಎನ್‌ಸಿ) ಕಾರ್ಯಾಚರಣೆ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದರು.

ಟೊಮೆಟೊ ಹಬ್ಬ...

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್



ಕಲಬುರಗಿ ನಗರದ ಹೊರವಲಯದಲ್ಲಿ ಬೇಸಿಗೆ ಹಿನ್ನೆಲೆ ಶಾಂಭವ ಇವೆಂಟ್ ಭಾನುವಾರ ಆಯೋಜಿಸಿದ್ದ ‘ಟೊಮೆಟೊ ಫೆಸ್ಟಿವಲ್’ನಲ್ಲಿ ಯುವತಿಯರು ಟೊಮೆಟೊ ಎರಚಿ ಸಂಭ್ರಮಿಸಿದರು

ಬಾಲಕಿ ಮೇಲೆ ಅತ್ಯಾಚಾರ: ಬಂಧನ

ಉಜಿರೆ (ದಕ್ಷಿಣ ಕನ್ನಡ): ಬಾಲಕಿಯೊಬ್ಬಳನ್ನು ಕಾಡಿಗೆ ಕರೆದೊಯ್ದು, ಆಕೆಯ ಮೇಲೆ ಅತ್ಯಾಚಾರ ಎಸಗಿದ ಪ್ರಕರಣ ಸಂಬಂಧ ಧರ್ಮಸ್ಥಳ ಪೊಲೀಸರು ಶನಿವಾರ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಕಡಿರುದ್ಯಾವರ ಗ್ರಾಮದ ಸುಮಂತ್ (28) ಹಾಗೂ ಗರ್ಡಾಡಿ ಗ್ರಾಮದ ನವನೀತ್ (26) ಬಂಧಿತರು.

15 ವರ್ಷದ ಬಾಲಕಿಯನ್ನು ಏ. 16ರಂದು ಎರ್ಮಾಯಿ ಜಲಪಾತದ ಬಳಿ ಇರುವ ಕಾಡಿಗೆ ಕರೆದೊಯ್ದಿದ್ದ ಆರೋಪಿಗಳು ಅತ್ಯಾಚಾರ ಎಸಗಿದ್ದಾರೆ ಏ.17ರಂದು ಪೋಷಕರು ನೀಡಿದ ದೂರು ಆಧರಿಸಿ ಧರ್ಮಸ್ಥಳ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ಆರೋಪಿಗಳನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಆರೋಪಿ ಸುಮಂತ್‌ಗೆ ಮೇ 10ರಂದು ಮದುವೆ ನಿಗದಿಯಾಗಿದೆ ಎಂದು ತಿಳಿದುಬಂದಿದೆ.

258 ಕೃಷಿ ಅಧಿಕಾರಿ ಹುದ್ದೆಗಳಿಗೆ ಅರ್ಜಿ

ಬೆಂಗಳೂರು: ಕಲ್ಯಾಣ ಕರ್ನಾಟಕ ವೃಂದದ 258 ಕೃಷಿ ಅಧಿಕಾರಿ ಹುದ್ದೆಗಳ ನೇರ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಗ್ರೂಪ್‌–ಬಿ ವೃಂದದ ಕೃಷಿ ಅಧಿಕಾರಿ ಹಾಗೂ ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆಗಳನ್ನು ಸ್ಪರ್ಧಾ ಪರೀಕ್ಷೆಗಳ ಮೂಲಕ ಭರ್ತಿ ಮಾಡಲಾಗುತ್ತದೆ. ಬಿ.ಎಸ್‌ಸಿ ಕೃಷಿ, ಬಿ.ಎಸ್‌ಸಿ ಆನರ್ಸ್ (ಕೃಷಿ) ಹಾಗೂ ಬಿ.ಟೆಕ್ ಪದವೀಧರರು ಅರ್ಜಿ ಸಲ್ಲಿಸಬಹುದು. ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 40, ಹಿಂದುಳಿದ ವರ್ಗಗಳಿಗೆ 43 ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭ್ಯರ್ಥಿಗಳಿಗೆ 45 ವರ್ಷಗಳ ಗರಿಷ್ಠ ವಯೋಮಿತಿ ನಿಗದಿ ಮಾಡಲಾಗಿದೆ.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಮೇ 10 ಹಾಗೂ ಶುಲ್ಕ ಪಾವತಿಗೆ ಮೇ 12 ಕೊನೆಯ ದಿನ. ಸಾಮಾನ್ಯ ವರ್ಗ ಹಾಗೂ ಹಿಂದುಳಿದ ವರ್ಗಗಳಿಗೆ ₹750, ಪರಿಶಿಷ್ಟ ಜಾತಿ–ಪಂಗಡ, ಇತರೆ ವಿಶೇಷ ವರ್ಗಗಳಿಗೆ ₹500 ಹಾಗೂ ಅಂಕವಿಕಲರಿಗೆ ₹250 ಶುಲ್ಕ ನಿಗದಿ ಮಾಡಲಾಗಿದೆ ಎಂದು ಪ್ರಾಧಿಕಾರ ಹೇಳಿದೆ.

ನದಿಯಲ್ಲಿ ಮುಳುಗಿ 6 ಮಂದಿ ಸಾವು

ಒಂದನೇ ಪುಟದಿಂದ...

ನೀರಿನಲ್ಲಿ ಮುಳುಗಿ ಅಸ್ವಸ್ಥಗೊಂಡಿರುವ ಕೆ.ಅರ್.ನಗರ ಮುಸ್ಲಿಂ ಬ್ಲಾಕ್‌ನ ಸಲ್ಮಾ ಬಾನು, ಮೈಸೂರಿನ ಉದಯಗಿರಿಯ ಆಸೀಯಾ ಹಾಗೂ ತಿ.ನರಸೀಪುರ ತಾಲ್ಲೂಕು ಬನ್ನೂರಿನ ಜುಬೇದಾ ಅವರನ್ನು ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರನ್ನು ಸ್ಥಳೀಯರು ನೀರಿನಿಂದ ಮೇಲೆತ್ತಿದ್ದಾರೆ.

ಮೃತರೆಲ್ಲರೂ ಹತ್ತಿರದ ಸಂಬಂಧಿಕರು. ಹಳೆಯಡತೊರೆಯ ಹಜರತ್ ಖಾದರ್ ಲಿಂಗಾವಲಿ ದರ್ಗಾದಲ್ಲಿನ ಉರುಸ್‌ಗೆ ಬಂದಿದ್ದರು, ಪೂಜೆಗೆ ಮುನ್ನ ಹತ್ತಿರದ ನದಿಗೆ ಈಜಲು ತೆರಳಿದ್ದರು. ಈಜಾಡುವಾಗ, ಮುಳುಗಿದವರನ್ನು ರಕ್ಷಿಸಲು ಮುಂದಾಗಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದರು.



ಕೆ.ಆರ್. ನಗರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಶವಾಗಾರದ ಬಳಿ ಸೇರಿದ್ದ ಜನ

ಪಟ್ಟಣಕ್ಕೆ ಕುಡಿಯುವ ನೀರು ಪೂರೈಸಲು ಹಳೆಯಡತೊರೆಯ ಪಂಪ್‌ಹೌಸ್ ಬಳಿ ನದಿಗೆ ಮರಳಿನ ಮೂಟೆಗಳನ್ನು ಹಾಕಿದ್ದು, ನೀರು ಸಂಗ್ರಹವಾಗಿದೆ. ಇದರಲ್ಲಿ ಈಜಲು ಹೋಗಿದ್ದಾಗ ದುರ್ಘಟನೆ ನಡೆದಿದೆ.

ಸ್ಥಳಕ್ಕೆ ಶಾಸಕ ಡಿ.ರವಿಶಂಕರ್, ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಭೇಟಿ ನೀಡಿ ಪರಿಶೀಲಿಸಿದರು.

ಈ ಸ್ಥಳದಲ್ಲಿ ಮುಂದಿನ ದಿನದಲ್ಲಿ ಇಂತಹ ದುರ್ಘಟನೆಗಳು ನಡೆಯದಂತೆ ನೋಡಿಕೊಳ್ಳಲು ಇಲಾಖೆಯಿಂದ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗುವುದು
ಮಲ್ಲಿಕಾರ್ಜುನ ಬಾಲದಂಡಿ, ಎಸ್‌ಪಿ, ಮೈಸೂರು

ರಾಣಿಗೇಟ್ ಬಳಿ ಇಬ್ಬರು ಸಾವು

ಪಿರಿಯಾಪಟ್ಟಣ (ಮೈಸೂರು ಜಿಲ್ಲೆ): ತಾಲ್ಲೂಕಿನ ರಾಣಿಗೇಟ್ ಗ್ರಾಮದ ಕಾವೇರಿ ನದಿಯಲ್ಲಿ ಮುಳುಗಿ ಪಟ್ಟಣದ ಗಣೇಶ್ (22) ಮತ್ತು ಇಮ್ರಾನ್ (28) ಭಾನುವಾರ ಮೃತಪಟ್ಟರು.

ಟೈಲ್ಸ್ ಅಳವಡಿಸುವ ಕೆಲಸ ಮಾಡುತ್ತಿದ್ದ ಗಣೇಶ್ ಮತ್ತು ಇಮ್ರಾನ್ ಅವರು ಗೆಳೆಯರಾದ ಕಾರ್ತಿಕ್, ಸೊಹೇಲ್ ಜೊತೆ ಮಧ್ಯಾಹ್ನ ಈಜಲು ನೀರಿಗಿಳಿದಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಗಣೇಶ್ ಶವ ಪತ್ತೆಯಾಗಿದೆ. ಮತ್ತೊಬ್ಬರ ಶವಕ್ಕೆ ಹುಡುಕಾಟ ನಡೆದಿದೆ.

ಭುವನೇಶ್ವರದಲ್ಲಿ 61ನೇ ಆವೃತ್ತಿಯ ಗ್ರ್ಯಾಂಡ್ ಫಿನಾಲೆ

ಸಾಧ್ವಿ ‘ಫೆಮಿನಾ ಮಿಸ್ ಇಂಡಿಯಾ’

ಕಾರವಾರ: ಭುವನೇಶ್ವರದ ಕಳಿಂಗಾ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ (ಕೆಐಐಟಿ) ಕ್ಯಾಂಪಸ್‌ನಲ್ಲಿ ನಡೆದ ‘ಫೆಮಿನಾ ಮಿಸ್ ಇಂಡಿಯಾ–2026’ ಸ್ಪರ್ಧೆಯಲ್ಲಿ ಕಾರವಾರ ಶಾಸಕ ಸತೀಶ ಸೈಲ್ ಅವರ ಹಿರಿಯ ಪುತ್ರಿ ಸಾಧ್ವಿ ಸೈಲ್ ವಿಜೇತೆಯಾಗಿದ್ದಾರೆ.

ಶನಿವಾರ ರಾತ್ರಿ ಸತೀಶ ಸೈಲ್ ಅವರಿಗೆ ವಿಡಿಯೊ ಕರೆ ಮಾಡಿದ ಸಾಧ್ವಿ ತನ್ನ ಗೆಲುವಿನ ಸಂಭ್ರಮ ಹಂಚಿಕೊಂಡರು. ಗೆಲುವಿನ ಕಿರೀಟ ತೋರಿಸುತ್ತಿದ್ದಂತೆ ಮಗಳ ಸಾಧನೆ ಕಂಡು ಸೈಲ್ ಭಾವುಕರಾದರು.

ಶಾಸಕ ಸತೀಶ ಸೈಲ್ ಅವರ ಪುತ್ರಿ ಸಾಧ್ವಿ ಮಿಸ್ ಇಂಡಿಯಾ ಸ್ಪರ್ಧೆಯಲ್ಲಿ ಗೋವಾ ರಾಜ್ಯವನ್ನು ಪ್ರತಿನಿಧಿಸಿದ್ದರು. ಕಾರವಾರದವರೇ ಆಗಿದ್ದರೂ ಗೋವಾದಲ್ಲಿ ಜನಿಸಿದ್ದರಿಂದ ಜನ್ಮದಾಖಲೆಗಳಲ್ಲಿ ಗೋವಾ ವಿಳಾಸ ಇತ್ತು. ಈ ಕಾರಣಕ್ಕೆ ಗೋವಾದಿಂದಲೇ ರಾಷ್ಟ್ರ ಮಟ್ಟದ ಸ್ಪರ್ಧೆಗೆ ಪ್ರತಿನಿಧಿಸುವ ಅವಕಾಶ ಸಿಕ್ಕಿತ್ತು ಎಂಬುದಾಗಿ ಶಾಸಕ ಸತೀಶ ಸೈಲ್ ಆಪ್ತರು ಹೇಳಿದ್ದಾರೆ.

ಪ್ರಾಥಮಿಕ, ಪ್ರೌಢಶಿಕ್ಷಣವನ್ನು ಕಾರವಾರದಲ್ಲಿ ಪೂರ್ಣಗೊಳಿಸಿರುವ ಸಾಧ್ವಿ ಕಾಲೇಜು ಶಿಕ್ಷಣವನ್ನು ಬೆಂಗಳೂರಿನಲ್ಲಿ ಮುಗಿಸಿದ್ದಾರೆ. ಬಳಿಕ ಕೆನಡಾದ ಬ್ರಿಟಿಷ್ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಕನ್ನಡ ಸೇರಿ 7 ಭಾಷೆಗಳಲ್ಲಿ ನಿರರ್ಗಳವಾಗಿ ಅವರು ಮಾತನಾಡಬಲ್ಲರು. ಮಾಡೆಲಿಂಗ್ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಜತೆಗೆ ಬೆಂಗಳೂರಿನಲ್ಲಿ ನಿರ್ಮಾಣ ಕ್ಷೇತ್ರಕ್ಕೆ ಸಂಬಂಧಿಸಿದ ಉದ್ಯಮವನ್ನೂ ನಡೆಸುತ್ತಿದ್ದಾರೆ.

‘ಪುತ್ರಿ ಸಾಧ್ವಿ ಖ್ಯಾತ ಅರ್ಥಶಾಸ್ತ್ರಜ್ಞೆ ಗೀತಾ ಗೋಪಿನಾಥ್ ಅವರಿಂದ ಪ್ರೇರಣೆಗೊಂಡು ಅರ್ಥಶಾಸ್ತ್ರ ವಿಷಯ ಅಧ್ಯಯನ ಮಾಡಿದ್ದಾರೆ. ಆಕೆ ಕೆನಡಾದಲ್ಲಿ ಉನ್ನತ ವ್ಯಾಸಂಗದಲ್ಲಿ ತೊಡಗಿದ್ದ ವೇಳೆ ಕೋವಿಡ್ ಎದುರಾಗಿತ್ತು. ಸವಾಲುಗಳ ನಡುವೆಯೂ ವ್ಯಾಸಂಗ ಪೂರ್ಣಗೊಳಿಸಿದ್ದಾಳೆ. ತನ್ನ ಆಸಕ್ತಿಯ ಮಾಡೆಲಿಂಗ್ ಕ್ಷೇತ್ರಕ್ಕೆ ಹೋದಾಗ ನಾನು ಸಮ್ಮತಿಸಿರಲಿಲ್ಲ. ಆ ಕ್ಷೇತ್ರಕ್ಕೆ ಆಕೆ ಕಾಲಿಡುವುದು ಆರಂಭದಲ್ಲಿ ನನಗೆ ಇಷ್ಟವಿರಲಿಲ್ಲ. ಆದರೆ, ಆಕೆಯ ಆಸಕ್ತಿಗೆ ಪ್ರೋತ್ಸಾಹ ನೀಡಲಾರಂಭಿಸಿದೆ. ಅವಳ ಸಾಧನೆ ಹೆಮ್ಮೆ ತಂದಿದೆ’ ಎಂದು ಸತೀಶ ಸೈಲ್ ಪ್ರತಿಕ್ರಿಯಿಸಿದ್ದಾರೆ.

ಸಾಮಾಜಿಕ ಚಟುವಟಿಕೆಗಳಲ್ಲೂ ಸಕ್ರಿಯವಾಗಿರುವ ಸಾಧ್ವಿ ಅಪೌಷ್ಟಿಕತೆಯಿಂದ ಬಳಲುವ ಮಕ್ಕಳಿಗೆ ನೆರವಾಗಲು ‘ಕಿಟ್ಟೊ’ ಎಂಬ ಸಂಸ್ಥೆಯೊಂದಿಗೆ ಕೈಜೋಡಿಸಿದ್ದಾರೆ. ಮಕ್ಕಳ ಆರೋಗ್ಯ ಕಾಳಜಿಗೆ ಆರ್ಥಿಕ ಸಂಪನ್ಮೂಲ ಕ್ರೋಡೀಕರಿಸಲು ನೆರವಾಗುತ್ತಿದ್ದಾರೆ.



‘ಫೆಮಿನಾ ಮಿಸ್ ಇಂಡಿಯಾ 2026’ ಕಿರೀಟ ಧರಿಸಿದ ಸಾಧ್ವಿ ಸತೀಶ್ ಸೈಲ್ (ಮಧ್ಯದಲ್ಲಿದ್ದಾರೆ), ಎರಡನೇ ಸ್ಥಾನ ಪಡೆದ ರಾಜನಂದಿನಿ ಪವಾರ್ ಹಾಗೂ ಮೂರನೇ ಸ್ಥಾನ ಪಡೆದ ಶ್ರೀ ಅದ್ವೈತ ಜಿ.

ಎಲ್‌ಪಿಜಿ ಬಳಕೆ ಶೇ 13ರಷ್ಟು ಇಳಿಕೆ



ನವದೆಹಲಿ (ಪಿಟಿಐ): ಮಾರ್ಚ್ ತಿಂಗಳಿನಲ್ಲಿ ದೇಶದಲ್ಲಿ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಬಳಕೆಯಲ್ಲಿ ಶೇ 13ರಷ್ಟು ಇಳಿಕೆ ಆಗಿದೆ.

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದಾಗಿ ಎಲ್‌ಪಿಜಿ ಪೂರೈಕೆಯಲ್ಲಿ ಅಡಚಣೆ ಉಂಟಾಗಿದೆ. ಇದು ಗೃಹಬಳಕೆ ಮತ್ತು ವಾಣಿಜ್ಯ ಉದ್ದೇಶದ ಎಲ್‌ಪಿಜಿ ಸಿಲಿಂಡರ್ ಬಳಕೆ ಮೇಲೆ ಪರಿಣಾಮ ಬೀರಿದೆ ಎಂದು ಸರ್ಕಾರದ ಅಂಕಿ-ಅಂಶಗಳು ತಿಳಿಸಿವೆ.

ಕಳೆದ ವರ್ಷದ ಮಾರ್ಚ್ ತಿಂಗಳಿನಲ್ಲಿ ದೇಶದಲ್ಲಿ 27.29 ಲಕ್ಷ ಟನ್‌ನಷ್ಟು ಎಲ್‌ಪಿಜಿ ಬಳಕೆ ಆಗಿತ್ತು. ಅದು ಈ ಬಾರಿ 23.79 ಲಕ್ಷ ಟನ್‌ಗೆ ಇಳಿದಿದೆ.

ಕೇಂದ್ರ ಪೆಟ್ರೋಲಿಯಂ ಸಚಿವಾಲಯದ ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣಾ ಘಟಕದ (ಪಿಪಿಎಸಿ) ಪ್ರಕಾರ, ಮಾರ್ಚ್‌ನಲ್ಲಿ 22.19 ಲಕ್ಷ ಟನ್‌ನಷ್ಟು ಗೃಹಬಳಕೆ ಎಲ್‌ಪಿಜಿ ದೇಶದಲ್ಲಿ ಮಾರಾಟವಾಗಿದೆ. ಇದು ಕಳೆದ ವರ್ಷದ ಮಾರ್ಚ್‌ಗೆ ಹೋಲಿಸಿದರೆ ಶೇ 8.1ರಷ್ಟು ಇಳಿಕೆ ಎಂದು ತಿಳಿಸಿದೆ.

ಎಲ್‌ಪಿಜಿ ಪೂರೈಕೆಯಲ್ಲಿ ಉಂಟಾದ ಕೊರತೆಯಿಂದ ಕೇಂದ್ರ ಸರ್ಕಾರವು, ಎಲ್‌ಪಿಜಿ ಉತ್ಪಾದನೆ ಹೆಚ್ಚಿಸುವಂತೆ ಸಂಸ್ಕರಣಾಗಾರಗಳಿಗೆ ನಿರ್ದೇಶನ ನೀಡಿತು. ಇದರಿಂದ ದೇಶದಲ್ಲಿ ಎಲ್‌ಪಿಜಿ ಉತ್ಪಾದನೆ 11 ಲಕ್ಷ ಟನ್‌ನಿಂದ 14 ಲಕ್ಷ ಟನ್‌ಗೆ ಹೆಚ್ಚಳವಾಯಿತು.

2025-26ರ ಪೂರ್ಣ ಆರ್ಥಿಕ ವರ್ಷದಲ್ಲಿ ದೇಶದಲ್ಲಿ 1.31 ಕೋಟಿ ಟನ್‌ನಷ್ಟು ಎಲ್‌ಪಿಜಿ ಉತ್ಪಾದನೆ ಆಗಿದೆ. 2024-25ರಲ್ಲಿ ಇದು 1.28 ಕೋಟಿ ಟನ್‌ನಷ್ಟಿತ್ತು. ಮಾರ್ಚ್ ಅಂತ್ಯದ ವೇಳೆಗೆ ದೇಶದಲ್ಲಿ ಎಲ್‌ಪಿಜಿ ಬಳಕೆ 3.32 ಕೋಟಿ ಟನ್ ಇದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)		ರಾಮನಗರ ರೇಷ್ಮೆಗೂಡು	
ಬೆಂಗಳೂರು 100 ಕ್ಕೆ	₹570	ಮಿಶ್ರತಳಿ(ಸಿ.ಬಿ)	₹355-705
ಬೆಂಗಳೂರು 12 ಕ್ಕೆ	₹78	ದ್ವಿತಳಿ (ಬಿ.ವಿ)	₹382-775
ಮೈಸೂರು: 100 ಕ್ಕೆ	₹580		

ಪಿಂಚಣಿ ಕ್ಷೇತ್ರ: ಶೇ 100ರಷ್ಟು ಎಫ್‌ಡಿಐ ?

ನವದೆಹಲಿ (ಪಿಟಿಐ): ಪಿಂಚಣಿ ವಲಯದಲ್ಲಿ ವಿದೇಶಿ ನೇರ ಹೂಡಿಕೆಯನ್ನು (ಎಫ್‌ಡಿಐ) ಕೇಂದ್ರ ಸರ್ಕಾರವು ಶೇಕಡ 100ಕ್ಕೆ ಹೆಚ್ಚಿಸುವ ಸಾಧ್ಯತೆ ಇದೆ. ಇದಕ್ಕೆ ಸಂಬಂಧಿಸಿದ ಮಸೂದೆಯೊಂದನ್ನು ಸಂಸತ್ತಿನ ಮುಂದಿನ ಅಧಿವೇಶನದಲ್ಲಿ ಮಂಡಿಸುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.

ವಿಮಾ ವಲಯದಲ್ಲಿ ಶೇ 100ರಷ್ಟು ಎಫ್‌ಡಿಐಗೆ ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಮಸೂದೆಗೆ ಸಂಸತ್ತು ಕಳೆದ ವರ್ಷ ಒಪ್ಪಿಗೆ ನೀಡಿದೆ.

ಪಿಂಚಣಿ ವಲಯದಲ್ಲಿ ಎಫ್‌ಡಿಐ ಮಿತಿಯನ್ನು ಶೇ 100ಕ್ಕೆ ಹೆಚ್ಚಿಸುವ ಅವಕಾಶ ಕಲ್ಪಿಸಲು 'ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ-2013'ಕ್ಕೆ ಅಗತ್ಯ ತಿದ್ದುಪಡಿಗಳನ್ನು ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಅಥವಾ ಚಳಿಗಾಲದ ಅಧಿವೇಶನದಲ್ಲಿ ಮಂಡಿಸುವ ಸಾಧ್ಯತೆ ಇದೆ. ಈಗ ಪಿಂಚಣಿ ವಲಯದಲ್ಲಿ ಶೇ 49ರಷ್ಟು ಎಫ್‌ಡಿಐಗೆ ಅವಕಾಶ ಇದೆ.

ಕಾಯ್ದೆಗೆ ತಿದ್ದುಪಡಿ ತರುವ ಮಸೂದೆಯು, ಎನ್‌ಪಿಎಸ್ ಟ್ರಸ್ಟ್ ಅನ್ನು ಪಿಎಫ್‌ಆರ್‌ಡಿ ವ್ಯಾಪ್ತಿಯಿಂದ ಹೊರಗೆ ತರುವ ಅಂಶವನ್ನೂ ಒಳಗೊಳ್ಳಬಹುದು ಎನ್ನಲಾಗಿದೆ.

ತಿಂಗಳ ಆದಾಯಕ್ಕೆ 6 ಹೂಡಿಕೆಗಳು

ಹಣಕಾಸು ಸಾಕ್ಷರತೆ



ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

ಬೆಳಗ್ಗೆ ಎದ್ದ ತಕ್ಷಣ ಕಚೇರಿಗೆ ಓಡುವ ಅವಸರ, ತಿಂಗಳ ಕೊನೆಯಲ್ಲಿ ಸಂಬಳಕ್ಕಾಗಿ ಕಾಯುವ ಅನಿವಾರ್ಯತೆ. ಇದು ನಮ್ಮೆಲ್ಲರ ಕಥೆ. ಆದರೆ, ನಮ್ಮ ಹಣ ನಮಗಾಗಿ ದುಡಿಯಬೇಕು ಎಂಬ ಮಾತು ಕೇಳಿದ್ದೀರಾ? ಹೌದು, ನೀವು ನೆಮ್ಮದಿಯಾಗಿ ಮನೆಯಲ್ಲಿ ಕುಳಿತಿದ್ದರೂ, ಪ್ರತಿ ತಿಂಗಳು ನಿಮ್ಮ ಬ್ಯಾಂಕ್ ಖಾತೆಗೆ ನಿಶ್ಚಿತ ಮೊತ್ತ ಜಮೆಯಾಗುವಂತೆ ಮಾಡಲು ಸಾಧ್ಯವಿದೆ. ಇದು ಯಾವುದೇ ಮೋಸದ ಜಾಲವಲ್ಲ; ಬದಲಿಗೆ ಅತ್ಯಂತ ವಿಶ್ವಾಸಾರ್ಹ ನಿಶ್ಚಿತ ಆದಾಯ ನೀಡುವ ಹೂಡಿಕೆಗಳ ಶಕ್ತಿ. ನಿಮ್ಮ ಹಣಕಾಸಿನ ಭವಿಷ್ಯವನ್ನು ಭದ್ರಪಡಿಸುವ ಆರು ಮಾರ್ಗಗಳ ಬಗ್ಗೆ ತಿಳಿದುಕೊಳ್ಳಿ.

1. ಅಂಚೆ ಕಚೇರಿ ಮಾಸಿಕ ಆದಾಯ ಯೋಜನೆ: ಭಾರತೀಯರಿಗೆ ಅಂಚೆ ಕಚೇರಿ ಎಂದರೆ ಮೊದಲಿನಿಂದಲೂ ಅಚಲವಾದ ನಂಬಿಕೆ. ನಿಮ್ಮ ಬಳಿ ಒಂದು ದೊಡ್ಡ ಮೊತ್ತವಿದ್ದು, ಅದನ್ನು ಯಾವುದೇ ಅಪಾಯ ಇಲ್ಲದೆ ಹೂಡಿಕೆ ಮಾಡಬೇಕೆಂದರೆ ಅಂಚೆ ಕಚೇರಿ ಮಾಸಿಕ ಆದಾಯ ಯೋಜನೆ (ಪಿಒಎಂಐಎಸ್) ಒಂದು ಅತ್ಯುತ್ತಮ ದಾರಿ. ಇದರಲ್ಲಿ ನೀವು ಐದು ವರ್ಷಗಳಿಗೆ ಹಣ ಠೇವಣಿ ಇರಿಸಬೇಕು. ಈ ಯೋಜನೆಯಲ್ಲಿ ಪ್ರಸ್ತುತ ಬಡ್ಡಿ ದರ ಶೇ 7.4ರಷ್ಟಿದೆ. ಈ ಯೋಜನೆಯಲ್ಲಿ ಕೆಲ ಸಾವಿರಗಳಿಂದ ಹಿಡಿದು ಗರಿಷ್ಠ ₹15 ಲಕ್ಷದವರೆಗೆ ಹೂಡಿಕೆ ಮಾಡಬಹುದು. ವೈಯಕ್ತಿಕವಾಗಿ ₹9 ಲಕ್ಷ ಹೂಡಿಕೆ ಮಾಡಿದರೆ ಪ್ರತಿ ತಿಂಗಳು ನಿಮ್ಮ ಕೈಗೆ ₹5,550 ಬಡ್ಡಿ ಸಿಗುತ್ತದೆ. ಅದೇ ಜಂಟಿ ಖಾತೆಯಾಗಿದ್ದರೆ ₹15 ಲಕ್ಷದವರೆಗೆ ಹೂಡಿಕೆ ಮಾಡಿ ತಿಂಗಳಿಗೆ ₹9,250 ಆದಾಯ ಪಡೆಯಬಹುದು. ಅಸಲು ಸಂಪೂರ್ಣ ಸುರಕ್ಷಿತ. ಆದರೆ ಬರುವ ಬಡ್ಡಿಗೆ ತೆರಿಗೆ ಅನ್ವಯಿಸುತ್ತದೆ ಎಂಬುದನ್ನು ಮರೆಯಬೇಡಿ.

2. ಹಿರಿಯ ನಾಗರಿಕರ ಉಳಿತಾಯ ಯೋಜನೆ: ನಿಮ್ಮ ವಯಸ್ಸು 60 ದಾಟಿದ್ದರೆ, ನಿವೃತ್ತಿಯ ಹಣ ಕೈಯಲ್ಲಿದ್ದರೆ ಇದಕ್ಕಿಂತ ಉತ್ತಮವಾದ ಸುರಕ್ಷಿತ ಹೂಡಿಕೆ ಮತ್ತೊಂದಿಲ್ಲ. ಪ್ರಸ್ತುತ ಈ ಯೋಜನೆಯು ಶೇ 8.2ರಷ್ಟು ಬಡ್ಡಿ ದರವನ್ನು ನೀಡುತ್ತಿದೆ. ಇದರಲ್ಲಿ ಗರಿಷ್ಠ ₹30 ಲಕ್ಷದವರೆಗೆ ಹೂಡಿಕೆ ಮಾಡಲು ಅವಕಾಶವಿದೆ. ಇದರ ವಿಶೇಷವೆಂದರೆ ಸೆಕ್ಷನ್ 80 ಸಿ ಅಡಿಯಲ್ಲಿ ತೆರಿಗೆ ವಿನಾಯಿತಿ ಸಿಗುತ್ತದೆ. ಈ ಯೋಜನೆಯಲ್ಲಿ ಹಣವು ಪ್ರತಿ ಮೂರು ತಿಂಗಳಿಗೊಮ್ಮೆ ಅಂದರೆ ಏಪ್ರಿಲ್, ಜುಲೈ, ಅಕ್ಟೋಬರ್ ಮತ್ತು ಜನವರಿಯಲ್ಲಿ ಪಾವತಿಯಾಗುತ್ತದೆ. ನೀವು ₹30 ಲಕ್ಷ ಹೂಡಿಕೆ ಮಾಡಿದರೆ, ಪ್ರತಿ ಮೂರು ತಿಂಗಳಿಗೆ ₹61,500 ಸಿಗುತ್ತದೆ. ಅಂದರೆ ತಿಂಗಳಿಗೆ ಸರಾಸರಿ ₹20,500 ನಿಮ್ಮದಾಗುತ್ತದೆ. ಹಿರಿಯ ನಾಗರಿಕರ ಉಳಿತಾಯ ಯೋಜನೆಯಲ್ಲಿ (ಎಸ್‌ಸಿಎಸ್‌ಎಸ್) ಕನಿಷ್ಠ ₹1 ಸಾವಿರದಿಂದಲೂ ಹೂಡಿಕೆ ಸಾಧ್ಯವಿದೆ.

3. ಕಾರ್ಪೊರೇಟ್ ಸಾಲಪತ್ರಗಳು ಮತ್ತು ಎನ್‌ಸಿಡಿಗಳು: ಬ್ಯಾಂಕ್ ನಿಶ್ಚಿತ ಠೇವಣಿಗಿಂತ (ಎಫ್.ಡಿ) ಸ್ವಲ್ಪ ಹೆಚ್ಚಿನ ಲಾಭ ಬೇಕು ಎನ್ನುವವರಿಗೆ ಕಾರ್ಪೊರೇಟ್ ಸಾಲಪತ್ರಗಳು ಸೂಕ್ತ. ಸರಳವಾಗಿ ಹೇಳುವುದಾದರೆ, ಇಲ್ಲಿ ದೊಡ್ಡ ಕಂಪನಿಗಳಿಗೆ ನಿಮ್ಮ ಹೂಡಿಕೆ ಹಣವನ್ನು ಸಾಲವಾಗಿ ನೀಡಲಾಗುತ್ತದೆ. ಅದಕ್ಕೆ ಪ್ರತಿಯಾಗಿ ಅವು ನಿಮಗೆ ಬಡ್ಡಿ ನೀಡುತ್ತವೆ. ಕಂಪನಿಗಳ ಗುಣಮಟ್ಟಕ್ಕೆ ಅನುಗುಣವಾಗಿ ಇಲ್ಲಿ ಶೇ 8ರಿಂದ ಶೇ 11ರಷ್ಟು ವಾರ್ಷಿಕ ಲಾಭ ಸಿಗಬಹುದು. ಪ್ರತಿ ತಿಂಗಳು ಅಥವಾ ಮೂರು ತಿಂಗಳಿಗೊಮ್ಮೆ ಹಣ ಪಡೆಯುವ ಆಯ್ಕೆ ಇರುತ್ತದೆ. ಹೂಡಿಕೆ ಮಾಡುವ ಮೊದಲು ಆ ಕಂಪನಿಯ ಕ್ರೆಡಿಟ್ ರೇಟಿಂಗ್ ಗಮನಿಸುವುದು ಮುಖ್ಯ. ಯಾವಾಗಲೂ 'ಎಎಎ' ಅಥವಾ 'ಎಎ +' ರೇಟಿಂಗ್ ಇರುವ ಕಂಪನಿಗಳನ್ನೇ ಆರಿಸಿಕೊಳ್ಳಿ. ಉದಾಹರಣೆಗೆ, ₹15 ಲಕ್ಷ ಹೂಡಿಕೆ ಮಾಡಿದರೆ ತಿಂಗಳಿಗೆ ಸುಮಾರು ₹10 ಸಾವಿರ ಆದಾಯ ನಿರೀಕ್ಷಿಸಬಹುದು.

4. ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್: ಬೆಂಗಳೂರಿನಂತಹ ನಗರಗಳಲ್ಲಿ ನಿವೇಶನ ಖರೀದಿಸಿ, ಮನೆ ಕಟ್ಟಿ, ಬಾಡಿಗೆದಾರರನ್ನು ನಿಭಾಯಿಸುವುದು ದೊಡ್ಡ ಸಾಹಸವೇ ಸರಿ. ಆದರೆ ರಿಯಲ್ ಎಸ್ಟೇಟ್ ಹೂಡಿಕೆ ಟ್ರಸ್ಟ್ (ಆರ್‌ಇಐಟಿ) ಮೂಲಕ ನೀವು ಈ ಯಾವುದೇ ಕಿರಿಕಿರಿ ಇಲ್ಲದೆ ರಿಯಲ್ ಎಸ್ಟೇಟ್‌ನಿಂದ ಆದಾಯ ಪಡೆಯಬಹುದು. ನೀವು ದೊಡ್ಡ ದೊಡ್ಡ ಐ.ಟಿ ಪಾರ್ಕ್‌ಗಳು ಅಥವಾ ಮಾಲ್‌ಗಳ ಮಾಲೀಕತ್ವ ಹೊಂದಿರುವ ಕಂಪನಿಗಳಲ್ಲಿ ಹೂಡಿಕೆ ಮಾಡುತ್ತೀರಿ. ಆ ಕಂಪನಿಗಳು ಬರುವ ಬಾಡಿಗೆಯ ಶೇ 90ರಷ್ಟು ಭಾಗವನ್ನು ನಿಮಗೆ ಹಂಚುತ್ತವೆ. ಇಲ್ಲಿ ವರ್ಷಕ್ಕೆ ಶೇ 6.5ರಷ್ಟು ಡಿವಿಡೆಂಡ್ ಸಿಗುವ ಸಾಧ್ಯತೆ ಇರುತ್ತದೆ. ವಿಶೇಷವೆಂದರೆ, ನಿಮಗೆ ಹಣದ ಅವಶ್ಯಕತೆ ಇದ್ದಾಗ ಈ ಯೂನಿಟ್‌ಗಳನ್ನು ಷೇರು ಮಾರುಕಟ್ಟೆಯಲ್ಲಿ ಸುಲಭವಾಗಿ ಮಾರಿ ಹಣ ಪಡೆಯಬಹುದು. ₹35 ಲಕ್ಷ ಹೂಡಿಕೆಗೆ ತಿಂಗಳಿಗೆ ಸುಮಾರು ₹18,958 ಆದಾಯ ಪಡೆಯುವ ಅವಕಾಶ ಇಲ್ಲಿದೆ.

5. ಮ್ಯೂಚುವಲ್ ಫಂಡ್ ಎಸ್‌ಡಬ್ಲ್ಯುಪಿ: ಮ್ಯೂಚುವಲ್ ಫಂಡ್‌ನಿಂದ ಪ್ರತಿ ತಿಂಗಳು ಹಣ ಹಿಂಪಡೆಯುವ ವ್ಯವಸ್ಥೆಯನ್ನೇ 'ವ್ಯವಸ್ಥಿತ ಹಣ ಹಿಂಪಡೆಯುವಿಕೆ' (ಎಸ್‌ಡಬ್ಲ್ಯುಪಿ) ಎನ್ನುತ್ತಾರೆ. ಇದು ಸಾಮಾನ್ಯ ಡಿವಿಡೆಂಡ್‌ಗಿಂತ ಹೆಚ್ಚಿನ ಮಟ್ಟದಲ್ಲಿ ತೆರಿಗೆ ಉಳಿತಾಯ ಮಾಡಿಕೊಡುತ್ತದೆ. ದೊಡ್ಡ ಮೊತ್ತವನ್ನು ಹೈಬ್ರಿಡ್ ಅಥವಾ ಸಾಲಪತ್ರ ಆಧಾರಿತ ಫಂಡ್‌ನಲ್ಲಿ ಹೂಡಿಕೆ ಮಾಡಿ, ಪ್ರತಿ ತಿಂಗಳು ಇಂತಿಷ್ಟು ಹಣ ಬೇಕು ಎಂಬ ಸೂಚನೆ ನೀಡಬೇಕು. ಫಂಡ್‌ನ ಗಳಿಕೆಯ ಆಧಾರದ ಮೇಲೆ ಶೇ 8ರಷ್ಟು ವಾರ್ಷಿಕ ಲಾಭ ನಿರೀಕ್ಷಿಸಬಹುದು. ಉದಾಹರಣೆಗೆ, ₹25 ಲಕ್ಷ ಹೂಡಿಕೆ ಮಾಡಿದರೆ ನಿಮ್ಮ ಮೂಲ ಹಣಕ್ಕೆ ಧಕ್ಕೆಯಾಗದಂತೆ ಪ್ರತಿ ತಿಂಗಳು ₹16,500 ನಿರಂತರವಾಗಿ ಪಡೆಯಬಹುದು.

6. ಇನ್‌ಫ್ರಾಸ್ಟ್ರಕ್ಚರ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್: ಹೆದ್ದಾರಿಗಳಲ್ಲಿ ಸಂಚರಿಸುವಾಗ ಪಾವತಿಸುವ ರಸ್ತೆ ಶುಲ್ಕದಿಂದ ಆದಾಯ ಗಳಿಸಬಹುದು ಎಂದರೆ ಆಶ್ಚರ್ಯವಾಗುತ್ತದೆಯೇ? ಇನ್‌ಫ್ರಾಸ್ಟ್ರಕ್ಚರ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್ (ಇನ್ವಿಟ್ಸ್) ಅಥವಾ ಮೂಲಸೌಕರ್ಯ ಹೂಡಿಕೆ ಟ್ರಸ್ಟ್‌ಗಳು ಇದನ್ನೇ ಮಾಡುತ್ತವೆ. ಇವು ಹೆದ್ದಾರಿಗಳು, ಪೈಪ್‌ಲೈನ್‌ಗಳು ಮತ್ತು ವಿದ್ಯುತ್ ಮಾರ್ಗಗಳ ಮೇಲೆ ಹೂಡಿಕೆ ಮಾಡುತ್ತವೆ. ಜನರು ಬಳಸುವ ಈ ಸೌಲಭ್ಯಗಳಿಂದ ಬರುವ ಆದಾಯವನ್ನು ಇವು ಹೂಡಿಕೆದಾರರಿಗೆ ಹಂಚುತ್ತವೆ. ಇವುಗಳ ಲಾಭ ಆರ್‌ಇಐಟಿಗಿಂತ ಸ್ವಲ್ಪ ಹೆಚ್ಚಿರುತ್ತದೆ, ಸುಮಾರು ಶೇ 9ರಷ್ಟು ಡಿವಿಡೆಂಡ್ ನೀಡುತ್ತವೆ. ನೀವು ₹30 ಲಕ್ಷ ಹೂಡಿಕೆ ಮಾಡಿದರೆ ತಿಂಗಳಿಗೆ ಸರಾಸರಿ ₹22,500 ಕೈಸೇರುತ್ತದೆ.

ಪ್ರತಿ ಹೂಡಿಕೆಯೂ ತನ್ನದೇ ಆದ ಅನುಕೂಲ ಮತ್ತು ಸಣ್ಣಮಟ್ಟದ ಅಪಾಯವನ್ನು ಹೊಂದಿರುತ್ತದೆ. ಅಂಚೆ ಕಚೇರಿಯಂತಹ ಅತ್ಯಂತ ಸುರಕ್ಷಿತ ದಾರಿಯಿಂದ ಹಿಡಿದು, ಹೆಚ್ಚಿನ ಲಾಭ ನೀಡುವ ಇನ್ವಿಟ್ಸ್‌ವರೆಗೆ ನಿಮ್ಮ ಆಯ್ಕೆ ಯಾವುದಿರಬೇಕು ಎಂಬುದು ನಿಮ್ಮ ಅಗತ್ಯಕ್ಕೆ ಬಿಟ್ಟಿದ್ದು. ನಿಮಗೆ ಗೊತ್ತಿರಲಿ, ಹಣ ಉಳಿಸುವುದಷ್ಟೇ ಮುಖ್ಯವಲ್ಲ, ಅದನ್ನು ಸರಿಯಾದ ಕಡೆ ಹೂಡಿ ನಮಗಾಗಿ ದುಡಿಯುವಂತೆ ಮಾಡುವುದೂ ಮುಖ್ಯ.

ಅಕ್ಷಯ ತೃತೀಯಾ: ಚಿನ್ನ ಖರೀದಿ ಜೋರು

ರಾಜ್ಯದಲ್ಲಿ 1.25 ಟನ್ ಚಿನ್ನ, 10 ಟನ್ ಬೆಳ್ಳಿ ಮಾರಾಟ • ₹2 ಸಾವಿರ ಕೋಟಿ ವಹಿವಾಟು ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ಷಯ ತೃತೀಯಾ ಅಂಗವಾಗಿ ರಾಜ್ಯದಲ್ಲಿ ಚಿನ್ನ ಮತ್ತು ಬೆಳ್ಳಿ ಖರೀದಿ ಭರಾಟೆ ಭಾನುವಾರ ಜೋರಾಗಿದೆ. ಈ ಬಾರಿ ಅಕ್ಷಯ ತೃತೀಯಾ ಎರಡು ದಿನ (ಭಾನುವಾರ ಮತ್ತು ಸೋಮವಾರ) ಇದೆ. ಹೀಗಾಗಿ ವಹಿವಾಟು ಹೆಚ್ಚಳವಾಗುವ ನಿರೀಕ್ಷೆ ವರ್ತಕರಿಗೆ ಇದೆ.

'ರಾಜ್ಯದಲ್ಲಿ ಈ ಬಾರಿ ಅಕ್ಷಯ ತೃತೀಯಾ ವೇಳೆ 1.25 ಟನ್‌ನಷ್ಟು ಚಿನ್ನ, 10 ಟನ್ ಬೆಳ್ಳಿ ಮಾರಾಟವಾಗಲಿದೆ ಎಂದು ಅಂದಾಜಿಸಲಾಗಿದೆ. ಕಳೆದ ವರ್ಷದ ಅಕ್ಷಯ ತೃತೀಯಾ ದಿನದಂದು ₹1,500 ಕೋಟಿ ವಹಿವಾಟು ನಡೆದಿತ್ತು. ಈ ಬಾರಿ ₹1,800 ಕೋಟಿಯಿಂದ ₹2 ಸಾವಿರ ಕೋಟಿವರೆಗೆ ವಹಿವಾಟು ಆಗುವ ನಿರೀಕ್ಷೆ ಇದೆ. ಬೆಂಗಳೂರಿನಲ್ಲಿಯೇ ₹800 ಕೋಟಿ ವಹಿವಾಟು ಆಗಲಿದೆ' ಎಂದು ಬೆಂಗಳೂರು ಜ್ಯುವೆಲರ್ಸ್ ಅಸೋಸಿಯೇಷನ್‌ನ ಕಾರ್ಯದರ್ಶಿ ಆರ್. ಶ್ರೀನಿವಾಸ್ 'ಪ್ರಜಾವಾಣಿ'ಗೆ ತಿಳಿಸಿದರು.



ಅಕ್ಷಯ ತೃತೀಯಾ ದಿನ ಬೆಂಗಳೂರಿನ ಮಹಾಲಕ್ಷ್ಮಿಪುರದಲ್ಲಿರುವ ಮಳಿಗೆಯೊಂದರಲ್ಲಿ ಚಿನ್ನಾಭರಣ ಖರೀದಿಯಲ್ಲಿ ಮಹಿಳೆಯರು ತೊಡಗಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರಿನಲ್ಲಿ ಚಿನ್ನಾಭರಣ ಖರೀದಿ ಮಾಡುವವರ ಅನುಕೂಲಕ್ಕಾಗಿ ಕೆಲವು ಮಳಿಗೆಗಳು ಭಾನುವಾರ ರಾತ್ರಿ 12 ಗಂಟೆವರೆಗೂ ತೆರೆದಿದ್ದವು.

ಅಕ್ಷಯ ತೃತೀಯಾ ದಿನ ಆಭರಣ ಖರೀದಿ ಶುಭಪ್ರದ ಎಂಬ ನಂಬಿಕೆ ಹಲವರಲ್ಲಿದೆ. ಹೀಗಾಗಿ, ನಾಣ್ಯಗಳ ಖರೀದಿಗಿಂತ ಆಭರಣ ಖರೀದಿ ಹೆಚ್ಚಳವಾಗಿದೆ. ಕಳೆದ ಬಾರಿ ಹೆಚ್ಚಿನ ತೂಕದ ಆಭರಣಗಳನ್ನು ಜನರು ಖರೀದಿಸಿದ್ದರು. ಆದರೆ, ಈ ಬಾರಿ ಚಿನ್ನ ಮತ್ತು ಬೆಳ್ಳಿ ದರದಲ್ಲಿ ಏರಿಕೆ ಆಗಿರುವುದರಿಂದ ಕಡಿಮೆ ತೂಕದ ಆಭರಣಗಳ ಖರೀದಿಗೆ ಒಲವು ತೋರಿದ್ದಾರೆ ಎಂದರು.

ಬೆಳ್ಳಿ ನಾಣ್ಯಗಳ ಖರೀದಿಗೆ ಸಹ ಹೆಚ್ಚಿನ ಬೇಡಿಕೆ ಇದೆ. ಭಾನುವಾರ ಬೆಂಗಳೂರಿನ ರಿಟೇಲ್ ಮಾರುಕಟ್ಟೆಯಲ್ಲಿ 10 ಗ್ರಾಂ ಚಿನ್ನದ ದರ (24 ಕ್ಯಾರೆಟ್) ₹1.58 ಲಕ್ಷ, ಬೆಳ್ಳಿ ಧಾರಣೆ ಕೆ.ಜಿಗೆ ₹2.62 ಲಕ್ಷ ಇತ್ತು.

₹20 ಸಾವಿರ ಕೋಟಿಗೆ ಹೆಚ್ಚಳ ನಿರೀಕ್ಷೆ: 2025ರ ಅಕ್ಷಯ ತೃತೀಯಾ ದಿನದಂದು ದೇಶದಲ್ಲಿ 15ರಿಂದ 16 ಟನ್‌ನಷ್ಟು ಚಿನ್ನ ಮಾರಾಟವಾಗಿದ್ದು, ₹16 ಸಾವಿರ ಕೋಟಿಯಷ್ಟು ವಹಿವಾಟು ನಡೆದಿತ್ತು. ಅದು ಈ ಬಾರಿ 12 ಟನ್‌ಗೆ ಇಳಿಯುವ (ಶೇ 30ರಷ್ಟು ಕಡಿಮೆ) ನಿರೀಕ್ಷೆ ಇದೆ. ಆದರೆ, ಹಣಕಾಸಿನ ಮೌಲ್ಯದ ಲೆಕ್ಕದಲ್ಲಿ ₹20 ಸಾವಿರ ಕೋಟಿಗೆ ಹೆಚ್ಚಳವಾಗಲಿದೆ ಎಂದು ಹೇಳಿದರು.

ಶೇ 10ರಷ್ಟು ಮಾರಾಟ ಹೆಚ್ಚಳ

ಕಳೆದ ವರ್ಷದ ಅಕ್ಷಯ ತೃತೀಯಾ ವೇಳೆ ಆಭರಣಗಳ ಮಾರಾಟವಾಗಿದ್ದಕ್ಕೆ ಹೋಲಿಸಿದರೆ, ಈ ಬಾರಿ ಮಾರಾಟದಲ್ಲಿ ಶೇ 10ರಷ್ಟು ಹೆಚ್ಚಳವಾಗಿದೆ.

'ಜಾಗತಿಕ ಮಟ್ಟದಲ್ಲಿ ಸಂಘರ್ಷ ವಾತಾವರಣವಿದ್ದರೂ, ಅಮೂಲ್ಯ ಲೋಹಗಳನ್ನು ಖರೀದಿಸಲು ಗ್ರಾಹಕರು ಮುಂದಾಗಿದ್ದರು. ಚಿನ್ನ ಮತ್ತು ಬೆಳ್ಳಿ ದರದಲ್ಲಿ ಸ್ಥಿರತೆ ಇದೆ. ಇದೇ ಮಾರಾಟ ಹೆಚ್ಚಳಕ್ಕೆ ಕಾರಣ' ಎಂದು ಕರ್ನಾಟಕ ರಾಜ್ಯ ಆಭರಣ ತಯಾರಕರ ಸಂಘದ ಅಧ್ಯಕ್ಷ ಬಿ.ರಾಮಾಚಾರಿ ತಿಳಿಸಿದರು.

ಬಸವ ಜಯಂತಿ ಅಂಗವಾಗಿ ಬಸವೇಶ್ವರರ ಚಿನ್ನ ಮತ್ತು ಬೆಳ್ಳಿ ನಾಣ್ಯ ಬಿಡುಗಡೆ ಮಾಡಲಾಗಿದೆ ಎಂದು ಹೇಳಿದರು.

ಗುಂಡಿನ ದಾಳಿಯಲ್ಲಿ ಇಬ್ಬರು ಭಾರತೀಯರು ಸಾವು



ರೋಮ್ (ಪಿಟಿಐ): ಇಟಲಿಯ ಬೆರ್ಗಾಮೊ ಪ್ರಾಂತ್ಯದ ಕೊವೊದಲ್ಲಿ ಇಬ್ಬರು ಭಾರತೀಯರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದೆ ಎಂದು ಸ್ಥಳೀಯ ಮಾಧ್ಯಮಗಳು ಭಾನುವಾರ ವರದಿ ಮಾಡಿವೆ.

ಕೊವೊ ನಿವಾಸಿ ರಾಜಿಂದರ್ ಸಿಂಗ್ (48) ಹಾಗೂ ಅಗ್ನಾಡೆಲ್ಲೊ ನಿವಾಸಿ ಗುರ್ಮಿತ್ ಸಿಂಗ್ (48) ಮೃತರು.

ಇಲ್ಲಿರುವ ಗುರುದ್ವಾರದಲ್ಲಿ ವೈಸಾಖಿ ಆಚರಣೆಗೆಂದು ಇಲ್ಲಿ ಹಲವರು ಸೇರಿದ್ದರು. ಈ ವೇಳೆ ವ್ಯಕ್ತಿಯೊಬ್ಬ ಇದ್ದಕ್ಕಿದ್ದಂತೆ ಗುಂಡಿನ ದಾಳಿ ನಡೆಸಿದ್ದು, ಬಳಿಕ ಕಾರಿನಲ್ಲಿ ಪರಾರಿಯಾಗಿರುವ ಘಟನೆ ಶುಕ್ರವಾರ ರಾತ್ರಿ ನಡೆದಿದೆ ಎಂದು ಪತ್ರಿಕೆಯೊಂದು ವರದಿ ಮಾಡಿದೆ.

ದಾಳಿಕೋರನೂ ಭಾರತೀಯನೇ ಆಗಿದ್ದು, ಆಗಾಗ ಗುರುದ್ವಾರಕ್ಕೆ ಬರುತ್ತಿದ್ದ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದ್ದಾರೆ. ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ.

ಮದ್ಯ ಸುಂಕ: ರಾಜ್ಯದ ಕ್ರಮಕ್ಕೆ ಬಿಎಐ ಸ್ವಾಗತ



ನವದೆಹಲಿ (ಪಿಟಿಐ): ಪೇಯದಲ್ಲಿ ಇರುವ ಮದ್ಯದ ಪ್ರಮಾಣಕ್ಕೆ ಅನುಗುಣವಾಗಿ ಸುಂಕ ವಿಧಿಸುವ ಕರ್ನಾಟಕದ ಕ್ರಮವನ್ನು ಇತರ ರಾಜ್ಯಗಳೂ ಅನುಕರಿಸಬೇಕು ಎಂಬ ನಿರೀಕ್ಷೆ ಹೊಂದಿರುವುದಾಗಿ ಭಾರತೀಯ ಮದ್ಯ ತಯಾರಕರ ಸಂಘ (ಬಿಎಐ) ಹೇಳಿದೆ.

ಮದ್ಯದ ಪ್ರಮಾಣಕ್ಕೆ ಅನುಗುಣವಾಗಿ ಪೇಯದ ಮೇಲೆ ಸುಂಕ ವಿಧಿಸುವುದಕ್ಕೆ ಸಂಬಂಧಿಸಿದ ಕರಡು ಅಧಿಸೂಚನೆಯನ್ನು ರಾಜ್ಯ ಸರ್ಕಾರವು ಶನಿವಾರ ಹೊರಡಿಸಿದೆ.

ಕರ್ನಾಟಕ ಇರಿಸಿರುವ ಹೆಜ್ಜೆಯು ಮಹತ್ವದ ಪರಿವರ್ತನೆ ತರುವಂಥದ್ದು ಎಂದು ಹೇಳಿರುವ ಬಿಎಐ, ಇದರಿಂದಾಗಿ ವರಮಾನ ಸಂಗ್ರಹವು ಉತ್ತಮವಾಗಲಿದೆ ಎಂದು ಹೇಳಿದೆ.

ಮದ್ಯದ ಮೇಲೆ ತೆರಿಗೆ ವಿಧಿಸಬೇಕೇ ವಿನಾ ಅದರ ಜೊತೆ ಇರುವ ನೀರಿನ ಮೇಲೆ ಅಲ್ಲ ಎಂಬ ನಂಬಿಕೆಯ ಆಧಾರದಲ್ಲಿ 'ಕರ್ನಾಟಕ ಅಬಕಾರಿ (ಅಬಕಾರಿ ಸುಂಕ ಮತ್ತು ಶುಲ್ಕಗಳ ತಿದ್ದುಪಡಿ) ನಿಯಮ - 2026' ಹೊಸ ತೆರಿಗೆ ವ್ಯವಸ್ಥೆಯನ್ನು ರೂಪಿಸುತ್ತದೆ ಎಂದು ಬಿಎಐ ಹೇಳಿದೆ.

'ಇದು ಮದ್ಯದ ಮೇಲಿನ ತೆರಿಗೆಯ ವಿಚಾರದಲ್ಲಿ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಶಿಫಾರಸು ಮಾಡಿರುವುದಕ್ಕೆ ಅನುಗುಣವಾಗಿದೆ. ಇದನ್ನು ಜಾಗತಿಕವಾಗಿ ವ್ಯಾಪಕವಾಗಿ ಅನುಸರಿಸಲಾಗುತ್ತಿದೆ' ಎಂದೂ ಬಿಎಐ ಹೇಳಿದೆ.

ದೇಶದ ಪ್ರಮುಖ ಮದ್ಯ ತಯಾರಿಕಾ ಕಂಪನಿಗಳಾದ ಯುನೈಟೆಡ್ ಬ್ರೀವರಿಸ್, ಎಬಿಇನ್‌ಬೆವ್, ಕಾರ್ಲ್ಸ್‌ಬರ್ಗ್ ಈ ಸಂಘಟನೆಯ ಸದಸ್ಯತ್ವ ಹೊಂದಿವೆ. ಇವು ಒಟ್ಟಾಗಿ ದೇಶದ ಬಿಯರ್ ಮಾರುಕಟ್ಟೆಯಲ್ಲಿ ಶೇ 85ರಷ್ಟು ಪಾಲು ಹೊಂದಿವೆ.

ಪೇಯದಲ್ಲಿ ಇರುವ ಮದ್ಯದ ಪ್ರಮಾಣಕ್ಕೆ ಅನುಗುಣವಾದ ಸುಂಕ ವಿಧಿಸುವ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಭಾಷಣದಲ್ಲಿ ಪ್ರಕಟಿಸಿದ್ದರು.

'ಈ ಬಗೆಯ ತೆರಿಗೆ ವ್ಯವಸ್ಥೆಯನ್ನು ಘೋಷಿಸುವ ಮೂಲಕ ಕರ್ನಾಟಕವು ವರಮಾನ ಹೆಚ್ಚಳ ಗುರಿಯನ್ನು ಅಪೇಕ್ಷಿತ ಸಾರ್ವಜನಿಕ ಆರೋಗ್ಯದ ಜೊತೆ ಜೋಡಿಸಿದ ಮೊದಲ ರಾಜ್ಯವಾಗಿದೆ' ಎಂದು ಬಿಎಐ ಮಹಾನಿರ್ದೇಶಕ ವಿನೋದ್ ಗಿರಿ ಹೇಳಿದ್ದಾರೆ.

ಶ್ರೀಲಂಕಾ ಅಧ್ಯಕ್ಷರ ಭೇಟಿಯಾದ ಉಪರಾಷ್ಟ್ರಪತಿ

ಕೊಲಂಬೊ (ಪಿಟಿಐ): ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಶ್ರೀಲಂಕಾ ಅಧ್ಯಕ್ಷ ಅನುರ ಕುಮಾರ ದಿಸ್ಸಾನಾಯಕೆ ಅವರನ್ನು ಭೇಟಿ ಮಾಡಿ, ಭಾರತದ ವಸತಿ ಯೋಜನೆ, ಉಭಯ ರಾಷ್ಟ್ರಗಳ ನಡುವಿನ ಮೀನುಗಾರರ ಸಮಸ್ಯೆಗಳು ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚೆ ನಡೆಸಿದರು.

ಎರಡು ದಿನಗಳ ಭೇಟಿಗಾಗಿ ಭಾನುವಾರ ಮುಂಜಾನೆ ಇಲ್ಲಿಗೆ ಆಗಮಿಸಿದ ರಾಧಾಕೃಷ್ಣನ್, ಶ್ರೀಲಂಕಾದಲ್ಲಿ ಅನುಷ್ಠಾನಗೊಳ್ಳುತ್ತಿರುವ ಭಾರತೀಯ ಯೋಜನೆಗಳು ಮತ್ತು ಭಾರತವು ಸೈಕ್ಲೋನ್ ದಿತ್ವಾಗಾಗಿ ನೀಡುವ 450 ಮಿಲಿಯನ್ ಅಮೆರಿಕನ್ ಡಾಲರ್ ನೆರವಿನ ಬಗ್ಗೆಯೂ ದಿಸ್ಸಾನಾಯಕೆ ಅವರೊಂದಿಗೆ ಚರ್ಚಿಸಿದರು.

49 ಸದಸ್ಯರ ನಿಯೋಗದೊಂದಿಗೆ ಶ್ರೀಲಂಕಾ ತಲುಪಿದ ಉಪ ರಾಷ್ಟ್ರಪತಿಯನ್ನು ಕೊಲಂಬೊದ ಭಂಡಾರನಾಯಕೆ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕ್ರೀಡಾ ಸಚಿವ ಸುನಿಲ್ ಕುಮಾರ ಗಮಗೆ ಮತ್ತು ಇತರ ಹಲವಾರು ಗಣ್ಯರು ಬರಮಾಡಿಕೊಂಡರು.



ಎರಡು ದಿನಗಳ ಭೇಟಿಗಾಗಿ ಭಾನುವಾರ ಶ್ರೀಲಂಕಾಕ್ಕೆ ಬಂದಿಳಿದ ಭಾರತದ ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಶ್ರೀಲಂಕಾದ ಪ್ರಧಾನ ಮಂತ್ರಿ ಹರಿಣಿ ಅಮರಸೂರ್ಯಾ ಅವರನ್ನು ಭೇಟಿ ಮಾಡಿದರು – ಪಿಟಿಐ ಚಿತ್ರ

ಲಂಚ ಪ್ರಕರಣ: ಇಬ್ಬರ ಬಂಧನ

ನವದೆಹಲಿ (ಪಿಟಿಐ): ಖಾಸಗಿ ಕಂಪನಿಯೊಂದಕ್ಕೆ ಡ್ರೋನ್‌ಗಳ ಆಮದು ಪ್ರಕ್ರಿಯೆಯನ್ನು ಸುಗಮಗೊಳಿಸಲು ₹2.5 ಲಕ್ಷ ಲಂಚ ಪಡೆದ ಆರೋಪದಡಿ ಇಬ್ಬರನ್ನು ಸಿಬಿಐ ಶನಿವಾರ ಬಂಧಿಸಿದೆ.

ಪ್ರಮುಖ ಕಾರ್ಪೊರೇಟ್ ಸಂಸ್ಥೆಯೊಂದರ ಹಿರಿಯ ಉಪಾಧ್ಯಕ್ಷ ಭರತ್ ಮಾಥುರ್ ಮತ್ತು ನಾಗರಿಕ ವಿಮಾನಯಾನ ನಿರ್ದೇಶನಾಲಯದ (ಡಿಜಿಸಿಎ) ವಾಯು ಯೋಗ್ಯತಾ ನಿರ್ದೇಶನಾಲಯದ ಉಪ ಮಹಾನಿರ್ದೇಶಕ ಮುದಾವತ್ ದೇವೂಲಾ ಬಂಧಿತರು.

'ಖಾಸಗಿ ಏರೋಸ್ಪೇಸ್ ಕಂಪನಿಯೊಂದಕ್ಕೆ ಸಂಬಂಧಿಸಿದಂತೆ ಡಿಜಿಸಿಎಯಲ್ಲಿ ಬಾಕಿ ಇರುವ ಅರ್ಜಿಗಳಿಗೆ ಅನುಮೋದನೆ ನೀಡಲು ಮುದಾವತ್ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ದಾಳಿ ವೇಳೆ, ₹2.5 ಲಕ್ಷ ನಗದನ್ನೂ ವಶಪಡಿಸಿಕೊಳ್ಳಲಾಗಿದೆ' ಎಂದು ಸಿಬಿಐ ವಕ್ತಾರರು ತಿಳಿಸಿದ್ದಾರೆ.

'ದೆಹಲಿಯಲ್ಲಿ ಇಬ್ಬರು ಆರೋಪಿಗಳಿಗೆ ಸೇರಿದ ನಾಲ್ಕು ಸ್ಥಳಗಳ ಮೇಲೆ ಸಿಬಿಐ ದಾಳಿ ನಡೆಸಿದ್ದು, ₹37 ಲಕ್ಷ ಮೌಲ್ಯದ ನಗದು, ಚಿನ್ನ, ಬೆಳ್ಳಿ ನಾಣ್ಯಗಳು ಮತ್ತು ವಿವಿಧ ಡಿಜಿಟಲ್ ಸಾಧನಗಳನ್ನು ವಶಪಡಿಸಿಕೊಂಡಿದೆ' ಎಂದು ಮಾಹಿತಿ ನೀಡಿದ್ದಾರೆ.

ಕ್ಷಿಪಣಿಗಳನ್ನು ಉಡಾಯಿಸಿದ ಉತ್ತರ ಕೊರಿಯಾ

ಸೋಲ್ (ಎಪಿ): 'ಶಸ್ತ್ರಾಸ್ತ್ರ ಪರೀಕ್ಷೆ ನಡೆಸುತ್ತಿರುವ ಉತ್ತರ ಕೊರಿಯಾವು ಹಲವಾರು ಕ್ಷಿಪಣಿಗಳನ್ನು ಉಡಾಯಿಸಿದ್ದು, ಅವುಗಳು ಸಮುದ್ರದಲ್ಲಿ ಬಿದ್ದಿವೆ. ಆ ದೇಶದ ಎಲ್ಲ ಚಟುವಟಿಕೆಗಳ ಕುರಿತು ಜಪಾನ್ ಮತ್ತು ಅಮೆರಿಕಕ್ಕೆ ಮಾಹಿತಿ ರವಾನಿಸಲಾಗುತ್ತಿದೆ' ಎಂದು ದಕ್ಷಿಣ ಕೊರಿಯಾ ಹೇಳಿದೆ.

'ಉತ್ತರ ಕೊರಿಯಾ ನಡೆಸಿದ ಶಸ್ತ್ರಾಸ್ತ್ರ ಪರೀಕ್ಷೆ ಕುರಿತು ತುರ್ತು ಸಭೆ ಕರೆಯಲು ರಾಷ್ಟ್ರೀಯ ಭದ್ರತಾ ಕೌನ್ಸಿಲ್ ಚಿಂತಿಸುತ್ತಿದೆ' ಎಂದು ದಕ್ಷಿಣ ಕೊರಿಯಾದ ಅಧ್ಯಕ್ಷರ ಕಚೇರಿಯು ಮಾಹಿತಿ ನೀಡಿದೆ. 'ಕ್ಷಿಪಣಿಗಳು ಉತ್ತರ ಕೊರಿಯಾದ ವ್ಯಾಪ್ತಿಯ ಸಮುದ್ರದಲ್ಲಿಯೇ ಬಿದ್ದಿವೆ' ಎಂದಿರುವ ಜಪಾನ್, ಉತ್ತರ ಕೊರಿಯಾದ ಚಟುವಟಿಕೆಯನ್ನು ಖಂಡಿಸಿದೆ.

ಗುಂಡಿನ ದಾಳಿಗೆ 8 ಮಕ್ಕಳು ಬಲಿ

ಶ್ರೆವ್‌ಪೋರ್ಟ್ (ಅಮೆರಿಕ) (ಎಪಿ): ಅಮೆರಿಕದ ಲೂಸಿಯಾನಾದ ಶ್ರೆವ್‌ಪೋರ್ಟ್‌ನಲ್ಲಿ ಭಾನುವಾರ ನಡೆದ ಗುಂಡಿನ ದಾಳಿಯಲ್ಲಿ 1ರಿಂದ 14 ವರ್ಷದೊಳಗಿನ 8 ಮಕ್ಕಳು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಭಾನುವಾರ ಬೆಳಗಿನ ಜಾವ 6ರ ಸುಮಾರಿಗೆ ಮೂರು ಸ್ಥಳಗಳಲ್ಲಿ ಗುಂಡಿನ ದಾಳಿ ನಡೆದಿದೆ. ಒಟ್ಟು 10 ಮಂದಿಗೆ ಗುಂಡೇಟು ತಗುಲಿದೆ' ಎಂದು ಶ್ರೆವ್‌ಪೋರ್ಟ್ ಪೊಲೀಸ್ ಮುಖ್ಯಸ್ಥ ವೇಯ್ನ್ ಸ್ಮಿತ್ ಮಾಹಿತಿ ನೀಡಿದ್ದಾರೆ. ವಾಹನದಲ್ಲಿ ಪರಾರಿಯಾಗಲು ಯತ್ನಿಸಿದ ಆರೋಪಿಯು ಪೊಲೀಸರ ಗುಂಡಿಗೆ ಬಲಿಯಾಗಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಸ್ಸಾಂನ ಬಿಹು ಪ್ರದರ್ಶಿಸಿದ ಅಮೆರಿಕ ಗಗನಯಾತ್ರಿ

ಗುವಾಹಟಿ (ಪಿಟಿಐ): ಅಮೆರಿಕದ ಗಗನಯಾತ್ರಿಯೊಬ್ಬರು ಅಂತರ ರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ ಅಸ್ಸಾಂನ ಸಾಂಪ್ರದಾಯಿಕ 'ಬಿಹು' ಪ್ರದರ್ಶನ ನೀಡಿದ್ದಾರೆ. ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಗಗನಯಾತ್ರಿಯನ್ನು ಅಭಿನಂದಿಸಿದ್ದಾರೆ.

ಗಗನಯಾತ್ರಿ ಮೈಕ್ ಫಿಂಕೆ ಅವರು ಅಸ್ಸಾಂನ ರೆನಿಟಾ ಸೈಕಿಯಾ ಅವರನ್ನು ವಿವಾಹವಾಗಿದ್ದಾರೆ. ಬಾಹ್ಯಾಕಾಶದಲ್ಲಿ ಅವರು ಕುತ್ತಿಗೆಗೆ ಸಾಂಪ್ರದಾಯಿಕ 'ಗಮೋಸಾ' (ಸ್ಕಾರ್ಫ್) ಧರಿಸಿ, ಬಿಹು ಸಂಗೀತದೊಂದಿಗೆ ನೃತ್ಯ ಪ್ರದರ್ಶಿಸಿದ್ದಾರೆ.

ಈ ವಿಡಿಯೊವನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿರುವ ಹಿಮಂತ ಬಿಸ್ವಾ ಅವರು, 'ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಬಿಹು ಪ್ರದರ್ಶನಗೊಂಡಿದೆ. ಅಸ್ಸಾಂನ ಸಂಸ್ಕೃತಿಗೆ ವಿಶೇಷ ಗೌರವ ನೀಡಿದ್ದಕ್ಕಾಗಿ ಮೈಕ್ ಫಿಂಕೆ ಅವರಿಗೆ ಧನ್ಯವಾದಗಳು' ಎಂದು ಹೇಳಿದ್ದಾರೆ.

'ರೊಂಗಾಲಿ ಬಿಹು' ಹಬ್ಬದ ಮೂಲಕ ಅಸ್ಸಾಂನಲ್ಲಿ ಹೊಸ ವರ್ಷವನ್ನು ಬರಮಾಡಿಕೊಳ್ಳಲಾಗುತ್ತದೆ.

ಹೊರ್ಮುಜ್: ನಿರ್ಬಂಧ ಇನ್ನಷ್ಟು ಬಿಗಿ

ಒಂದನೇ ಪುಟದಿಂದ...

ಹೊರ್ಮುಜ್ ಜಲಸಂಧಿಯನ್ನು ಶುಕ್ರವಾರವಷ್ಟೇ ಎಲ್ಲ ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸಲಾಗಿತ್ತು. ಇದರಿಂದ ಶನಿವಾರ ಬೆಳಿಗ್ಗೆ ಕೆಲವು ಹಡಗುಗಳು ಜಲಸಂಧಿ ಮೂಲಕ ಸಾಗಿದ್ದವು. ಆದರೆ ಶನಿವಾರ ಮಧ್ಯಾಹ್ನ ಇರಾನ್, ತನ್ನ ನಿರ್ಧಾರ ಬದಲಿಸಿ ಈ ಮಾರ್ಗದಲ್ಲಿ ಹಡಗುಗಳ ಸಂಚಾರ ನಿರ್ಬಂಧಿಸಿದೆ.

ಭಾನುವಾರ ಜಲಸಂಧಿ ಮೂಲಕ ಯಾವುದೇ ಹಡಗು ಸಾಗಿಲ್ಲ ಎಂದು ಜಾಗತಿಕ ಕಚ್ಚಾ ತೈಲ ಸಾಗಾಟದ ಮೇಲೆ ನಿಗಾವಹಿಸುವ ಟ್ಯಾಂಕರ್ ಟ್ರ್ಯಾಕರ್ಸ್ ಡಾಟ್ ಕಾಂ ವರದಿ ಮಾಡಿದೆ. 'ಬೋಟ್ಸ್‌ವಾನ ಮತ್ತು ಅಂಗೋಲಾ ದೇಶಗಳ ಧ್ವಜ ಹೊಂದಿದ್ದ ಎರಡು ಹಡಗುಗಳಿಗೆ ಎಚ್ಚರಿಕೆ ನೀಡಿ ವಾಪಸ್ ಕಳುಹಿಸಲಾಯಿತು' ಎಂದು ತಸ್ನೀಮ್ ಸುದ್ದಿ ಸಂಸ್ಥೆ ತಿಳಿಸಿದೆ.

ಪಾಕಿಸ್ತಾನ: ಬಿಗಿ ಭದ್ರತಾ ವ್ಯವಸ್ಥೆ

ಇಸ್ಲಾಮಾಬಾದ್ (ಪಿಟಿಐ): ಎರಡನೇ ಸುತ್ತಿನ ಮಾತುಕತೆಯಲ್ಲಿ ಪಾಲ್ಗೊಳ್ಳಲಿರುವ ಅಮೆರಿಕ ಮತ್ತು ಇರಾನ್‌ನ ಪ್ರತಿನಿಧಿಗಳ ಸುರಕ್ಷತೆಯನ್ನು ಖಾತರಿಪಡಿಸಲು ಪಾಕಿಸ್ತಾನವು ಕಠಿಣ ಭದ್ರತಾ ಕ್ರಮಗಳನ್ನು ಕೈಗೊಂಡಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸಲು ಅಮೆರಿಕ-ಇರಾನ್ ನಡುವೆ ಏಪ್ರಿಲ್ 11 ಮತ್ತು 12ರಂದು ಇಸ್ಲಾಮಾಬಾದ್‌ನಲ್ಲಿ ಮಾತುಕತೆ ನಡೆದಿತ್ತು. ಆದರೆ ಈ ನೇರ ಮಾತುಕತೆಯು ಯಾವುದೇ ಒಪ್ಪಂದವಿಲ್ಲದೆ ಕೊನೆಗೊಂಡಿತ್ತು.

ಎರಡನೇ ಸುತ್ತಿನ ಮಾತುಕತೆಯ ತಾಣ ಅಂತಿಮಗೊಳ್ಳದಿದ್ದರೂ, ಅವಳಿ ನಗರಗಳಾದ ಇಸ್ಲಾಮಾಬಾದ್ ಮತ್ತು ರಾವಲ್ಪಿಂಡಿಯ ಸ್ಥಳೀಯಾಡಳಿತವು ಭಾರಿ ಭದ್ರತಾ ಕ್ರಮಗಳನ್ನು ತೆಗೆದುಕೊಂಡಿದೆ.

ರಾವಲ್ಪಿಂಡಿಯಲ್ಲಿ 10 ಸಾವಿರ ಪೊಲೀಸರನ್ನು ನಿಯೋಜಿಸಲಾಗಿದ್ದು, 600 ಕಡೆ ತಪಾಸಣಾ ಕೇಂದ್ರಗಳನ್ನು ತೆರೆಯಲಾಗಿದೆ. ನೂರ್ ಖಾನ್ ವಾಯು ನೆಲೆ ಮತ್ತು ಇಸ್ಲಾಮಾಬಾದ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜನರು ಮತ್ತು ವಾಹನಗಳ ಓಡಾಟವನ್ನು ನಿರ್ಬಂಧಿಸಲಾಗಿದೆ ಎಂದು 'ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್' ದಿನಪತ್ರಿಕೆ ವರದಿ ಮಾಡಿದೆ.

ಶಾಂತಿ ಮಾತುಕತೆ ಫಲಪ್ರದವಾದರೆ, ಒಪ್ಪಂದಕ್ಕೆ ಸಹಿ ಹಾಕಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪಾಕಿಸ್ತಾನಕ್ಕೆ ಭೇಟಿ ನೀಡುವ ಸಾಧ್ಯತೆಯಿದೆ ಎಂದು ಮೂಲವೊಂದು ತಿಳಿಸಿದೆ.



ಸಮಾಧಾನ

ಡಾ. ಡಿ.ಎಂ.ಹೆಗಡೆ, ಆಪ್ತಸಮಾಲೋಚಕ

'ಹುಂಬ ಮಗನನ್ನು ಸರಿದಾರಿಗೆ ತರುವುದು ಹೇಗೆ?'

'ಸಮಾಧಾನ' ಅಂಕಣ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


'ನೀಟ್' ದಿಕ್ಸೂಚಿ — Biology

ಎಸ್‌ಎಸ್‌ಎಲ್‌ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

64) Given below are two statements : One is labelled as Assertion (A) and other is labelled as Reason (R).
Assertion (A) : Cells of the tapetum possess dense cytoplasm and generally have more than one nucleus.
Reason (R) : Presence of more than one nucleus in the tapetum increases the efficiency of nourishing the developing microspore mother cells. In light of the above statements,
choose the most appropriate answer from the options given below:
(1) A is false but R is true
(2) Both A and R are true and R is the correct explanation of A
(3) Both A and R are true but R is NOT the correct explanation of A
(4) A is true but R is false
Ans (4)
Expln:-. Cell of the tapetum possess dense cytoplasm and generally have more than one nucleus because the presence of more than one nucleus in the tapetal cells increases the efficiency of nourishing the develpoing pollen grains.

65) There is no natural death in single celled organisms like Amoeba and bacteria because:
a) They cannot reproduce sexually
b) They reproduce by binary fission
c) Parental body is distributed among the offspring
d) They are microscopic
Ans:- c

66) The diagram given below represents the T S of dicot leaf. Identify the parts labelled as A, B, C, and D, which denote their functions and choose the correct one given below.



a) A-Motor action, B-Photosynthesis, C-Conduction, D-transpiration
b) A-Motor action, B-Conduction, C-Photosynthesis, D-transpiration
c) A-transpiration, B-Photosynthesis, C-Conduction, D-Transpiration
d) A-Tranpiration, B-Conduction, C-Photosynthesis, D-Motor action
Ans:- a;

Expln- In the diagram, between motor cells, gap has been shown. It looks like guard cell

67) The best definition of the process of gastrulation is that it is a process where the
a) Simple layered blastula becomes two layered
b) Archenteron is formed
c) Cells move to occupy their definite position
d) Zygote gets converted into larva.
Ans:- c;

68) Placenta is the region where
a) Foetus is attached to mother by umbilical cord
b) Foetus is provided with mother's blood
c) Foetus receives nourishment from mother's blood
d) Foetus is covered by membranes.
Ans:- c;

69) Pollen grains are shed at
a) One-celled stage b) 2-3 celled stage
c) 3-celled stage d) 4-celled stage
Ans:- b;

70) Anthesis means
a) Growth of pollen tube inside the carpel
b) Dehiscence of anthers
c) Opening of floral bud
d) Emergence of anthers
Ans:- c

71) There are various types of reproduction. The type of reproduction adopted by an organism depends on:
a) The habitat and morphology of the organism
b) Morphology of the organism
c) Morphology and physiology of the organism
d) The organism's habitat, physiology and genetic makeup
Ans:- d

72) Identify the incorrect statement.
a) In asexual reproduction, the offspring produced are morphologically and genetically identical to the parent
b) Zoospores are sexual reproductive structures
c) In asexual reproduction, a single parent produces offspring with or without the formation of gametes
d) Conidia are asexual structures in Penicillium
Ans:- b
Expln:- Totipotency is defined as the capacity to generate a whole plant from any cell of the plant

73) Which of the following is a post-fertilization event in flowering plants?
a) Transfer of pollen grains
b) Embryo development
c) Formation of flower
d) Formation of pollen grains
Ans:- b

(Contd....)

'ಸಿಇಟಿ' ದಿಕ್ಸೂಚಿ — MATHS

MULTIPLE CHOICE QUESTIONS

47) Consider the following statements.
Statement (I): If E and F are two independent events, then E' and F' are also independent.
Statement (II): Two mutually exclusive events with non-zero probabilities of occurrence cannot be independent.
Which of the following is correct?
(a) Statement (I) is true and statement (II) is false
(b) Statement (I) is false and statement (II) is true
(c) Both the statements are true
(d) Both the statements are false
Ans. C
Expln:- E and F are two independent events, then E' and F' are also independent. Statement I true

$A \cap B = \phi \Rightarrow P(A \cap B) = 0$ ..(1)

$P(A) \neq 0$ ...(2)

$P(B) \neq 0$ ....(3)

From eq(1), (2) and (3)

$P(A \cap B) \neq P(A).P(B)$ Statement II is true

48) In a simultaneous throw of a pair dice the probability of getting a total more than 7 is
A) $\frac{7}{12}$ B) $\frac{5}{36}$
C) $\frac{5}{12}$ D) $\frac{7}{36}$

Ans:-C
Expln:- The sample space consists of 36 numbers
Let X be the sum of the numbers on two dice which takes the values
2, 3, 4, 6, 7, 8, 9, 10, 11, or 12
P(x=8) P(2,6), (3,5), (4,4), (5,3), (6,2)
(i.e. sum more than 7 which is 8)

$\frac{5}{36}$

$P(x=9) = P\{(3,6),(4,5),(5,4)(6,3)\} = \frac{4}{36}$

$P(x=10) = P\{(4,6),(5,5),(6,4)\} = \frac{3}{36}$

$P(x=11) = P\{(5,6),(6,5)\} = \frac{2}{36}$

$P(x=12) = P\{(6,6),\} = \frac{1}{36}$

$\text{Required Probability} = \frac{5}{36}, \frac{4}{36}, \frac{3}{36}, \frac{2}{36}, \frac{1}{36} = \frac{15}{36} = \frac{5}{12}$

49) Consider the following statements :
Statement(I) : The set of all solutions of the linear inequalities $3x + 8 < 17$ and $2x + 8 \geq 12$ are $x < 3$ and $x \geq 2$ respectively.
Statement(II) : The common set of solutions of linear inequalities $3x + 8 < 17$ and $2x + 8 \geq 2$ is (2, 3)
Which of the following is true?
(a) Statement (I) is true but statement (II) is false
(b) Statement (I) is false but statement (II) is true
(C) Both the statements are true
(d) Both the statements are false
Ans. a
Expln:-
$3x + 8 < 17 \Rightarrow 3x < 9 \Rightarrow x < 3$
$2x + 8 \geq 12 \Rightarrow 2x \geq 4 \Rightarrow x \geq 2$
Statement I is correct.
The common set of solution $\Rightarrow \{2\}$
$\rightarrow$ Statement II is false

50) If in the expansion of $(1 + px)^n$, $n \in N$, the coefficients of x and x^2 are 8 and 24, then the values of n and p are
(A) n = 3, p = 2 (B) n = 5, p = 3
(C) n = 4, p = 3 (D) n = 4, p = 2
Ans: (D) n = 4, p = 2

$(1+px)^n = 1^n + nC_1 px + nC_2 p^2 x^2 + ... + p^n x^n$

Coeff. of $x = np$, coeff. of $x^2 = nC_2 p^2$

$= \frac{n(n+1)}{2} . p^2$

Given $np = 8$, $\frac{n(n-1)}{2} p^2 = 24$

$np = 8$ $(n^2 - n)p^2 = 48$

$n^2 p^2 - np. p = 48$

$64 - 8p = 48$

$\therefore 8p = 16$ $\therefore p = 2.$ $\therefore n = 4.$

51) If $A = \begin{bmatrix} 1 & 0 \\ 1 & 1 \end{bmatrix}$ and $A^8 = aA + bI$, then (a, b)
(A) (8, 7) (B) (-7, 8)
(C) (8, -7) (D) (-8, -7)
Ans: (C) (8, -7)

31) If $y = 2x^{n+1} + \frac{3}{x^n}$ then $x^2 \frac{d^2y}{dx^2}$ is ....
a) y b) 6n(n + 1)y
c) n(n +1)y d) $x \frac{dy}{dx} + y$

Answer: (c)
$y = (2x)^{(n+1)} + (3x)^{(-n)}$
$\Rightarrow dy/dx = 2(n+1)x^n - (3nx)^{(-n-1)}$
$\Rightarrow (d^2 y)/(dx^2) =$
$= 2n(n+1)x^{(n-1)} + 3n(n+1)x^{(-n-2)}$
$\Rightarrow x^2 (d^2 y)/(dx^2) = n(n+1) [(2x)^{(n+1)} + 3/x^n]$
$\Rightarrow x^2 (d^2 y)/(dx^2) = n(n+1)y$

52) If $y = |\cos x| + |\sin x|$, then $\frac{dy}{dx}$ at $x = \frac{2\pi}{3}$ is
(A) $\frac{1-\sqrt{3}}{2}$ (B) 0
(C) $\frac{1}{2}(\sqrt{3}-1)$ (D) None of these

Ans : (C) $\frac{1}{2}(\sqrt{3}-1)$

$\frac{dy}{dx} = \sin x + \cos x$ $\therefore \left(\frac{dy}{dx}\right)_{x=\frac{2\pi}{3}} = \sin 120^0 + \cos 120^0$

$= \frac{\sqrt{3}}{2} - \frac{1}{2} = \frac{\sqrt{3}-1}{2}.$



ಕ್ರೀಡಾ ವಿಜ್ಞಾನ

ಆಡದೆಯೂ ವೃತ್ತಿಪರರಾಗಬಹುದು!

• ಪ್ರದೀಪ್ ಎಸ್. ವೆಂಕಟರಾಮ್

ಭಾರೀ ಶಾಟ್... ಕ್ರಿಕೆಟ್ ಚೆಂಡು ಆಕಾಶಕ್ಕೇರಿದೆ– ಸಿಕ್ಸರ್ ಖಚಿತ ಎನ್ನುವ ಕ್ಷಣ! ಆದರೆ ಬೌಂಡರಿ ರೇಖೆಯ ಬಳಿ ಆಟಗಾರ ಓಡಿಬಂದು, ಗಾಳಿಯಲ್ಲಿ ಜಿಗಿದು, ಚೆಂಡು ಹೊರಗೆ ಹೋಗುವ ಮುನ್ನ ಒಳಗೆ ತಳ್ಳುತ್ತಾನೆ. ಓಡುತ್ತಲೇ ರೇಖೆಯ ಹೊರಗೆ ಹೋಗಿ, ಕ್ಷಣಾರ್ಧದಲ್ಲಿ ಮತ್ತೆ ಒಳಗೆ ಜಿಗಿದು ಅದ್ಭುತವಾದ ಕ್ಯಾಚ್ ಅನ್ನು ಪೂರ್ಣಗೊಳಿಸುತ್ತಾನೆ. ಖಚಿತ ಎನ್ನಿಸುತ್ತಿದ್ದ ಸಿಕ್ಸರ್, ಕ್ಷಣದಲ್ಲೇ ಔಟ್ ಆಗುತ್ತದೆ! ಈ ಪ್ರಕ್ರಿಯೆಯಲ್ಲಿ ಆಟಗಾರ ಎರಡು ಪಲ್ಟಿ ಹೊಡೆದು ನೆಲಕ್ಕೆ ಅಪ್ಪಳಿಸಿ ಬೀಳುತ್ತಾನೆ. ಆದರೆ, ಏನೂ ಆಗದೇ ಇರುವಂತೆ ಪುಟಿದೆದ್ದು ನಿಲ್ಲುತ್ತಾನೆ.

ಇಂತಹ ಕ್ಷಣಗಳು ಬರೀ ಅದೃಷ್ಟದ ಫಲವಲ್ಲ; ಅವು ದೇಹದ ಚಲನೆ, ವೇಗ, ಸಮತೋಲನ ಮತ್ತು ಸಮಯನಿಷ್ಠೆಯ ಅದ್ಭುತ ಸಮನ್ವಯ. ಇಂತಹ ಅಚ್ಚರಿ ಮೂಡಿಸುವ ಕ್ಷಣಗಳನ್ನು ಕ್ರಿಕೆಟ್, ಫುಟ್‌ಬಾಲ್, ಹಾಕಿ, ಜಿಮ್ನಾಸ್ಟ್ ಸೇರಿದಂತೆ ಎಲ್ಲಾ ಕ್ರೀಡೆಗಳಲ್ಲಿ ನೋಡಬಹುದು. ಇಲ್ಲಿ ಆಟಗಾರರು ತಮ್ಮ ದೇಹದ ಚಲನೆಗಳ ಮೇಲೆ ವಿಸ್ಮಯವೆನಿಸುವ ರೀತಿಯಲ್ಲಿ ಸಂಪೂರ್ಣ ನಿಯಂತ್ರಣವನ್ನು ಹೇಗೆ ಸಾಧಿಸುತ್ತಾರೆ?

ಇಂತಹ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡುವುದೇ 'ಕ್ರೀಡಾ ವಿಜ್ಞಾನ' (ಸ್ಪೋರ್ಟ್ಸ್ ಸೈನ್ಸ್). ಇದು, ಕ್ರೀಡೆಯನ್ನು ವೈಜ್ಞಾನಿಕವಾಗಿ ಅರ್ಥಮಾಡಿಕೊಳ್ಳುವ ಒಂದು ವಿಶಾಲವಾದ ಕ್ಷೇತ್ರ. ಇದರಲ್ಲಿ ಜೀವಯಂತ್ರಶಾಸ್ತ್ರ (ಬಯೊಮೆಕ್ಯಾನಿಕ್ಸ್), ವ್ಯಾಯಾಮ ದೇಹಶಾಸ್ತ್ರ (ಎಕ್ಸರ್‌ಸೈಸ್ ಫಿಸಿಯಾಲಜಿ), ಕ್ರೀಡಾ ಮನೋವಿಜ್ಞಾನ (ಸ್ಪೋರ್ಟ್ಸ್ ಸೈಕಾಲಜಿ), ಪೌಷ್ಟಿಕಾಂಶ ವಿಜ್ಞಾನದಂತಹ (ನ್ಯೂಟ್ರಿಷನ್) ಉಪಶಾಖೆಗಳು ಸೇರಿವೆ. ಇವುಗಳಲ್ಲಿ ಜೀವಯಂತ್ರಶಾಸ್ತ್ರವು ದೇಹದ ಚಲನೆಗಳನ್ನು ಅಧ್ಯಯನ ಮಾಡುವ, ವಿಶ್ಲೇಷಿಸುವ ಪ್ರಮುಖ ಭಾಗವಾಗಿದೆ.

ವಿಷಯದ ಮಹತ್ವ, ಅಗತ್ಯ: ಇಂದಿನ ಕ್ರೀಡಾಲೋಕ ಅತ್ಯಂತ ಸ್ಪರ್ಧಾತ್ಮಕವಾಗಿದ್ದು, ಕಠಿಣ ಅಭ್ಯಾಸವಷ್ಟೇ ಸಾಕಾಗದು; ಜೊತೆಗೆ, ಸೂಕ್ತವಾದ ತಂತ್ರ, ವೈಜ್ಞಾನಿಕ ವಿಶ್ಲೇಷಣೆ, ಬೆಂಬಲ ಅತ್ಯಗತ್ಯ. ಉದಾಹರಣೆಗೆ, ಆಟಗಾರನ ಹೆಜ್ಜೆಯ ಉದ್ದ, ಕಾಲಿನ ನೆಲಸ್ಪರ್ಶದ ಕೋನ, ದೇಹತೂಕದ ಹಂಚಿಕೆ– ಇವುಗಳಲ್ಲಿ ಸಣ್ಣ ಬದಲಾವಣೆಯಾದರೂ ಪ್ರದರ್ಶನದಲ್ಲಿ ದೊಡ್ಡ ವ್ಯತ್ಯಾಸವನ್ನು ಕಾಣಬಹುದು. ಹೀಗೆ ಕ್ರಿಕೆಟ್, ಬ್ಯಾಡ್ಮಿಂಟನ್, ಫುಟ್‌ಬಾಲ್‌ನಂತಹ ಆಟಗಳಲ್ಲಿ ವ್ಯಾಯಾಮ, ಅಭ್ಯಾಸ, ಸ್ಟ್ರೆಂತ್ ಟ್ರೇನಿಂಗ್, ದೇಹದ ಚಲನೆ ಮತ್ತು ಅಗತ್ಯಕ್ಕೆ ತಕ್ಕಂಥ ಬಾಗುವಿಕೆ (ಫ್ಲೆಕ್ಸಿಬಿಲಿಟಿ) ತರಬೇತಿಯ ಮೂಲಕ ಆಟಗಾರರು ತಮ್ಮ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಬಹುದು. ಜೊತೆಗೆ, ಮೊಣಕಾಲು, ಕುತ್ತಿಗೆ, ಬೆನ್ನು, ಭುಜ, ಬೆರಳಿನಂತಹ ಭಾಗಗಳು ಅಥವಾ ಅಂಗಾಂಗಗಳಿಗೆ ಉಂಟಾಗುವ ಗಾಯಗಳನ್ನು ಕಡಿಮೆ ಮಾಡಲು ಅಥವಾ ಚಿಕಿತ್ಸೆ ನೀಡಲು ಕ್ರೀಡಾ ವಿಜ್ಞಾನ ಬಹಳ ಸಹಕಾರಿ. ಕ್ರೀಡೆಗಳಲ್ಲಿ ಆಸಕ್ತಿ, ವಿಶ್ಲೇಷಣಾ ಕೌಶಲ, ಅವಲೋಕನ, ತಂತ್ರಜ್ಞಾನದ ಬಳಕೆ, ಸಮಸ್ಯೆಗಳ ಪರಿಹಾರ, ಒಟ್ಟಾಗಿ ಕೆಲಸ ಮಾಡುವಿಕೆ, ಉತ್ತಮ ಸಂವಹನ, ಸಹಾನುಭೂತಿಯಂತಹ ಕೌಶಲಗಳ ಅಗತ್ಯ ಈ ಕ್ಷೇತ್ರವನ್ನು ಪ್ರವೇಶಿಸುವವರಿಗೆ ಅಗತ್ಯ.

ಇಂದಿನ ಕ್ರೀಡಾ ಲೋಕದಲ್ಲಿ ಗೆಲುವು ಬರೀ ಶ್ರಮದ ಫಲವಲ್ಲ; ಅದು ಕ್ರೀಡಾ ವಿಜ್ಞಾನ, ತಂತ್ರಗಳು ಮತ್ತು ನಿಯೋಜಿತ ತರಬೇತಿಯ ಸಮನ್ವಯದಿಂದ ಆಟಗಾರರ ಕಾರ್ಯಕ್ಷಮತೆಯನ್ನು ಗರಿಷ್ಠ ಮಟ್ಟಕ್ಕೆ ಹೊರತರುವ ಶಕ್ತಿಯಾಗಿದೆ. ಹೀಗಾಗಿ, ಕ್ರೀಡೆಗಳಲ್ಲಿ ಆಸಕ್ತಿ ಇರುವವರು ಆಟಗಾರರಾಗಿ ಮಾತ್ರವಲ್ಲದೆ ಕ್ರೀಡಾ ವಿಜ್ಞಾನ ಕ್ಷೇತ್ರದಲ್ಲಿಯೂ ಪರಿಣತಿ ಪಡೆದು ವೃತ್ತಿಜೀವನವನ್ನು ರೂಪಿಸಿಕೊಳ್ಳಬಹುದು.

ಲೇಖಕ: ಶಿಕ್ಷಣ ತಜ್ಞ, ವೃತ್ತಿ ಸಲಹೆಗಾರ

ವೃತ್ತಿ ಅವಕಾಶ

ತ್ವರಿತವಾಗಿ ಬೆಳೆಯುತ್ತಿರುವ ಕ್ಷೇತ್ರವಾಗಿರುವುದರಿಂದ ವೃತ್ತಿಪರರಿಗೆ ಭವಿಷ್ಯದಲ್ಲಿಯೂ ಆಕರ್ಷಕ ಅವಕಾಶಗಳಿವೆ:
- ಸ್ಪೋರ್ಟ್ಸ್ ಸೈಂಟಿಸ್ಟ್
- ಬಯೊಮೆಕ್ಯಾನಿಕ್ಸ್ ವಿಶ್ಲೇಷಕ
- ಅಥ್ಲೆಟಿಕ್ ಟ್ರೇನರ್
- ಫಿಟ್ನೆಸ್ ಮತ್ತು ಪರ್ಫಾರ್ಮೆನ್ಸ್ ಅನಲಿಸ್ಟ್
- ಕ್ರೀಡಾ ತಂಡಗಳ ಸಲಹೆಗಾರ
- ರಿಹ್ಯಾಬಿಲಿಟೇಷನ್ ತಜ್ಞ
- ಸಂಶೋಧಕ

ಅಧ್ಯಯನ ವಿಷಯ, ಕಾಲೇಜು

ಅನಾಟಮಿ, ಫಿಸಿಯಾಲಜಿ, ಬಯೊಮೆಕ್ಯಾನಿಕ್ಸ್, ಚಲನವಿಜ್ಞಾನ (ಕಿನಮ್ಯಾಟಿಕ್ಸ್), ಕ್ರೀಡಾ ತರಬೇತಿ ವಿಧಾನಗಳು, ಗಾಯಗಳ ನಿರ್ವಹಣೆ, ಪೌಷ್ಟಿಕಾಂಶ ವಿಜ್ಞಾನ, ಕ್ರೀಡೆಗಳ ನಿರ್ವಹಣೆ ಇತ್ಯಾದಿ. ಈ ಕೋರ್ಸ್‌ಗಳು ತತ್ವಜ್ಞಾನ, ಪ್ರಾಯೋಗಿಕ ತರಬೇತಿ, ಲ್ಯಾಬ್ ವರ್ಕ್ ಮತ್ತು ಫೀಲ್ಡ್ ಅನಲಿಸಿಸ್ ಅನ್ನು ಒಳಗೊಂಡಿರುತ್ತವೆ. ಪಿಇಎಸ್, ರೇವಾ, ಜೈನ್, ಗಾರ್ಡನ್, ಅಮಿಟಿ, ಲವ್ಲಿ, ಮಣಿಪಾಲ್ ಮುಂತಾದ ವಿಶ್ವವಿದ್ಯಾಲಯಗಳಲ್ಲಿ ಈ ಕೋರ್ಸ್‌ಗಳನ್ನು ಮಾಡಬಹುದು.

ವಿವಿಧ ಕೋರ್ಸ್

- ಬಿ.ಎಸ್ಸಿ (ಸ್ಪೋರ್ಟ್ಸ್ ಸೈನ್ಸ್- 3 ವರ್ಷ)
- ಬಿ.ಪಿಇಡಿ (ಬ್ಯಾಚಲರ್ ಇನ್ ಫಿಸಿಕಲ್ ಎಜುಕೇಷನ್)
- ಎಂ.ಎಸ್ಸಿ (ಸ್ಪೋರ್ಟ್ಸ್ ಸೈನ್ಸ್/ ಬಯೊಮೆಕ್ಯಾನಿಕ್ಸ್- 2 ವರ್ಷ)
- ಬಿ.ಬಿಎ/ಎಂ.ಬಿಎ (ಸ್ಪೋರ್ಟ್ಸ್ ಮ್ಯಾನೇಜ್‌ಮೆಂಟ್)
- ಡಿಪ್ಲೊಮಾ ಮತ್ತು ಸರ್ಟಿಫಿಕೆಟ್ ಕೋರ್ಸ್

ವಿದ್ಯಾರ್ಥಿ ವೇತನ ಕೈಪಿಡಿ

ಎ.ಐ. ಸಂಶೋಧನಾ ಫೆಲೋಷಿಪ್

ಅಡೋಬ್ ಇಂಕ್‌ನ ನಾವೀನ್ಯ ಮತ್ತು ಸಂಶೋಧನಾ ಶಾಖೆಯಾದ ಅಡೋಬ್ ರಿಸರ್ಚ್ 'ಅಡೋಬ್ ಇಂಡಿಯಾ ಎ.ಐ. ರಿಸರ್ಚ್ ಫೆಲೋಷಿಪ್– 2026' ನೀಡುತ್ತಿದೆ.
ಅರ್ಹತೆ: ಭಾರತದ ವಿಶ್ವವಿದ್ಯಾಲಯಗಳಲ್ಲಿ ಅಡೋಬ್‌ಗೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಪಿಎಚ್.ಡಿ. ಮಾಡುತ್ತಿರಬೇಕು. ಕೃತಕ ಬುದ್ಧಿಮತ್ತೆ, ಮಷೀನ್ ಲರ್ನಿಂಗ್, ಕಂಪ್ಯೂಟರ್ ವಿಷನ್, ನ್ಯಾಚುರಲ್ ಲ್ಯಾಂಗ್ವೇಜ್ ಪ್ರೊಸೆಸಿಂಗ್, ಮನುಷ್ಯ ಮತ್ತು ಕಂಪ್ಯೂಟರ್ ನಡುವಿನ ಸಂವಾದ, ಡೇಟಾ ಬುದ್ಧಿಮತ್ತೆ, ಗ್ರ್ಯಾಫಿಕ್ಸ್ (2ಡಿ ಮತ್ತು 3ಡಿ) ಅಥವಾ ಡಾಕ್ಯುಮೆಂಟ್ ಇಂಟಲಿಜೆನ್ಸ್ ವಿಷಯಗಳಾಗಿರಬೇಕು.
ಆರ್ಥಿಕ ನೆರವು: ವರ್ಷಕ್ಕೆ ₹ 12 ಲಕ್ಷ ಸ್ಟೈಪೆಂಡ್.
ಅರ್ಜಿ ಸಲ್ಲಿಸಲು ಕೊನೇ ದಿನ: 30-04-2026
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್
ಮಾಹಿತಿಗೆ: Short Url: www.b4s.in/praja/AIAI1

ಡಿಆರ್‌ಡಿಒ ಇಂಟರ್ನ್‌ಷಿಪ್

ರಕ್ಷಣಾ ಸಚಿವಾಲಯದ ಡಿಫೆನ್ಸ್ ರಿಸರ್ಚ್ ಆ್ಯಂಡ್ ಡೆವಲಪ್‌ಮೆಂಟ್ ಆರ್ಗನೈಸೇಷನ್‌ನ (ಡಿಆರ್‌ಡಿಒ) ವಿಶೇಷ ಪ್ರಯೋಗಾಲಯವಾಗಿರುವ ಇನ್‌ಸ್ಟಿಟ್ಯೂಟ್ ಆಫ್ ನ್ಯೂಕ್ಲಿಯರ್ ಮೆಡಿಸಿನ್ ಆ್ಯಂಡ್ ಅಲೈಡ್ ಸೈನ್ಸಸ್ (ಐಎನ್‌ಎಂಎಎಸ್) ಈ ಇಂಟರ್ನ್‌ಷಿಪ್ ಅವಕಾಶ ನೀಡುತ್ತಿದೆ.
ಅರ್ಹತೆ: 28 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು. ಪೂರ್ಣಾವಧಿಯ ಬಿ.ಇ./ಬಿ.ಟೆಕ್ (7/8ನೇ ಸೆಮಿಸ್ಟರ್) ಅಥವಾ ಎಂ.ಎಸ್ಸಿ/ಎಂ.ಟೆಕ್‌ನಲ್ಲಿ (3/4ನೇ ಸೆಮಿಸ್ಟರ್) ಓದುತ್ತಿರಬೇಕು. ಅರ್ಜಿದಾರರು ಹಿಂದಿನ ಪರೀಕ್ಷೆಯಲ್ಲಿ ಕನಿಷ್ಠ ಶೇ 75ರಷ್ಟು ಅಂಕಗಳನ್ನು ಪಡೆದಿರಬೇಕು ಅಥವಾ 10ರ ಶ್ರೇಣಿಯಲ್ಲಿ 7.5ಕ್ಕಿಂತ ಹೆಚ್ಚು ಸಿಜಿಪಿಎ ಗಳಿಸಿರಬೇಕು.
ಆರ್ಥಿಕ ನೆರವು: ಮಾಸಿಕ ₹ 5,000 ಸ್ಟೈಪೆಂಡ್ ಮತ್ತು ಇತರ ಪ್ರಯೋಜನಗಳು.
ಅರ್ಜಿ ಸಲ್ಲಿಸಲು ಕೊನೇ ದಿನ: 30-04-2026
ಅರ್ಜಿ ಸಲ್ಲಿಸುವ ವಿಧಾನ: ಇ–ಮೇಲ್: research-academic@gov.in
ಮಾಹಿತಿಗೆ: Short Url: www.b4s.in/praja/IMDR1

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಷಿಪ್


ಓಪನ್ ಡೋರ್ ಎಜುಕೇಷನ್: ಕಂಟೆಂಟ್ ಡಿಸೈನ್ ಮತ್ತು ರಿಸರ್ಚ್ (ಕಾಂಪ್ಯುಟೇಷನಲ್ ಥಿಂಕಿಂಗ್) ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಗಣಿತ, ಸಂಶೋಧನೆ ಮತ್ತು ವಿಶ್ಲೇಷಣೆಯಲ್ಲಿ (ಆ್ಯನಲಿಟಿಕ್) ಜ್ಞಾನ ಇರುವ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಲ್ಲ ಕೌಶಲ ಇರುವ ಮತ್ತು ವಿಮರ್ಶಾತ್ಮಕ ಚಿಂತನೆಯುಳ್ಳ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಮೇ 16 ಅರ್ಜಿ ಸಲ್ಲಿಕೆಗೆ ಕಡೇ ದಿನ. ಸ್ಟೈಪೆಂಡ್– ತಿಂಗಳಿಗೆ ₹ 18,000–20,000 ಸಂಪರ್ಕ: internshala.com/i/8244da.

ವೆಕ್ಸೊಕೋರ್ ಐಟಿ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್: ಸೃಜನಾತ್ಮಕವಾಗಿ ಬರೆಯಬಲ್ಲ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ವಿದ್ಯಾರ್ಥಿಗಳಿಗೆ Node.js ಬಗ್ಗೆ ಜ್ಞಾನ ಇರಬೇಕು. ಮೇ 15ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 5,000–8,000. ಸಂಪರ್ಕ: internshala.com/i/399c82.

ಬೆಂಗಳೂರು ಕೇಂದ್ರಿತ ಇಂಟರ್ನ್‌ಷಿಪ್

ವಿಎಸ್‌ಟಿ ಟಿಲ್ಲರ್ಸ್ ಟ್ರ್ಯಾಕ್ಟರ್ಸ್ ಲಿಮಿಟೆಡ್: ಪ್ರತಿಭಾನ್ವೇಷಿ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ನೇಮಕಾತಿ ಮತ್ತು ಟ್ಯಾಲೆಂಟ್ ಮ್ಯಾನೇಜ್‌ಮೆಂಟ್ ಕೌಶಲಗಳನ್ನು ಬಲ್ಲವರು ಮೇ 14ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 9,000–10,000 ಸಂಪರ್ಕ: internshala.com/i/37740d.

ಫೋಯರ್ಸ್ (Foyrs) : ಸರ್ಚ್ ಎಂಜಿನ್ ಆಪ್ಟಿಮೈಸೇಷನ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಾಗುತ್ತದೆ. ಡಿಜಿಟಲ್ ಮಾರ್ಕೆಟಿಂಗ್, ಗೂಗಲ್ ಅನಲಿಟಿಕ್ಸ್, ಪರ್ಫಾರ್ಮೆನ್ಸ್ ಮಾರ್ಕೆಟಿಂಗ್, ಸರ್ಚ್ ಎಂಜಿನ್ ಮಾರ್ಕೆಟಿಂಗ್ (ಎಸ್‌ಇಎಂ), ಸರ್ಚ್ ಎಂಜಿನ್ ಆಪ್ಟಿಮೈಸೇಷನ್ (ಎಸ್‌ಇಒ) ಮತ್ತು ವೆಬ್ ಡಿಸೈನ್ ಬಗ್ಗೆ ಬಲ್ಲವರು ಮೇ 16ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 20,000–30,000. ಸಂಪರ್ಕ: internshala.com/i/7e7091.





ಗೆಲುವಿನ ಖಾತೆ ತೆರೆದ ಕೋಲ್ಕತ್ತ

- ಲಯಕ್ಕೆ ಮರಳಿದ ವರುಣ್ ಚಕ್ರವರ್ತಿ
- ರಿಂಕು ಸಿಂಗ್ ಬೀಸಾಟಕ್ಕೆ ಒಲಿದ ಜಯ

ಕೋಲ್ಕತ್ತ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಅಂತೂ ಇಂತೂ ಈ ಸಲದ ಐಪಿಎಲ್ ಟೂರ್ನಿಯಲ್ಲಿ ಚೊಚ್ಚಲ ಗೆಲುವು ದಾಖಲಿಸಿತು.

ಉಪನಾಯಕ ರಿಂಕು ಸಿಂಗ್ ಅವರ ಅಜೇಯ ಅರ್ಧಶತಕದ ಬಲದಿಂದ ಕೋಲ್ಕತ್ತ ತಂಡವು 4 ವಿಕೆಟ್‌ಗಳಿಂದ ರಾಜಸ್ಥಾನ ರಾಯಲ್ಸ್ ವಿರುದ್ಧ ಜಯಿಸಿತು. ಈಡನ್ ಗಾರ್ಡನ್ಸ್‌ನಲ್ಲಿ ಭಾನುವಾರ ಸಂಜೆ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ರಾಜಸ್ಥಾನ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಯಥಾಪ್ರಕಾರ ಯಶಸ್ವಿ ಜೈಸ್ವಾಲ್ (39 ರನ್) ಮತ್ತು ವೈಭವ್ ಸೂರ್ಯವಂಶಿ (46 ರನ್) ಅವರು ಅಬ್ಬರದ ಆರಂಭ ನೀಡಿದರು. ಕೇವಲ 8.4 ಓವರ್‌ಗಳಲ್ಲಿ ಈ ಜೋಡಿಯು 81 ರನ್ ಕಲೆಹಾಕಿತು.

ಆದರೆ ಈ ಜೊತೆಯಾಟದ ಅಡಿಪಾಯದ ಮೇಲೆ ದೊಡ್ಡ ಮೊತ್ತ ಸೇರುವ ನಿರೀಕ್ಷೆಯು ಈಡೇರಲಿಲ್ಲ. ಈ ಪಂದ್ಯದಲ್ಲಿ ಲಯಕ್ಕೆ ಮರಳಿದ ಸ್ಪಿನ್ನರ್ ವರುಣ್ ಚಕ್ರವರ್ತಿ (14ಕ್ಕೆ3) ಮತ್ತು ಕಾರ್ತಿಕ್ ತ್ಯಾಗಿ (22ಕ್ಕೆ3) ಅವರ ದಾಳಿಯ ಮುಂದೆ ರಾಯಲ್ಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 155 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಕೋಲ್ಕತ್ತ ತಂಡವು 19.4 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 161 ರನ್ ಗಳಿಸಿತು. ಕೋಲ್ಕತ್ತ ತಂಡಕ್ಕೆ ಇದು ಏಳನೇ ಪಂದ್ಯ. ಒಟ್ಟು ಐದು ಪಂದ್ಯಗಳನ್ನು ಸೋತಿದೆ. ಒಂದು ಪಂದ್ಯವು ಮಳೆಯಿಂದ ರದ್ದಾಗಿತ್ತು.

ಆದರೆ ಈ ಹಾದಿ ಕಠಿಣವಾಗಿತ್ತು. ಆತಿಥೇಯ ತಂಡದ ಇಬ್ಬರೂ ಆರಂಭಿಕ ಬ್ಯಾಟರ್‌ಗಳಾದ ಟಿಮ್ ಸೀಫರ್ಟ್ ಮತ್ತು ಅಜಿಂಕ್ಯ ರಹಾನೆ ಅವರು ಖಾತೆಯನ್ನೇ ತೆರೆಯಲಿಲ್ಲ. ಕ್ರಮವಾಗಿ ಜೋಫ್ರಾ ಆರ್ಚರ್ ಮತ್ತು ನಾಂದ್ರೆ ಬರ್ಗರ್ ಅವರಿಗೆ ವಿಕೆಟ್ ಒಪ್ಪಿಸಿ ನಿರ್ಗಮಿಸಿದರು. ಭರವಸೆಯ ಬ್ಯಾಟರ್ ಅಂಗ್‌ಕ್ರಿಷ್ ರಘುವಂಶಿ (10; 19ಎ) ಅವರನ್ನು ರವೀಂದ್ರ ಜಡೇಜ ಎಲ್‌ಬಿಡಬ್ಲ್ಯು ಬಲೆಗೆ ಹಾಕಿದರು. ಕ್ಯಾಮರಾನ್ ಗ್ರೀನ್ (27 ರನ್) ಮತ್ತು ರೋವ್ಮನ್ ಪೊವೆಲ್ (23 ರನ್) ಅವರೂ ಹೆಚ್ಚು ಹೊತ್ತು ಇರಲಿಲ್ಲ.

ಈ ಹಂತದಲ್ಲಿ ಕ್ರೀಸ್‌ಗೆ ಬಂದ ಉಪನಾಯಕ ರಿಂಕು ಸಿಂಗ್ ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದರು. 11ನೇ ಓವರ್‌ನಲ್ಲಿ ಫೀಲ್ಡರ್ ನಾಂದ್ರೆ ಬರ್ಗರ್ ಕ್ಯಾಚ್ ಕೈಚೆಲ್ಲಿ ರಿಂಕುಗೆ ಜೀವದಾನ ಕೊಟ್ಟರು. ಇದು ರಾಜಸ್ಥಾನ ತಂಡಕ್ಕೆ ದುಬಾರಿಯಾಯಿತು.

ರಿಂಕು ಅವರು ಅನುಕೂಲ್ ರಾಯ್ ಅವರೊಂದಿಗೆ ಮುರಿಯದ ಏಳನೇ ವಿಕೆಟ್ ಜೊತೆಯಾಟದಲ್ಲಿ 76 (37ಎ) ರನ್ ಸೇರಿಸಿದರು. ಬ್ರಿಜೇಶ್ ಶರ್ಮಾ ಹಾಕಿದ ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ರಿಂಕು ಎರಡು ಬೌಂಡರಿ ಮತ್ತು ಒಂದು ಸಿಕ್ಸರ್ ಬಾರಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಜೊತೆಗೆ ತಮ್ಮ ಅರ್ಧಶತಕದ ಕೂಡ ಪೂರ್ಣಗೊಳಿಸಿಕೊಂಡರು.

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಪಿಬಿಕೆಎಸ್	6	5	0	1	11	1.420
ಆರ್‌ಸಿಬಿ	6	4	2	0	8	1.171
ಆರ್ ಆರ್	6	4	2	0	8	0.599
ಎಸ್‌ಆರ್‌ಎಚ್	6	3	3	0	6	0.566
ಡಿ ಸಿ	5	3	2	0	6	0.310
ಜಿ ಟಿ	5	3	2	0	6	0.018
ಸಿಎಸ್‌ಕೆ	6	2	4	0	4	- 0.780
ಎಲ್‌ಎಸ್‌ಜಿ	6	2	4	0	4	- 1.173
ಕೆಕೆಆರ್	7	1	5	1	3	- 0.879
ಎಂ ಐ	5	1	4	0	2	- 1.076

ಆರೇಂಜ್ ಕ್ಯಾಪ್–ಹೆನ್ರಿಚ್ ಕ್ಲಾಸೆನ್, ಎಸ್‌ಆರ್‌ಎಚ್ (283 ರನ್)

ಪರ್ಪಲ್ ಕ್ಯಾಪ್–ಅನ್ಷುಲ್ ಕಂಬೋಜ್, ಸಿಎಸ್‌ಕೆ (13 ವಿಕೆಟ್)



ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಗೆಲುವು ಸಾಧಿಸಿದ ಬಳಿಕ ರಿಂಕು ಸಿಂಗ್ ಅವರನ್ನು ಸಹ ಆಟಗಾರ ವರುಣ್ ಚಕ್ರವರ್ತಿ ಅಭಿನಂದಿಸಿದರು ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ರಾಜಸ್ಥಾನ ರಾಯಲ್ಸ್: 9ಕ್ಕೆ 155 (20 ಓವರ್‌ಗಳಲ್ಲಿ)

ಜೈಸ್ವಾಲ್ ಸಿ ರಹಾನೆ ಬಿ ಸುನಿಲ್ 39 (29ಎ, 4x4, 6x2)
ಸೂರ್ಯವಂಶಿ ಸಿ ರಮಣದೀಪ್ ಬಿ ವರುಣ್ 46 (28ಎ, 4x6, 6x2)
ಜುರೆಲ್ ಸ್ಟಂಪ್ಡ್ ಸೀಫರ್ಟ್ ಬಿ ವರುಣ್ 5 (7ಎ)
ಪರಾಗ್ ಬಿ ವರುಣ್ 12 (14ಎ, 4x1)
ಹೆಟ್ಮೆಯರ್ ಸಿ ಅಂಗ್‌ಕ್ರಿಷ್ ಬಿ ಕಾರ್ತಿಕ್ 15 (18ಎ)
ಫೆರೇರಾ ಸಿ ಮತ್ತು ಬಿ ಸುನಿಲ್ 7 (7ಎ, 6x1)
ಜಡೇಜ ಸಿ ಗ್ರೀನ್ ಬಿ ಕಾರ್ತಿಕ್ 9 (7ಎ, 4x1)
ಆರ್ಚರ್ ರನ್‌ಔಟ್ (ವೈಭವ್/ಸೀಫರ್ಟ್) 8 (5ಎ, 4x1)
ವಿಘ್ನೇಶ್ ಸಿ ಸೀಫರ್ಟ್ ಬಿ ಕಾರ್ತಿಕ್ 0 (2ಎ)
ಬ್ರಿಜೇಶ್ ಶರ್ಮಾ ಔಟಾಗದೆ 1 (3ಎ)
ಇತರೆ: 13 (ಬೈ 1, ಲೆಗ್‌ಬೈ 2, ವೈಡ್ 10)
ವಿಕೆಟ್ ಪತನ: 1-81 (ವೈಭವ್ ಸೂರ್ಯವಂಶಿ, 8.4), 2-97 (ಧ್ರುವ ಜುರೆಲ್, 10.3), 3-99 (ಯಶಸ್ವಿ ಜೈಸ್ವಾಲ್, 11.2), 4-117 (ರಿಯಾನ್ ಪರಾಗ್, 14.4), 5-124 (ಡೊನೊವನ್ ಫೆರೇರಾ, 15.6), 6-144 (ರವೀಂದ್ರ ಜಡೇಜ, 18.1), 7-146 (ಶಿಮ್ರಾನ್ ಹೆಟ್ಮೆಯರ್, 18.3), 8-146 (ರವಿ ಬಿಷ್ಣೋಯಿ, 18.5), 9-155 (ಜೋಫ್ರಾ ಆರ್ಚರ್, 19.6)
ಬೌಲಿಂಗ್: ವೈಭವ್ ಅರೋರಾ 4-0-37-0, ಕಾರ್ತಿಕ್ ತ್ಯಾಗಿ 4-0-22-3, ಕ್ಯಾಮರಾನ್ ಗ್ರೀನ್ 2-0-27-0, ಸುನಿಲ್ ನಾರಾಯಣ್ 4-0-26-2, ವರುಣ್ ಚಕ್ರವರ್ತಿ 4-0-14-3, ರಮಣದೀಪ್ ಸಿಂಗ್ 2-0-26-0

ಕೋಲ್ಕತ್ತ ನೈಟ್ ರೈಡರ್ಸ್: 6ಕ್ಕೆ 161 (19.4 ಓವರ್‌ಗಳಲ್ಲಿ)

ಸೀಫರ್ಟ್ ಬಿ ಆರ್ಚರ್ 0 (1ಎ)
ರಹಾನೆ ಸಿ ಜುರೆಲ್ ಬಿ ಬರ್ಗರ್ 0 (2ಎ)
ರಘುವಂಶಿ ಎಲ್‌ಬಿಡಬ್ಲ್ಯು ಬಿ ಜಡೇಜ 10 (19ಎ, 4x1)
ಗ್ರೀನ್ ಸ್ಟಂಪ್ಡ್ ಜುರೆಲ್ ಬಿ ವಿಘ್ನೇಶ್ 27 (13ಎ, 4x4, 6x1)
ಪೊವೆಲ್ ಸಿ ಫೆರೇರಾ ಬಿ ಜಡೇಜ 23 (20, 4x2, 6x1)
ರಿಂಕು ಸಿಂಗ್ ಔಟಾಗದೆ 53 (34ಎ, 4x5, 6x2)
ರಮಣದೀಪ್ ಸಿಂಗ್ ಬಿ ಯಶ್‌ರಾಜ್ 10 (13ಎ, 4x1)
ಅನುಕೂಲ್ ರಾಯ್ ಔಟಾಗದೆ 29 (16ಎ, 4x1, 6x2)
ಇತರೆ: 9 (ಲೆಗ್‌ಬೈ 1, ವೈಡ್ 8)
ವಿಕೆಟ್ ಪತನ: 1-0 (ಟಿಮ್ ಸೀಫರ್ಟ್, 0.1), 2-5 (ಅಜಿಂಕ್ಯ ರಹಾನೆ, 1.2), 3-37 (ಕ್ಯಾಮರಾನ್ ಗ್ರೀನ್, 4.3), 4-52 (ಅಂಗ್‌ಕ್ರಿಷ್ ರಘುವಂಶಿ, 6.6), 5-70 (ರೋವ್ಮನ್ ಪೊವೆಲ್, 10.1), 6-85 (ರಮಣದೀಪ್ ಸಿಂಗ್, 13.3)
ಬೌಲಿಂಗ್: ಜೋಫ್ರಾ ಆರ್ಚರ್ 4-0-35-1, ನಾಂದ್ರೆ ಬರ್ಗರ್ 2-0-20-1, ರವಿ ಬಿಷ್ಣೋಯಿ 4-0-41-1, ಯಶ್‌ರಾಜ್ ಪೂಂಜಾ 4-0-25-1, ರವೀಂದ್ರ ಜಡೇಜ 3-0-8-2, ರಿಯಾನ್ ಪರಾಗ್ 1-0-10-0, ಬ್ರಿಜೇಶ್ ಶರ್ಮಾ 1.4-0-21-0
ಪಂದ್ಯದ ಆಟಗಾರ: ವರುಣ್ ಚಕ್ರವರ್ತಿ

ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್‌ಗೆ 4 ವಿಕೆಟ್ ಜಯ

ಪಂಜಾಬ್ ಅಜೇಯ ಓಟ: ಲಖನೌಗೆ ಹ್ಯಾಟ್ರಿಕ್ ಸೋಲು

ಆರ್ಯ, ಕೂಪರ್ ಅಬ್ಬರ



ಪಂಜಾಬ್ ಕಿಂಗ್ಸ್ ತಂಡದ ಕೂಪರ್ ಕೊನೊಲಿ ಮತ್ತು ಪ್ರಿಯಾಂಶ್ ಆರ್ಯ ಎಎಫ್‌ಪಿ ಚಿತ್ರ

ಮುಲ್ಲನಪುರ (ಪಿಟಿಐ): ಪ್ರಿಯಾಂಶ್ ಆರ್ಯ ಮತ್ತು ಕೂಪರ್ ಕೊನೊಲಿ ಅವರು ಅಲ್ಪ ಅಂತರದಲ್ಲಿ ಶತಕ ತಪ್ಪಿಸಿಕೊಂಡರು. ಆದರೆ, ಅವರ ಆಟದ ನೆರವಿನಿಂದ ಪಂಜಾಬ್ ಕಿಂಗ್ಸ್ ತಂಡವು ಭಾನುವಾರ ಲಖನೌ ಸೂಪರ್ ಜೈಂಟ್ಸ್ ತಂಡವನ್ನು 54 ರನ್‌ಗಳಿಂದ ಮಣಿಸಿ, ಹಾಲಿ ಐಪಿಎಲ್ ಟೂರ್ನಿಯಲ್ಲಿ ಅಜೇಯ ಓಟ ಮುಂದುವರಿಸಿತು.

ಮುಲ್ಲನಪುರದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಲಖನೌ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಪ್ರಿಯಾಂಶ್ (93; 37ಎ, 4X4, 6X9) ಮತ್ತು ಕೂಪರ್ (87; 46ಎ, 4X8, 6X7) ಅವರ ಬ್ಯಾಟಿಂಗ್ ಬಲದಿಂದ ಪಂಜಾಬ್ ತಂಡವು 7 ವಿಕೆಟ್‌ಗಳಿಗೆ 254 ರನ್‌ಗಳ ಬೃಹತ್ ಮೊತ್ತ ಗಳಿಸಿತು.

ಗುರಿ ಬೆನ್ನಟ್ಟಿದ ಲಖನೌ ತಂಡವು 5 ವಿಕೆಟ್‌ಗೆ 200 ರನ್ ಗಳಿಸಿ ಹೋರಾಟ ಮುಗಿಸಿತು. ಇದರೊಂದಿಗೆ ಶ್ರೇಯಸ್ ಅಯ್ಯರ್ ಪಡೆ ಹ್ಯಾಟ್ರಿಕ್ ಸೇರಿ ಐದನೇ ಗೆಲುವು ಸಾಧಿಸಿತು. ಪಂಜಾಬ್ ತಂಡದ ಮೂರನೇ ಪಂದ್ಯವು ಮಳೆಯಿಂದಾಗಿ ರದ್ದಾಗಿತ್ತು. ರಿಷಭ್ ಪಂತ್ ಬಳಗವು ಸತತ ಮೂರನೇ ಸೋಲು ಅನುಭವಿಸಿತು.

ಲಖನೌ ತಂಡಕ್ಕೆ ಮಿಚೆಲ್ ಮಾರ್ಷ್ (40;28ಎ) ಮತ್ತು ಆಯುಷ್ ಬದೋನಿ (35;21) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್‌ಗೆ 36 ಎಸೆತಗಳಲ್ಲಿ 61 ರನ್ ಸೇರಿಸಿದರು. ನಂತರ ಬಂದ ರಿಷಭ್ (43;23ಎ) ಕೆಲಹೊತ್ತು ಅಬ್ಬರಿಸಿದರು. ಅವರ ಇನಿಂಗ್ಸ್‌ನಲ್ಲಿ ನಾಲ್ಕು ಸಿಕ್ಸರ್ ಗಳಿದ್ದವು. ನಂತರದಲ್ಲಿ ಏಡನ್ ಮರ್ಕರಂ (42;22ಎ) ಮತ್ತು ಮುಕುಲ್ ಚೌಧರಿ (ಔಟಾಗದೇ 21) ಕೊಂಚ ಪ್ರತಿರೋಧ ತೋರಿದರೂ ಗೆಲುವು ದೂರವಿತ್ತು.

ಇದಕ್ಕೂ ಮೊದಲು ಅನುಭವಿ ವೇಗಿ ಮೊಹಮ್ಮದ್ ಶಮಿ ಇನಿಂಗ್ಸ್‌ನ ಮೊದಲ ಓವರ್‌ನಲ್ಲಿಯೇ ಪ್ರಭಸಿಮ್ರನ್ ಸಿಂಗ್ ವಿಕೆಟ್ ಗಳಿಸಿದರು. ಇನ್ನೊಂದು ಬದಿಯಲ್ಲಿದ್ದ ಆರ್ಯ (93; 37ಎ, 4X4, 6X9) ಮತ್ತು ಕೂಪರ್ (87; 46ಎ, 4X8, 6X7) ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ 182 ರನ್ ಸೇರಿಸಿದರು. ಅದಕ್ಕಾಗಿ ಅವರು ಆಡಿದ್ದು ಒಟ್ಟು 80 ಎಸೆತಗಳನ್ನು ಮಾತ್ರ. ಇವರಿಬ್ಬರ ಅಬ್ಬರಕ್ಕೆ ಬೌಲರ್‌ಗಳು ಬಸವಳಿದರು.

ನಾಯಕ ಶ್ರೇಯಸ್ ಅಯ್ಯರ್ (5 ರನ್) ಅವರಿಗೆ ಒಂದೂ ಬೌಂಡರಿ ಹೊಡೆಯಲು ಬಿಡದ ಬೌಲರ್‌ಗಳು ಚಾಣಾಕ್ಷತನ ಪ್ರದರ್ಶಿಸಿದರು. ಶತಕದತ್ತ ಸಾಗುತ್ತಿದ್ದ ಪ್ರಿಯಾಂಶ್ ಅವರಿಗೆ ಮಣಿಮಾರನ್ ಅಡ್ಡಗೋಡೆ ಯಾದರು. ಮಾರ್ಷ್ ಪಡೆದ ಕ್ಯಾಚ್‌ನಿಂದಾಗಿ ಪ್ರಿಯಾಂಶ್ ಔಟಾದರು.

ಲಯಕ್ಕೆ ಮರಳಿದ ಮಾರ್ಕಸ್ ಸ್ಟೊಯಿನಿಸ್ 29 ರನ್ ಹೊಡೆದರು. ನೇಹಲ್ ವಧೇರಾ (13ರನ್) ಮತ್ತು ಶಶಾಂಕ್ ಸಿಂಗ್ (17 ರನ್) ಉಪಯುಕ್ತ ಕಾಣಿಕೆ ಕೊಟ್ಟರು. ಇದರಿಂದಾಗಿ ತಂಡವು 250ರ ಗಡಿ ದಾಟಿತು.

ಸಂಕ್ಷಿಪ್ತ ಸ್ಕೋರು: ಪಂಜಾಬ್ ಕಿಂಗ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 254 (ಪ್ರಿಯಾಂಶ್ ಆರ್ಯ 93, ಕೂಪರ್ ಕೊನೊಲಿ 87, ಮಾರ್ಕಸ್ ಸ್ಟೊಯಿನಿಸ್ 29, ಪ್ರಿನ್ಸ್ ಯಾದವ್ 25ಕ್ಕೆ2, ಮಣಿಮಾರನ್ ಸಿದ್ಧಾರ್ಥ್ 35ಕ್ಕೆ2). ಲಖನೌ ಸೂಪರ್ ಜೈಂಟ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 200 (ಮಿಚೆಲ್ ಮಾರ್ಷ್ 40, ಆಯುಷ್ ಬದೋನಿ 35, ರಿಷಭ್ ಪಂತ್ 43, ಏಡನ್ ಮರ್ಕರಂ 42; ಮಾರ್ಕೊ ಯಾನ್ಸೆನ್ 37ಕ್ಕೆ 2): ಪಂದ್ಯದ ಆಟಗಾರ: ಪ್ರಿಯಾಂಶ್ ಆರ್ಯ

ಸೋಲಿನ ಸರಪಳಿ ಕಳಚುವತ್ತ ಮುಂಬೈ ಚಿತ್ತ

ಮತ್ತೊಂದು ಜಯದ ನಿರೀಕ್ಷೆಯಲ್ಲಿ ಟೈಟನ್ಸ್

ಅಹಮದಾಬಾದ್ (ಪಿಟಿಐ): ಸತತ ಮೂರು ಪಂದ್ಯಗಳನ್ನು ಗೆದ್ದ ಆತ್ಮವಿಶ್ವಾಸ ದಲ್ಲಿರುವ ಗುಜರಾತ್ ಟೈಟನ್ಸ್ ತಂಡವು ಸೋಮವಾರ ಮುಂಬೈ ಇಂಡಿಯನ್ಸ್ ಎದುರು ಕಣಕ್ಕಿಳಿಯಲಿದೆ. ಹಾರ್ದಿಕ್ ಪಾಂಡ್ಯ ನಾಯಕತ್ವದ ಮುಂಬೈ ತಂಡವು ಸತತ ನಾಲ್ಕು ಪಂದ್ಯಗಳನ್ನು ಸೋತಿದ್ದು ಮರಳಿ ಅರಳುವ ಒತ್ತಡದಲ್ಲಿದೆ.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಪಂದ್ಯವು ಮುಂಬೈ ಪಾಲಿಗೆ ಮಹತ್ವದ್ದಾಗಿದೆ. ಈಗಿನಿಂದಲೇ ಗೆಲುವುಗಳನ್ನು ಸಾಧಿಸುತ್ತ ಹೋದರೆ ಪ್ಲೇ ಆಫ್ ಪ್ರವೇಶಿಸುವ ಆಸೆ ಜೀವಂತವಾಗಿ ಉಳಿಯಬಹುದು. ಅಂತರ ರಾಷ್ಟ್ರೀಯ ಮಟ್ಟದ ಉತ್ತಮ ಆಟಗಾರರು ಇರುವ ತಂಡ ಇದಾಗಿದ್ದರೂ ಗೆಲುವು ಸಾಧಿಸುತ್ತಿಲ್ಲ.

ಅದರಲ್ಲೂ ಸೂರ್ಯಕುಮಾರ್ ಯಾದವ್ ಮತ್ತು ತಿಲಕ್ ವರ್ಮಾ ಅವರ ಮೇಲೆ ಎಲ್ಲರ ಚಿತ್ತ ನೆಟ್ಟಿದೆ. ಅವರಿಬ್ಬರ ಅಸ್ಥಿರ ಪ್ರದರ್ಶನವು ತಂಡದ ಬ್ಯಾಟಿಂಗ್ ದುರ್ಬಲಗೊಳ್ಳಲು ಕಾರಣವಾಗಿದೆ. ಕಳೆದ ಪಂದ್ಯದಲ್ಲಿ ರೋಹಿತ್ ಶರ್ಮಾ ಕೂಡ ಗಾಯದಿಂದಾಗಿ ಆಡಿರಲಿಲ್ಲ. ನಾಯಕ ಹಾರ್ದಿಕ್ ಅವರು ಕೂಡ ದೊಡ್ಡ ಇನಿಂಗ್ಸ್ ಆಡುತ್ತಿಲ್ಲ. ಅವರು ನಾಲ್ಕು ಪಂದ್ಯಗಳಿಂದ 81 ರನ್ ಗಳಿಸಿದ್ದಾರೆ. ತಿಲಕ್ ಅವರು ಐದು ಇನಿಂಗ್ಸ್‌ಗಳಿಗೆ 43 ರನ್ ಮಾತ್ರ ಪೇರಿಸಿದ್ದಾರೆ.

ಎಲ್ಲಕ್ಕಿಂತ ಮುಖ್ಯವಾಗಿ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ಐದು ಪಂದ್ಯಗಳಿಂದ ಒಂದೂ ವಿಕೆಟ್ ಪಡೆದಿಲ್ಲ. ಇದು ಕೂಡ ತಂಡದ ಚಿಂತೆಗೆ ಕಾರಣವಾಗಿದೆ. ಆದರೆ ಬೂಮ್ರಾ ಅವರು ಹೆಚ್ಚು ರನ್ ಬಿಟ್ಟುಕೊಟ್ಟಿಲ್ಲವೆನ್ನುವುದು ಸಮಾಧಾನ. ನಮನ್ ಧೀರ್ ಕಳೆದ ಪಂದ್ಯದಲ್ಲಿ ಉತ್ತಮವಾಗಿ ಬ್ಯಾಟಿಂಗ್ ಮಾಡಿದ್ದರು. ಸ್ಯಾಂಟನರ್, ಶಾರ್ದೂಲ್ ಅವರೂ ಆಲ್‌ರೌಂಡರ್ ಪಾತ್ರವನ್ನು ಪೂರ್ಣಪ್ರಮಾಣದಲ್ಲಿ ನಿಭಾಯಿಸಿಲ್ಲ.



ಹಾರ್ದಿಕ್ ಪಾಂಡ್ಯ



ಶುಭಮನ್ ಗಿಲ್

ಆದರೆ ಗುಜರಾತ್ ತಂಡದಲ್ಲಿ ಜೋಸ್ ಬಟ್ಲರ್, ನಾಯಕ ಶುಭಮನ್ ಗಿಲ್ ಅವರು ಲಯಕ್ಕೆ ಮರಳಿದ್ದಾರೆ. ಬೌಲಿಂಗ್‌ನಲ್ಲಿ ಪ್ರಸಿದ್ಧ ಕೃಷ್ಣ, ಮೊಹಮ್ಮದ್ ಸಿರಾಜ್, ಕಗಿಸೊ ರಬಾಡ ಹಾಗೂ ಅಶೋಕ್ ಶರ್ಮಾ ಅವರು ತಂಡವನ್ನು ಗೆಲ್ಲಿಸಕೊಡಬಲ್ಲ ಆಟಗಾರರು. ಈ ಬೌಲರ್‌ಗಳನ್ನು ಎದುರಿಸುವ ಸವಾಲು ಈಗ ಹಾರ್ದಿಕ್ ಬಳಗದ ಮುಂದಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ಟಿ20 ಕ್ರಿಕೆಟ್: ಶಫಾಲಿ ವರ್ಮಾ ಅರ್ಧಶತಕ

ಭಾರತ ವನಿತೆಯರಿಗೆ 2ನೇ ಸೋಲು

ಡರ್ಬನ್ (ಪಿಟಿಐ): ಭಾರತ ವನಿತೆಯರ ತಂಡವು ಭಾನುವಾರ ನಡೆದ ಎರಡನೇ ಟಿ20 ಕ್ರಿಕೆಟ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಎಂಟು ವಿಕೆಟ್‌ಗಳ ಸೋಲು ಅನುಭವಿಸಿತು.

ಐದು ಪಂದ್ಯಗಳ ಸರಣಿಯಲ್ಲಿ ಆತಿಥೇಯ ತಂಡವು 2-0 ಮುನ್ನಡೆ ಸಾಧಿಸಿದೆ. ಶುಕ್ರವಾರ ನಡೆದ ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು ಆರು ವಿಕೆಟ್‌ಗಳಿಂದ ಜಯ ಸಾಧಿಸಿತ್ತು. ಮೂರನೇ ಪಂದ್ಯವು ಜೋಹಾನೆಸ್ ಬರ್ಗ್‌ನಲ್ಲಿ ಬುಧವಾರ ನಡೆಯಲಿದೆ.

ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕ್ಲೋಯೆ ಟ್ರಯಾನ್ (22ಕ್ಕೆ 3) ಮತ್ತು ತುಮಿ ಸೆಖುಖುನೆ (31ಕ್ಕೆ 3) ಪರಿಣಾಮ ಕಾರಿ ದಾಳಿ ನಡೆಸಿ ಭಾರತ ತಂಡವನ್ನು 147 ರನ್‌ಗಳಿಗೆ ನಿಯಂತ್ರಿಸಿದರು.

ಆರಂಭಿಕ ಆಟಗಾರ್ತಿ ಶಫಾಲಿ ವರ್ಮಾ (58;38ಎ, 4x7, 6x2) ಏಕಾಂಗಿ ಹೋರಾಟ ನಡೆಸಿದರು. ಅನುಷ್ಕಾ ಶರ್ಮಾ ಪದಾರ್ಪಣೆ ಪಂದ್ಯದಲ್ಲಿ 28 ರನ್ ಗಳಿಸಿ ಗಮನ ಸೆಳೆದರು. ಆದರೆ, ಉಳಿದ ಬ್ಯಾಟರ್‌ಗಳು ಪೆವಿಲಿಯನ್ ಪರೇಡ್ ನಡೆಸಿದರು.



ಎರಡು ವಿಕೆಟ್ ಪಡೆದ ಶ್ರೇಯಾಂಕಾ ಪಾಟೀಲ ಎಕ್ಸ್ ಚಿತ್ರ

ಗುರಿ ಬೆನ್ನಟ್ಟಿದ ಆತಿಥೇಯ ತಂಡವು 17 ಎಸೆತ ಬಾಕಿ ಇರುವಂತೆ 2 ವಿಕೆಟ್‌ಗೆ 148 ರನ್ ಗಳಿಸಿ ಸಂಭ್ರಮಿಸಿತು. ಆರಂಭಿಕ ಆಟಗಾರ್ತಿಯರಾದ ನಾಯಕಿ ಲಾರಾ ವೋಲ್ವಾರ್ಟ್ (54;34ಎ, 4x7, 6x1) ಮತ್ತು ಸುನೆ ಲೂಸ್ (57;46ಎ, 4x6, 6x1) ಮೊದಲ ವಿಕೆಟ್‌ಗೆ 106 ರನ್ ಸೇರಿಸಿ ಗೆಲುವಿಗೆ ಅಡಿಪಾಯ ಹಾಕಿದರು. ನಂತರ ಟಾಜ್ಮಿನ್ ಬ್ರಿಟ್ಸ್ (ಔಟಗದೇ 20) ಮತ್ತು ಅನ್ನೆರಿ ಡೆರ್ಕ್ಸೆನ್ (ಔಟಾಗದೇ 12) ತಂಡವನ್ನು ದಡ ಸೇರಿಸಿದರು. ಕನ್ನಡತಿ ಶ್ರೇಯಾಂಕಾ ಪಾಟೀಲ ಎರಡು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರ್: ಭಾರತ: 20 ಓವರ್‌ಗಳಲ್ಲಿ 147 (ಶಫಾಲಿ ವರ್ಮಾ 57, ಅನುಷ್ಕಾ ಶರ್ಮಾ 28, ಸ್ಮೃತಿ ಮಂದಾನ 12, ಹರ್ಮನ್‌ಪ್ರೀತ್ ಕೌರ್ 12; ಕ್ಲೋಯೆ ಟ್ರಯಾನ್ 22ಕ್ಕೆ 3, ತುಮಿ ಸೆಖುಖುನೆ 31ಕ್ಕೆ 3). ದಕ್ಷಿಣ ಆಫ್ರಿಕಾ: 17.1 ಓವರ್‌ಗಳಲ್ಲಿ 2 ವಿಕೆಟ್‌ಗೆ 148 (ಲಾರಾ ವೋಲ್ವಾರ್ಟ್ 54, ಸುನೆ ಲೂಸ್ 57; ಶ್ರೇಯಾಂಕಾ ಪಾಟೀಲ 35ಕ್ಕೆ 2). ಫಲಿತಾಂಶ: ದಕ್ಷಿಣ ಆಫ್ರಿಕಾ ತಂಡಕ್ಕೆ 8 ವಿಕೆಟ್‌ಗಳ ಗೆಲುವು. ಪಂದ್ಯದ ಆಟಗಾರ್ತಿ: ಕ್ಲೋಯೆ ಟ್ರಯಾನ್

ವಿಶ್ವಕಪ್ ಟೂರ್ನಿಯವರೆಗೆ ಅಜಿತ್ ಅಗರಕರ್ ಮುಂದುವರಿಕೆ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಸೀನಿಯರ್ ತಂಡದ ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಅವರ ಕಾರ್ಯಾವಧಿಯನ್ನು ಮುಂದಿನ ವರ್ಷದ ಏಕದಿನ ವಿಶ್ವಕಪ್ ಟೂರ್ನಿಯವರೆಗೂ ಮುಂದುವರಿಸಲಾಗಿದೆ.



ಅಜಿತ್ ನೇತೃತ್ವದ ಸಮಿತಿಯು ಅಕ್ಟೋಬರ್ 2023ರಿಂದ 2026ರ ಮಾರ್ಚ್‌ವರೆಗೆ ತಂಡಗಳನ್ನು ಆಯ್ಕೆ ಮಾಡಿತ್ತು. ಅದರಲ್ಲಿ ತಂಡವು ನಾಲ್ಕು ಐಸಿಸಿ ಟೂರ್ನಿಗಳ ಫೈನಲ್ ಪ್ರವೇಶಿಸಿತ್ತು. ಎರಡು ಬಾರಿ ಟಿ20 ವಿಶ್ವಕಪ್ ಮತ್ತು ಚಾಂಪಿಯನ್ಸ್ ಟ್ರೋಫಿ ಗೆದ್ದಿತ್ತು.

‘ಅಜಿತ್ ಅಗರಕರ್ ಅವರು ತಮ್ಮ ಕಾರ್ಯಾವಧಿ ವಿಸ್ತರಣೆಗೆ ಮನವಿ ಮಾಡಿಲ್ಲ. ಆದರೆ ಆಯ್ಕೆಗಾರರನ್ನು ನಾಲ್ಕು ವರ್ಷಗಳವರೆಗೆ ಅವಧಿ ವಿಸ್ತರಣೆ ಮಾಡುವ ನಿಯಮದ ಅವಕಾಶ ಇದೆ. ಆದರೂ ಜೂನಿಯರ್ ಮತ್ತು ಸೀನಿಯರ್ ಸಮಿತಿಗಳಲ್ಲಿ ಒಟ್ಟು ಐದು ವರ್ಷದವರೆಗೆ ಹುದ್ದೆಯಲ್ಲಿರಬಹುದು. ಇಲ್ಲಿ ಅಜಿತ್ ಅವರ ಗುತ್ತಿಗೆಯನ್ನು ಪರಿಷ್ಕರಿಸಲಾಗಿದೆ’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಅಜಿತ್ ಸಮಿತಿಯ ಅವಧಿಯಲ್ಲಿ ಟೆಸ್ಟ್ ಕ್ರಿಕೆಟ್‌ನಿಂದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರು ನಿವೃತ್ತಿ ಪಡೆದಿದ್ದರು. ಅನುಭವಿ ವೇಗಿ ಮೊಹಮ್ಮದ್ ಶಮಿ ಅವರಿಗೆ ಅಂತರ ರಾಷ್ಟ್ರೀಯ ಕ್ರಿಕೆಟ್ ಮರಳುವ ಅವಕಾಶ ಇನ್ನೂ ನೀಡಿಲ್ಲದಿರುವುದು ಬಹಳಷ್ಟು ಚರ್ಚೆಗೆ ಗ್ರಾಸವಾಗಿದೆ. ಟೆಸ್ಟ್ ಮತ್ತು ಏಕದಿನ ಕ್ರಿಕೆಟ್ ತಂಡದ ನಾಯಕ ಶುಭಮನ್ ಗಿಲ್ ಅವರನ್ನೂ ಹೋದ ಟಿ20 ವಿಶ್ವಕಪ್ ಟೂರ್ನಿಯ ತಂಡಕ್ಕೆ ಆಯ್ಕೆ ಮಾಡಿರಲಿಲ್ಲ. ಅವರ ಬದಲಿಗೆ ದೇಶಿ ಟೂರ್ನಿಗಳಲ್ಲಿ ಉತ್ತಮವಾಗಿ ಆಡಿದ್ದ ಇಶಾನ್ ಕಿಶನ್ ಅವಕಾಶ ಪಡೆದಿದ್ದರು.

ಕರೋಟಿರ ತಂಡಕ್ಕೆ ರೋಚಕ ಜಯ

ನಾಪೋಕ್ಲು (ಕೊಡಗು ಜಿಲ್ಲೆ): ಕರೋಟಿರ ತಂಡವು ಇಲ್ಲಿ ನಡೆಯುತ್ತಿರುವ ಚೇನಂಡ ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ಭಾನುವಾರ 5-4ರಿಂದ ನಾಯಕಂಡ ವಿರುದ್ಧ ‘ಟೈ ಬ್ರೇಕರ್’ನಲ್ಲಿ ರೋಚಕ ಗೆಲುವು ಪಡೆಯಿತು.

ಇದೇ ರೀತಿ, ಮುಕ್ಕಾಟಿರ (ಮೂವತ್ತೊಕ್ಲು) 2-1 ರಿಂದ ಮಾಚಂಡ ವಿರುದ್ಧ ಹಾಗೂ ನಾಗಂಡ 2-0ಯಿಂದ ತೀತಿಮಾಡ ವಿರುದ್ಧ ಟೈಬ್ರೇಕರ್‌ನಲ್ಲಿ ಗೆಲುವು ಸಾಧಿಸಿದವು.

ಉಳಿದಂತೆ, ಚಂದುರ 1-0 ರಿಂದ ಮಾಚಮಂಡ ವಿರುದ್ಧ; ಅಪ್ಪನೆರವಂಡ 3-2ರಿಂದ ಚಿಂಡಮಾಡ ವಿರುದ್ಧ; ಮುಕ್ಕಾಟಿರ (ಪುಲಿಕೋಟು) 4-1ರಿಂದ ಶಾಂತೆಯಂಡ ವಿರುದ್ಧ; ಬಿದ್ದಾಟಂಡ 4-0ಯಿಂದ ಮಲ್ಲಜ್ಜಿರ ವಿರುದ್ಧ; ಮಣವಟ್ಟಿರ 3-1ರಿಂದ ಅಲ್ಲಪಂಡ ವಿರುದ್ಧ; ನಾಪಂಡ 2-0ಯಿಂದ ಚೌರೀರ ವಿರುದ್ಧ; ಸೋಮೆಯಂಡ 3-0ಯಿಂದ ಮಳವಂಡ ವಿರುದ್ಧ ಹಾಗೂ ನೆರವಂಡ 4-0ಯಿಂದ ಮಾದೆಯಂಡ ವಿರುದ್ಧ ಗೆಲುವು ಪಡೆದವು. ಮುಕ್ಕಾಟಿರ (ಹರಿಹರ) 2-0 ಅಂತರದಿಂದ ಐತಿಚಂಡ ವಿರುದ್ಧ; ಬೊಟ್ಟೋಳಂಡ 1-0ಯಿಂದ ಸುಳ್ಳಿಮಾಡ ವಿರುದ್ಧ; ಕೊಲ್ಲಿರ 4-1ರಿಂದ ಚೆಂಗಲಂಡ ವಿರುದ್ಧ; ಅರಮನೆಮಾಡ 1-0ರಿಂದ ಉದ್ದಿನಡಂಡ ವಿರುದ್ಧ; ನಂದೇಟಿರ 1-0ಯಿಂದ ಪಾಲೆಕಂಡ ವಿರುದ್ಧ ಗೆಲುವು ಸಾಧಿಸಿದವು.

ಮಧ್ಯಾಹ್ನದವರೆಗಿನ ಬಿಸಿಲು ಪಂದ್ಯಗಳ ಕಾವನ್ನು ಹೆಚ್ಚಿಸಿದರೆ, ಮಧ್ಯಾಹ್ನ ಸುರಿದ ಮಳೆ ಐದು ಪಂದ್ಯಗಳಿಗೆ ಅಡ್ಡಿಯಾಯಿತು.



ಕರ್ನಾಟಕದ ಮಾಜಿ ಟೇಬಲ್ ಟೆನಿಸ್ ಆಟಗಾರರು, ಚೆನ್ನೈ ಲಯನ್ಸ್ ತಂಡದ ಮಾಲೀಕರಾದ ಜಿ.ಎಸ್. ರವಿ ಮತ್ತು ವಿನಯ್‌ಚಂದ್ರ ಅವರು ಭಾನುವಾರ ಬೆಂಗಳೂರಿನಲ್ಲಿ ಟಿ.ಟಿ ಮಹಿಳಾ ಸಿಂಗಲ್ಸ್ ರಾಷ್ಟ್ರೀಯ ಚಾಂಪಿಯನ್ ಯಶಸ್ವಿನಿ ಘೋರ್ಪಡೆ ಅವರಿಗೆ ₹ 2.5 ಲಕ್ಷ ನಗದು ಮತ್ತು ₹80 ಸಾವಿರ ಮೌಲ್ಯದ ಆಟದ ಸಲಕರಣೆಗಳನ್ನು ವಿತರಿಸಿದರು

ವಿಜಯಪುರ; ಮೇ 17ರಿಂದ ರಾಜ್ಯ ಬ್ಯಾಡ್ಮಿಂಟನ್

ಪ್ರಜಾವಾಣಿ ವಾರ್ತೆ



ಕುಮಾರ ಬಂಗಾರಪ್ಪ

ವಿಜಯಪುರ: ‘ವಿಜಯಪುರದಲ್ಲಿ ಮೇ 17 ರಿಂದ 25ರವರೆಗೆ ರಾಜ್ಯ ಬ್ಯಾಡ್ಮಿಂಟನ್ ಟೂರ್ನಿ ಆಯೋಜಿಸಲಾಗುವುದು’ ಎಂದು ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ) ಅಧ್ಯಕ್ಷ ಕುಮಾರ ಬಂಗಾರಪ್ಪ ಹೇಳಿದರು.

‘13 ಮತ್ತು 17 ವರ್ಷ ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಟೂರ್ನಿ ನಡೆಯಲಿದೆ. ಮುಂದಿನ ವಾರದಿಂದ ಟೂರ್ನಿಗೆ ನೋಂದಣಿ ಪ್ರಕ್ರಿಯೆ ಆರಂಭವಾಗಲಿದೆ. ರಾಜ್ಯ, ರಾಷ್ಟ್ರ-ಮಟ್ಟದ ಒಂದು ಸಾವಿರ ಸ್ಪರ್ಧಿಗಳು ಭಾಗವಹಿಸುವ ನಿರೀಕ್ಷೆ ಇದೆ. ಮೊದಲ ನಾಲ್ಕು ದಿನ ಅರ್ಹತಾ ಸುತ್ತಿನ ಪಂದ್ಯಗಳು ನಡೆಯಲಿವೆ. ನಂತರ ಪ್ರಶಸ್ತಿ ಮುಖ್ಯ ಪಂದ್ಯಗಳು ನಡೆಯಲಿವೆ’ ಎಂದು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಭಾರತ ಬ್ಯಾಡ್ಮಿಂಟನ್ ಸಂಸ್ಥೆಯು (ಬಿಎಐ) ಈ ಬಾರಿ ರಾಜ್ಯದಲ್ಲಿ ಏಳು ಬ್ಯಾಡ್ಮಿಂಟನ್ ಟೂರ್ನಿಗಳನ್ನು ಆಯೋಜಿಸಲು ಅವಕಾಶ ನೀಡಿದೆ. ವಿಜಯಪುರ, ಬೆಳಗಾವಿ, ಧಾರವಾಡ, ಮಣಿಪಾಲ, ಚಿಕ್ಕಮಗಳೂರು ಮತ್ತು ಬೆಂಗಳೂರಿನಲ್ಲಿ ಟೂರ್ನಿಗಳನ್ನು ಆಯೋಜಿಸಲಾಗುವುದು’ ಎಂದರು.

ಬಾಕ್ಸಿಂಗ್: ರಾಜ್ಯದ ಸಂಭ್ರಮಾಗೆ ಚಿನ್ನ



ಬೆಂಗಳೂರು: ಕರ್ನಾಟಕದ ಉದಯೋನ್ಮುಖ ಬಾಕ್ಸರ್ ಸಂಭ್ರಮಾ ಅವರು ಗುವಾಹಟಿಯಲ್ಲಿ ಭಾನುವಾರ ಮುಕ್ತಾಯಗೊಂಡ 8ನೇ ಯುವ ರಾಷ್ಟ್ರೀಯ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದರು.

19 ವರ್ಷದೊಳಗಿನ (45- 48 ಕೆಜಿ) ವಿಭಾಗದ ಬಾಲಕಿಯರ ಸ್ಪರ್ಧೆಯಲ್ಲಿ ಸಂಭ್ರಮಾ ಚಿನ್ನ ಜಯಿಸಿದರು. ಕೂಟದಲ್ಲಿ ಕರ್ನಾಟಕಕ್ಕೆ ದೊರೆತ ಏಕೈಕ ಪದಕ ಇದಾಗಿದೆ. ಈ ಗೆಲುವಿನೊಂದಿಗೆ ಸಂಭ್ರಮಾ ಬಾಲಿಯಲ್ಲಿ ನಡೆಯಲಿರುವ ಯೂತ್ ಏಷ್ಯನ್ ಗೇಮ್ಸ್‌ಗೆ ಅರ್ಹತೆ ಪಡೆದಿದ್ದಾರೆ.

ಬೆಂಗಳೂರಿನ ಸಂಭ್ರಮಾ ಫೈನಲ್‌ನಲ್ಲಿ 5-0 ಅಂತರದಿಂದ ಹರಿಯಾಣದ ಗುಂಜಾನ್ ಅವರನ್ನು ಸುಲಭವಾಗಿ ಮಣಿಸಿದರು. ಗುಂಜಾನ್, ವಿಶ್ವ ಯೂತ್ ಬೆಳ್ಳಿ ಪದಕ ವಿಜೇತೆಯಾಗಿದ್ದಾರೆ. ಸೆಮಿಫೈನಲ್‌ನಲ್ಲಿ ಅವರು 5-0ಯಿಂದ ಮಣಿಪುರದ ಲಂಚಲು ಗ್ಯಾಂಗ್ಮೇಯಿ ಅವರನ್ನು ಮಣಿಸಿದ್ದರು. ಸಂಭ್ರಮ ಅವರು ಬಳ್ಳಾರಿಯ ಇನ್‌ಸ್ಪೈರ್ ಇನ್‌ಸ್ಟಿಟ್ಯೂಟ್‌ನಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಇಬ್ಬರು ಬಾಲಕರು ಸೇರಿದಂತೆ ಕರ್ನಾಟಕದ ಐವರು ವಿವಿಧ ಕೆಜಿ ವಿಭಾಗಗಳ ಸ್ಪರ್ಧೆಗಳಲ್ಲಿ ಕ್ವಾರ್ಟರ್‌ಫೈನಲ್ ತಲುಪಿದ್ದರು. ಆದರೆ, ಸಂಭ್ರಮಾ ಮಾತ್ರ ಈ ಹಂತ ದಾಟಿದ್ದರು.

24ರಿಂದ ತುಮಕೂರಿನಲ್ಲಿ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್ ಫೆಡರೇಷನ್ ಸ್ಪರ್ಧೆ

ನವದೆಹಲಿ (ಪಿಟಿಐ): ತುಮಕೂರಿನಲ್ಲಿ ಇದೇ 24ರಿಂದ 26ರವರೆಗೆ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್ ಫೆಡರೇಷನ್ ಸ್ಪರ್ಧೆ ನಡೆಯಲಿದ್ದು, ದೇಶದ ಅಗ್ರ ಕ್ರೀಡಾಪಟುಗಳು ಭಾಗವಹಿಸುವ ನಿರೀಕ್ಷೆಯಿದೆ.

ಮುಂದಿನ ತಿಂಗಳು ಹಾಂಗ್‌ಕಾಂಗ್‌ನಲ್ಲಿ ಏಷ್ಯನ್ 20 ವರ್ಷದೊಳಗಿನವರ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ನಡೆಯಲಿದೆ. ಇದಕ್ಕೆ ಟಿಕೆಟ್ ಪಡೆಯುವ ಗುರಿ ಹೊಂದಿರುವ ಕ್ರೀಡಾಪಟುಗಳು ತುಮಕೂರಿನಲ್ಲಿ ಮೂರು ದಿನ ನಡೆಯುವ ಸ್ಪರ್ಧೆಯಲ್ಲಿ ಎಎಫ್‌ಐ ಅರ್ಹತಾ ಮಾನದಂಡ ಸಾಧಿಸಬೇಕಾಗುತ್ತದೆ.

INDIAN ATHLETICS

ಮುಂಬರುವ ಏಷ್ಯನ್ ಕ್ರೀಡಾಕೂಟಕ್ಕೆ ಆಯ್ಕೆ ಮಾನದಂಡಗಳನ್ನು ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಭಾನುವಾರ ಪ್ರಕಟಿಸಿದೆ. ಏಷ್ಯನ್ 20 ವರ್ಷದೊಳಗಿನವರ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಮೇ 28ರಿಂದ 31ರವರೆಗೆ ನಡೆಯಲಿದೆ.